ಸಂಸ್ಕಾರ ತರಂಗಿಣೀ

ಪುಷ್ಪ – 14

ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹಃ

ಭಾಗ 2

(ಮೂಲ ಋಷಿ ವಾಕ್ಯಗಳೊಂದಿಗೆ, ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥ)

– ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ಶ್ರೀಮತಿ ಭಾರತೀ ಶರ್ಮಾ
ಅಕ್ಷರ ಜೋಡಣೆ

ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಅನುವಾದಕ ಲೇಖಕರು
ಮತ್ತು ಪ್ರಕಾಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು
ಸಂಚಾಲಕರು

ವಿದ್ವಾನ್ ವೇ॥ಬ್ರ॥
ಶ್ರೀ ಶಿವಕುಮಾರ ಅವಧಾನಿಗಳು
ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥
ಶ್ರೀ ಕಿರಣ ಅವಧಾನಿಗಳು
ಪ್ರಧಾನ ಮಾರ್ಗದರ್ಶಕರು

ವೇದವೇದಾಗ ಮಹಾ ಮಹೋಪಾಧ್ಯಾಯರು
ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು
ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥
ಶ್ರೀ ವೆಂಕಟೇಶ ಅವಧಾನಿಗಳು
ಸಲಹೆಗಾರರು

ವಿದ್ವಾನ್ ವೇ॥ಬ್ರ॥
ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು
ಮಾರ್ಗದರ್ಶಕರು

ಸಂಸ್ಕಾರ ತರಂಗಿಣೀ

ಪುಷ್ಪ – 14

ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹಃ

ಭಾಗ 2

(ಮೂಲ ಋಷಿ ವಾಕ್ಯಗಳೊಂದಿಗೆ, ಪ್ರತಿ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥ)

–: ವಿಷಯ ಸೂಚಿ :–

ಗ್ರಂಥನಾಮ – I

ವಿಷಯಸೂಚಿ – II

ಗುರುವಂದನೆ – IV

ಕೃತಜ್ಞತೆಗಳು – V

ಸಂಪಾದಕೀಯ – VI

ನಮ್ಮ ಪ್ರಕಟಣೆಗಳು – VII

ಪ್ರತಿಗಳು ದೊರೆಯುವಸ್ಥಳಗಳು – X

ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು– XI

ಪ್ರಾಸ್ತಾವಿಕ ನುಡಿ – ಡಾ॥ವೇ॥ಬ್ರ॥ ಶ್ರೀಸುಬ್ರಾಯ ವಿ. ಭಟ್ಟರು – XIV

ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮರು – XVIII

1 ತಿಥ್ಯಾದಿ ಗಂಡಾಂತ ಶಾಂತಿಃ (ಉತ್ತರ ಗಾರ್ಗ್ಯಃ) 1

2 ದರ್ಶ ಜನನಶಾಂತಿಃ (ನಾರದಃ) 4

3 ಸಿನೀವಾಲೀ ಜನನಶಾಂತಿಃ (ಉತ್ತರ ಗಾರ್ಗ್ಯಃ) 7

4 ಕೃಷ್ಣಚತುರ್ದಶೀ ಜನನಶಾಂತಿಃ (ಉತ್ತರ ಗಾರ್ಗ್ಯಃ) 12

5 ದಿನಕ್ಷಯಾದಿ ಸರ್ವಗಂಡಾಂತ ಶಾಂತಿಃ (ಉತ್ತರಗಾರ್ಗ್ಯಃ) 16

6 ವೈಧೃತೀ ವ್ಯತೀಪಾತ ಸಂಕ್ರಾಂತ್ಯಾದಿ ಜನನಶಾಂತಿಃ (ಶೌನಕಃ) 19

7 ವಿಷಘಟಿಕಾ ಜನನಶಾಂತಿಃ (ವೃದ್ಧಗಾರ್ಗ್ಯಃ) 23

8	ಗ್ರಹಯೋಗ ಶಾಂತಿಃ (ಮದನರತ್ನ ಯಮಲಃ)	25
9	ಗ್ರಹಣ ಜನನಶಾಂತಿಃ (ಶೌನಕಃ)	28
10	ಸೂರ್ಯಚಂದ್ರ ಗ್ರಹಣ ಶಾಂತಿಃ	32
11	ಶಿಶುರಕ್ಷಾ ವಿಧಿಃ (ನೃಸಿಂಹ ಪ್ರಯೋಗ ಪಾರಿಜಾತಂ)	33
12	ಯಮಳ ಜನನಶಾಂತಿಃ (ಕಾರಿಕಾ/ಬ್ರಾಹ್ಮಣ ಮಂತ್ರಃ)	36
13	ಪ್ರತಿಕೂಲಾದಿ ಶಾಂತಿಃ (ಸ್ಮೃತಿಚಂದ್ರಿಕಾಯಾಂ ಭೃಗುಃ)	38
14	ತಟಾಕಾದೌ ಮೃತದೋಷ ಶಾಂತಿಃ (ಶೌನಕಃ)	44
15	ಆಕಸ್ಮಿಕ ಪ್ರಾಸಾದಪತನ ಶಾಂತಿಃ (ಗರ್ಗಃ)	47
16	ನಾನೋತ್ಪಾತ ಶಾಂತಿಃ (ಗರ್ಗಃ)	51
17	ಜನಮಾರೀಶಾಂತಿಃ (ಗರ್ಗಃ)	62
18	ಅನಾವೃಷ್ಟಿಶಾಂತಿಃ (ಹೇಮಾದ್ರೌ – ನೃಸಿಂಹಪುರಾಣೇ)	64
19	ಪರ್ಜನ್ಯಶಾಂತಿಃ (ಬೋಧಾಯನಃ)	65
20	ರಜಸ್ವಲಾಶಾಂತಿಃ (ಶೌನಕಃ)	68
21	ಶ್ವಗ್ರಹ ಗೃಹೀತಶಾಂತಿಃ	74
22	ಶಂಖಗ್ರಹಗೃಹೀತ ಶಾಂತಿಃ	77
23	ವಾಯಸ ಗೃಹಪ್ರವೇಶ ಶಾಂತಿಃ –	79-82

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬಃ ಸ ಮೇ ಮುನಿ: ॥
ಸಂತಃ ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಭೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ॥
ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನು ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ ತೂ ಹೆ ಮಾಲಿಕ್, ಜೋಲೀ ಮೇರಿಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್,**
ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ.

2. **ಪೂಜ್ಯ ಶ್ರೀ ಅದ್ವೈಯಾನಂದೇಂದ್ರ ಸ್ವಾಮಿಗಳು,** ಅದ್ವೈತಾಶ್ರಮ ಬೆಂಗಳೂರು.

3. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು**
ಬೃಹಸ್ಪತ್ಯಾಚಾರ್ಯರು, ಮತ್ತೂರು.

4. **ಶ್ರೀಯುತ ಶರಚ್ಚಂದ್ರರವರು,** ಐ. ಜಿ. ಪಿ. ಕರ್ನಾಟಕ ಪೋಲೀಸ್.

5. **ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್,** ಮೀಮಾಂಸಾ ಶಾಸ್ತ್ರ
ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.

6. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ.

7. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು,** ಎಸ್.ಎಲ್.ಎನ್. ರೇಡಿಯೋಸ್

8. **ಶ್ರೀಯುತ ಗಣೇಶ್‌ರವರು,** ಉದ್ಯಮಿಗಳು, ಬೆಂಗಳೂರು.

9. **ಶ್ರೀಮತಿ ಶಾಂತಲಕ್ಷ್ಮಿ ಶರ್ಮಾ,** ಅಗ್ರಹಾರ

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ದೂ : 9686497982

ಸಂಚಾಲಕರು :

ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಮಾರ್ಗದರ್ಶಕರು :

ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ಮೀನಾಕ್ಷೀ ಸುಂದರ ಘನಪಾಠಿಗಳು,ಶ್ರೀಮಠ, ಶೃಂಗೇರಿ
ವೇ॥ ಬ್ರ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.
ವೇ॥ ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	:	ಶ್ರೀಮತಿ ಭಾರತೀ ಶರ್ಮಾ ವೇ॥ ಬ್ರ॥ ಶ್ರೀ ಶಕ್ತಿಧರ ಶರ್ಮಾ
ವರ್ಷ	:	ಸೆಪ್ಟೆಂಬರ್ 2019 (ವಿಕಾರಿ ಸಂವತ್ಸರ, ಭಾದ್ರಪದ ಮಾಸ)
ಪ್ರತಿಗಳು	:	1000
ಪುಟಗಳು	:	XXII + 82 = 104
ಪುಸ್ತಕದ ಅಳತೆ	:	ಡೆಮ್ಮಿ 1/8
ಪೇಪರ್	:	70 ಜಿ.ಎಸ್.ಎಂ. ಮ್ಯಾಪ್ಲಿತೊ
ಹಕ್ಕುಗಳು	:	ಸಂಪೂರ್ಣ ಲೇಖಕರದ್ದು
ಮೌಲ್ಯ	:	**'ಅಮೂಲ್ಯ'**
ಪ್ರೋತ್ಸಾಹಯುತ ಕಾಣಿಕೆ	:	ರೂ. 140/–
ಮುದ್ರಕರು	:	ವಿದ್ಯಾಭಾರತಿ ಪ್ರೆಸ್ ಶೃಂಗೇರಿಮಠ, ಬೆಂಗಳೂರು.

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1. **ಅನುಷ್ಠಾನ ತರಂಗಿಣೀ**
   (ನಿತ್ಯ ಪೂಜಾವಿಧಿ, ಯತಿ ಆರಾಧನಾಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)
2. **ಸಂಸ್ಕಾರ ತರಂಗಿಣೀ ಪುಷ್ಪ – 1** (ಪುಂಸವನ ಮತ್ತು ಸೀಮಂತೋನ್ನಯನ)
3. **ಸಂಸ್ಕಾರ ತರಂಗಿಣೀ ಪುಷ್ಪ – 2**
   (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)
4. **ಸಂಸ್ಕಾರ ತರಂಗಿಣೀ ಪುಷ್ಪ – 3**
   (ಚೂಡಾಕರ್ಮ – ಅಕ್ಷರಾರಂಭ ಮತ್ತು ಉಪನಯನ)
5. **ಸಂಸ್ಕಾರ ತರಂಗಿಣೀ ಪುಷ್ಪ – 4**
   (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭವದ್ಗೀತೆಯಲ್ಲಿ ಕರ್ಮಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)
6. **ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ – 5**
   ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
   (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)
7. **ವೇದನಾದ ಸಂಗಮ DVD ಭಾಗ – 1** (ಪ್ರಪ್ರಥಮಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ,ಕೀರ್ತನೆಗಳು.)
8. **ಸಂಸ್ಕಾರ ತರಂಗಿಣೀ ಪುಷ್ಪ – 6** (ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})
9. **ಸಂಸ್ಕಾರ ತರಂಗಿಣೀ ಪುಷ್ಪ – 7**
   (ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ,ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರ ತರಂಗಿಣೀ ಪುಷ್ಪ 1, 2 ದ್ವಿತೀಯ ಮುದ್ರಣ**
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)
11. **ಸಂಸ್ಕಾರ ತರಂಗಿಣೀ ಪುಷ್ಪ – 3 ದ್ವಿತೀಯ ಮುದ್ರಣ**
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)
12. **ಸಂಸ್ಕಾರ ತರಂಗಿಣೀ ಪುಷ್ಪ – 8** (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)
13. **ವೇದನಾದ ಸಂಗಮ DVD – 2**
(ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)
14. **ಸಂಸ್ಕಾರ ತರಂಗಿಣೀ ಪುಷ್ಪ – 9** (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾ ಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)
15. **ಸಂಸ್ಕಾರ ತರಂಗಿಣೀ ಪುಷ್ಪ– 10** (ಧರ್ಮ ಸಂದೇಶ – ಸಂಸ್ಕೃತಿ,ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)
16. **ಸಂಸ್ಕಾರ ತರಂಗಿಣೀ ಪುಷ್ಪ –11** (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ–ಭಾಗ–1)
17. **ಸಂಸ್ಕಾರ ತರಂಗಿಣೀ ಪುಷ್ಪ – 10 – ದ್ವಿತೀಯ ಮುದ್ರಣ** (ಧರ್ಮ ಸಂದೇಶ ಸಂಸ್ಕೃತಿ ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)
18. **ಸಂಸ್ಕಾರ ತರಂಗಿಣೀ ಪುಷ್ಪ – 12 ಪ್ರೇತಕಾಂಡ ಭಾಗ–1** (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ ಹಾಗೂ ವೆಂಕಟರಾಮಾವಧಾನೀಯ ಪ್ರಯೋಗ ರತ್ನಾಕರ)
19. **ಸಂಸ್ಕಾರ ತರಂಗಿಣೀ ಪುಷ್ಪ – 13 ಪಿತೃಮೇಧಕಾಂಡ ಭಾಗ–1** (ಶ್ರೀ ಯಜುರ್ವೇದ ಆಪಸ್ತಂಬ ಅಪರಸೂತ್ರ, ಗೋಪಾಲ + ಕಪರ್ದಿ ಭಾಷ್ಯ, ಕಾರಿಕೆ, ಪ್ರಯೋಗ ಮತ್ತು ಮಂತ್ರಗಳಿಗೆ ಸಾಯಣಭಾಷ್ಯ)
20. **ಸಂಸ್ಕಾರ ತರಂಗಿಣೀ ಪುಷ್ಪ – 4 – ದ್ವಿತೀಯ ಮುದ್ರಣ** (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)

ಮುಂದಿನ ಪ್ರಕಟಣೆಗಳು

1. ಸಂಸ್ಕಾರ ತರಂಗಿಣೀ ಪುಷ್ಪ – 15 ಪಿತೃಮೇಧ ಕಾಂಡ ಭಾಗ–2
(ಯಜುರ್ವೇದ ಆಪಸ್ತಂಬೀಯ ಅಪರಸೂತ್ರ – ವ್ಯಾಖ್ಯಾನ – ಕಾರಿಕಾವಳಿ – ಪ್ರಯೋಗ ಹಾಗೂ ಮಂತ್ರಗಳಿಗೆ ಭಾಷ್ಯಾರ್ಥ – ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ)

2. ಸಂಸ್ಕಾರ ತರಂಗಿಣೀ ಪುಷ್ಪ – 16ಪಿತೃಮೇಧ ಕಾಂಡ ಭಾಗ – 3
(ಯಜುರ್ವೇದ ಆಪಸ್ತಂಬೀಯ ಅಪರಸೂತ್ರ – ವ್ಯಾಖ್ಯಾನ – ಕಾರಿಕಾವಳಿ – ಪ್ರಯೋಗ ಹಾಗೂ ಮಂತ್ರಗಳಿಗೆ ಭಾಷ್ಯಾರ್ಥ – ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ)

3. ಸಂಸ್ಕಾರ ತರಂಗಿಣೀ ಪುಷ್ಪ – 17 ಆಪಸ್ತಂಬೀಯ ಧರ್ಮಸೂತ್ರ

4. ಸಂಸ್ಕಾರ ತರಂಗಿಣೀ ಪುಷ್ಪ – 18 ಶ್ರಾದ್ಧ ಪ್ರಕರಣ

ಪ್ರತಿಗಳು ದೊರೆಯುವ ಸ್ಥಳಗಳು

1. **ಎ.ಸಿ. ಶಕ್ತಿಧರ ಶರ್ಮಾ**
   ಮೊ. : 9686497982, ಈ–ಮೇಲ್: acs.shimoga@gmail.com
   Karnataka Bank A/c. No. : 7322500102385001
   ಶಂಕರಮಠ ಶಾಖೆ, ಶಿವಮೊಗ್ಗ
   IFSC Code : KARB 0000745

2. **ವೇದಾಂತ ಬುಕ್ ಹೌಸ್**
   ಉಮಾ ಟಾಕೀಸ್ ಪಕ್ಕ, ಬೆಂಗಳೂರು

3. **ಪ್ರಚೇತಾ ಬುಕ್ ಹೌಸ್**
   ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್ ಟೆಂಪಲ್ ರಸ್ತೆ, ಬೆಂಗಳೂರು

4. **ಶೃಂಗೇರಿ ಶಂಕರ ಮಠ**
   ಉಮಾ ಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು

5. **ರಾಜಾರಾಮ್ ಬುಕ್ ಹೌಸ್**
   ಶಿವಮೊಗ್ಗ

6. **ಉಡುಪಿ ಸ್ಟೋರ್ಸ್**
   ಗಾಂಧಿನಗರ, ಶಿವಮೊಗ್ಗ

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು? ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರ ವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ. ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ.

ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ..., ಪ್ರಯೋಗ ಅದರ ತಿಳಿ ಕನ್ನಡ ಅರ್ಥ..., ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ.

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತ ಗೀತೆ, ಗುರುಗೀತೆ, ಯತಿ ಆರಾಧನಾ ಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿ ಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ ಹಾಗೂ ಶರ್ಮರ ಮಡದಿಯಾದ ಚಿ. ಸೌ. ಭಾರತಿಯವರಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ನಿಖರವಾಗಿ ತಿಳಿಸುವ ' ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾ ಸಹಸ್ರನಾಮ', 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿ ಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀ ಸೂಕ್ತ, ನಾರಾಯಣ ಸೂಕ್ತ, ದುರ್ಗಾ ಸೂಕ್ತಗಳಿರುವ ಧ್ವನಿ ಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠ ಶಾಲೆಯವರು, ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ

ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಮತ್ತೂ 2019ರಲ್ಲಿ ಮೈಸೂರಿನ ಅರ್ಜುನ ಗುರೂಜೀ ಅವರಿಂದ 'ಗುರುಸೇವಾ ರತ್ನ' ಸನ್ಮಾನಕ್ಕೂ ಭಾಜನರಾಗಿರುತ್ತಾರೆ.

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 38 ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ.ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ.ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರ ಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅರ್ಚಕರು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ. ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶರ್ಮ್–

ವೇ॥ ಬ್ರ॥ ಶ್ರೀ **ಮಾರ್ಕಂಡೇಯಾವಧಾನಿ,** ಮತ್ತೂರು, ಶಿವಮೊಗ್ಗ

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋऽರ್ಥೋ ಧರ್ಮಃ' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ

ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಫುತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು (ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ (ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತ ಸೂತ್ರಗಳು, ಸಾಕ್ಷಾತ್‌ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯ ಸೂತ್ರಗಳು, ಗೃಹಸ್ಥರು ಅನಷ್ಠಾನಮಾಡ ಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮ ಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬ ಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ.

ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪ ಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮ ಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(23 ಪ್ರಶ್ನೆಗಳು) ಶ್ರೌತ ಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು (25,26,27) ಗೃಹ್ಯ ಸೂತ್ರಗಳು. ಈ ಮೂರರಲ್ಲಿ ಕೊನೆಯದು (27ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. 28,29 ನೇ ಪ್ರಶ್ನೆಗಳು ಧರ್ಮ ಸೂತ್ರಗಳು. 30ನೇ ಪ್ರಶ್ನೆ ಶುಲ್ಬ ಸೂತ್ರಗಳು. ಹೀಗೆ ಒಟ್ಟಿಗೆ 30 ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿ ಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿ ಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ.

ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಸಂಪಾದಕರು ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಗಳಿಗೂ ಆಧಾರ, ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ !.

ಆದರೆ, ಅವರೆಂದಿಗೂ (ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇ ಇಲ್ಲ !!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮ ಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು (ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು **'ಇದೇ ನಮ್ಮ ಸಂಪ್ರದಾಯ – ಆಚಾರ'** ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ

ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೆ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಕಲ್ಪಿಸಿಕೊಂಡು ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ **ಸಂಪ್ರದಾಯ** ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು– ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥
ಮತ್ತೂ
ಶ್ರುತಿಃ ಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ (ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು, ಇದು ಸನಾತನ ಪರಂಪರೆಯ ಮೂಲ ವ್ಯವಸ್ಥೆಯಾಗಿದೆ ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು

ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬಳಸಿಕೊಳ್ಳ ಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗ ಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣುಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ (ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ,

ಹುಟ್ಟುವ ಸಮಯದಲ್ಲಿನ ಲಕ್ಷಣಗಳ ಮೇಲೆ ಕಂಡುಬರಬಹುದಾದ ಬಹಳಷ್ಟು ದೋಷಗಳನ್ನು, ನಮ್ಮ ಋಷಿಗಳು ಗುರುತಿಸಿ, ಅದರಿಂದಾಗುವ ಕೆಡಕುಗಳನ್ನು ಪಟ್ಟಿಮಾಡಿ, ಇದರಿಂದ ಪಾರಾಗಲು ಭಗವಂತನ ನಾನಾ ರೀತಿಯ ಆರಾಧನೆಗಳನ್ನು ಸೂಚಿಸಿದ್ದಾರೆ.

ಇಂತಹ ಋಷಿಪ್ರಣೀತ ವಾಕ್ಯಗಳನ್ನು ಒಳಗೊಂಡು, ಪ್ರಸ್ತುತ ಈ ಗ್ರಂಥರತ್ನವು ರಚನೆಯಾಗಿದೆ.

ಈ ಗ್ರಂಥವು ಈ ರೂಪಕ್ಕೆ ಬರಲು ಕಾರಣೀಭೂತರಾದಂತಹ ನಮ್ಮ ಎಲ್ಲಾ ಮಾರ್ಗದರ್ಶಕ ವಿದ್ವಾಂಸರುಗಳಿಗೂ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮರು
ಸಂಪಾದಕರು ಹಾಗೂ ಪ್ರಕಾಶಕರು
ಸೆಪ್ಟಂಬರ್ – 2019

1. ತಿಥ್ಯಾದಿ ಗಂಡಾಂತ ಶಾಂತಿಃ

ಅಥ ಉತ್ತರಗಾರ್ಗ್ಯಃ

ಅಭುಕ್ತೇತರ ಜಾತಾನಾಂ ಸೂತಕಾಂತ ದಿನೇsಥವಾ ।
ಶಾಂತಿಂ ಶುಭೇsಹ್ನಿ ವಾ ಕುರ್ಯಾತ್ ತಾವತ್ಪುತ್ರಂ ನಾಲೋಕಯೇತ್ ॥

ಸೂತಕದ ಕೊನೆಯದಿನ ಅಥವಾ ಒಳ್ಳೆಯ ಸುಮುಹೂರ್ತ ದಿನದಲ್ಲಿ । ಶಾಂತಿಯನ್ನು ಮಾಡಬೇಕು. ಶಾಂತಿಯನ್ನು ಮಾಡುವವರೆಗೆ ಮಗುವನ್ನು ನೋಡಬಾರದು ॥

ತಿಥಿಗಂಡೇ ತು ಅನಡ್ವಾಹಂ ನಾಕ್ಷತ್ರೇ ಧೇನುರುಚ್ಯತೇ ।
ಕಾಂಚನಂ ಲಗ್ನಚಂದ್ರೇ ತು ಗಂಡದೋಷೋ ವಿನಶ್ಯತಿ ॥

ಗಂಡತಿಥಿಯಲ್ಲಿ ಹುಟ್ಟಿದವರಿಗೆ, (ಅಂದರೆ ಪಂಚಮಿಯ ಕಡೇ ಎರಡು – ಷಷ್ಠಿಯ ಮೊದಲ ಎರಡು ಘಳಿಗೆಗಳು ಮತ್ತು ದಶಮಿಯ ಕಡೇ ಎರಡು – ಏಕಾದಶಿಯ ಮೊದಲ ಎರಡು ಘಳಿಗೆಗಳು ಹಾಗೂ ಹುಣ್ಣಿಮೆಯ ಕಡೇ ಎರಡು – ಪಾಡ್ಯದ ಮೊದಲ ಎರಡು ಘಳಿಗೆಗಳಿಗೆ ಗಂಡತಿಥಿ ಎನ್ನುತ್ತಾರೆ.) ಶಾಂತಿಗಾಗಿ ಎತ್ತನ್ನು ದಾನ ಕೊಡಬೇಕು, ಆ ಗಂಡತಿಥಿಯಲ್ಲಿನ ನಕ್ಷತ್ರದ ಶಾಂತಿಗೂ ಹಸುವನ್ನು ದಾನಕೊಡಬೇಕು । ಜನನಕಾಲದಲ್ಲಿ ಲಗ್ನದಲ್ಲಿ ಚಂದ್ರನಿದ್ದರೆ ಆಗ ಚಿನ್ನವನ್ನು ದಾನಕೊಡಬೇಕು, ಇವುಗಳಿಂದ ಗಂಡದೋಷವು ನಿವಾರಣೆಯಾಗುತ್ತದೆ ॥

ಆದ್ಯಭಾಗೇ ಪಿತುರ್ಗಂಡೇ ತ್ರಯಾಣಾಮಭಿಷೇಚನಂ ।
ಇತರತ್ರ ಶಿಶೋರ್ಮಾತುರಭಿಷೇಕಂ ಚ ಕಾರಯೇತ್ ॥

ಗಂಡತಿಥಿಯ ಆದಿಭಾಗದಲ್ಲಿ ಹುಟ್ಟಿದರೆ, ತಂದೆಗೂ ಹಾಗೂ ಶಿಶುವಿಗೂ ಮತ್ತು ತಾಯಿಗೂ ಅಭಿಷೇಕವನ್ನು ಮಾಡಬೇಕು । ಉಳಿದ ಭಾಗಗಳಲ್ಲಿ ಹುಟ್ಟಿದರೆ, ಶಿಶುವಿಗೂ ಮತ್ತು ತಾಯಿಗೆ ಅಭಿಷೇಕ ಮಾಡಬೇಕು ॥

ಉತ್ತರೇ ತಿಲಪಾತ್ರಂಸ್ಯಾತ್ ಪುಷ್ಯೇ ಗೋದಾನಮುಚ್ಯತೇ ।
ಅಜಾಪ್ರದಾನಂ ತ್ವಾಷ್ಟ್ರೇ ಚ ಪೂರ್ವಾಷಾಢೇ ಚ ಕಾಂಚನಂ ॥

ಗಂಡಯೋಗದಲ್ಲಿ ಉತ್ತರಾನಕ್ಷತ್ರದಲ್ಲಿ ಹುಟ್ಟಿದರೆ, ತಿಲಪಾತ್ರದಾನವನ್ನೂ – ಪುಷ್ಯಾನಕ್ಷತ್ರವಿದ್ದರೆ, ಗೋದಾನವನ್ನೂ । ಚಿತ್ತಾನಕ್ಷತ್ರದಲ್ಲಿ ಹುಟ್ಟಿದರೆ, ಆಡನ್ನೂ – ಪೂರ್ವಾಷಾಢಾನಕ್ಷತ್ರದಲ್ಲಿ ಹುಟ್ಟಿದರೆ ಚಿನ್ನವನ್ನೂ ದಾನಕೊಡಬೇಕು ॥

ಉತ್ತರಾ ತಿಷ್ಯ ಚಿತ್ರಾಸು ಪೂರ್ವಾಷಾಢೋದ್ಭವಸ್ಯ ಚ ।
ಕುರ್ಯಾತ್ ಶಾಂತಿಂ ಪ್ರಯತ್ನೇನ ನಕ್ಷತ್ರಾಕಾರಕಂ ಬುಧಃ ॥

ಹೀಗೆ ಗಂಡತಿಥಿಯಲ್ಲಿ, ಉತ್ತರಾ – ಪುಷ್ಯ – ಚಿತ್ತಾ – ಪೂರ್ವಾಷಾಢಾ ನಕ್ಷತ್ರಗಳಲ್ಲಿ ಹುಟ್ಟಿದವರಿಗೆ, ಮೇಲೆ ತಿಳಿಸಿದ ರೀತಿಯಲ್ಲಿ ಶಾಂತಿಯನ್ನು ಪ್ರಯತ್ನಪೂರ್ವಕವಾಗಿ ನಕ್ಷತ್ರದ ಅಧಿಪತಿಗಳಿಗೆ ಶಾಂತಿ ಮಾಡಬೇಕು ॥

ಸುವರ್ಣೇನ ತದರ್ಧೇನ ಯಥಾ ವಿತ್ತಾನುಸಾರತಃ ।
ನಕ್ಷತ್ರಾಧಿಪತೇ ರೂಪಂ ಕೃತ್ವಾ ವಸ್ತ್ರದ್ವಯಾನ್ವಿತಂ ॥

ಹೇಗೆಂದರೆ ನೂರುಗ್ರಾಂ ಚಿನ್ನದಿಂದ ಅಥವಾ ಅದರ ಅರ್ಧ ಅಥವಾ ಶಕ್ತಿಗನುಸಾರವಾಗಿ । ಆಯಾಯಾ ನಕ್ಷತ್ರಗಳ ದೇವತೆಗಳ ರೂಪಗಳನ್ನು ರಚಿಸಿ ॥

ವರುಣಸ್ಯಾರ್ಚನಂ ಕಾರ್ಯಂ ಸ್ವಸ್ತಿವಾಚನಪೂರ್ವಕಂ ।
ಶತೌಷಧಾನಿ ರತ್ನಾನಿ ಮೃತ್ತ್ಸ್ನಾಕ್ಷಲ್ಲವ ಸಂಯುತಂ ॥

ವರುಣಕಲಶದ ಜಲಕ್ಕೆ, ಓಷಧಿಸಸ್ಯಗಳ ಚಿಗುರು – ತ್ವಗಟೆ ಹಾಗೂ ಒಳ್ಳೆಯ ಮಣ್ಣನ್ನು ಹಾಕಿ । ವರುಣದೇವನ ಅರ್ಚನೆಯನ್ನು ಮಾಡಿ, ಪುಣ್ಯಾಹವನ್ನು ಮಾಡಬೇಕು ॥

ಪೂಜಾಂತೇ ಸಮಿದನ್ನಾಜ್ಯೈರ್ಹೋಮಂ ತಿಲ ಯವೈಸ್ತಥಾ ।
ತತಃ ಪೂರ್ಣಾಹುತಿಂ ಹುತ್ವಾ ವೇದಾಧ್ಯಾಯೀ ಕುಟುಂಬಿನೇ ॥

ಪೂಜೆಯ ಕೊನೆಯಲ್ಲಿ ಸಮಿತ್ತು – ಅನ್ನ – ತುಪ್ಪ – ಎಳ್ಳು – ಜವೇಗೋಧಿಗಳಿಂದ ಹೋಮಿಸಬೇಕು । ನಂತರ ಪೂರ್ಣಾಹುತಿಯನ್ನು ಮಾಡಿ, ವೇದಾಧ್ಯಯನ ಮಾಡಿರುವಂತಹ ಗೃಹಸ್ಥನಿಗೆ ॥

ಉತ್ತರಾ ಪ್ರಥಮೇಪಾದೇ ತಿಲಪಾತ್ರಂ ತಥೈವ ಚ ।
ತಿಷ್ಯೇತು ಗಾಂ ಸವತ್ಸಾಂ ಚ ಸುಶೀಲಾಂ ಚ ಪಯಸ್ವಿನೀಮ್ ॥

ಉತ್ತರಾ ನಕ್ಷತ್ರದ ಮೊದಲಪಾದದಲ್ಲಿ ಹುಟ್ಟಿರುವವನು ತಿಲಪಾತ್ರವನ್ನೂ । ಹಾಗೆಯೇ ಪುಷ್ಯನಕ್ಷತ್ರದಲ್ಲಿ ಹುಟ್ಟಿದವನು, ಕರುಸಹಿತ, ಉತ್ತಮತಳಿಯ, ಹಾಲುಕೊಡುವ ಹಸುವನ್ನು ದಾನಕೊಡಬೇಕು ॥

ಅಜಾಂ ಚಿತ್ರಾಸು ವೈ ದದ್ಯಾತ್ ಪೂರ್ವಾಷಾಢೇತು ಕಾಂಚನಂ ।
ಯವಾಂಶ್ಚ ವ್ರೀಹಿ ಮಾಷಾಂಶ್ಚ ತಿಲ ಮುದ್ಗಾನ್ ಪ್ರದಾಪಯೇತ್ ॥

ಚಿತ್ತಾದಲ್ಲಿ ಹುಟ್ಟಿದವನು, ಆಡನ್ನೂ ಹಾಗೂ ಪೂರ್ವಾಷಾಢಾದಲ್ಲಿ ಜನಿಸಿದವನು ಚಿನ್ನವನ್ನು ದಾನ ಕೊಡಬೇಕು । ಜವೇಗೋಧಿ – ಭತ್ತ – ಉದ್ದು – ಎಳ್ಳು – ಹೆಸರುಕಾಳು, ಇವುಗಳನ್ನೂ ದಾನ ಕೊಡಬೇಕು ॥

ಯಥಾವಿತ್ತಾನುಸಾರೇಣ ಕುರ್ಯಾತ್ ಬ್ರಾಹ್ಮಣ ಭೋಜನಮ್ ।
ಪಿತುರಾಯುಷ್ಯ ವೃದ್ಧ್ಯರ್ಥಂ ಶಾಂತಿಂ ತತ್ರ ಸಮಾಚರೇತ್ ॥

ತನ್ನ ಆರ್ಥಿಕಶಕ್ತಿಗೆ ತಕ್ಕಂತೆ, ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು । ಹಾಗೂ ತಂದೆಯ ಆಯುಷ್ಯದ ಶಾಂತಿಯನ್ನೂ ಮಾಡಬೇಕು ॥

ಏವಂ ಯಃ ಕುರುತೇ ಸಮ್ಯಕ್ ಶಾಂತಿಕರ್ಮ ಸಮಾಹಿತಃ ।
ನ ದೋಷೈರ್ಲಿಪ್ಯತೇ ನೂನಂ ಪದ್ಮಪತ್ರಮಿವಾಂಭಸಾ ॥

ಹೀಗೆ ಯಾರು ಸರಿಯಾಗಿ ಶಾಂತಿಕರ್ಮವನ್ನು ಮಾಡುತ್ತಾನೋ, ಅವನು ತಾವರೇ ಎಲೆಯು ಹೇಗೆ ನೀರಿಗೆ ಅಂಟುವುದಿಲ್ಲವೋ, ಹಾಗೆ ಇವನೂ ಎಲ್ಲಾ ದೋಷಗಳಿಂದಲೂ ಮುಕ್ತನಾಗುತ್ತಾನೆ ॥

ಆಯುರಾರೋಗ್ಯಮೈಶ್ವರ್ಯಂ ಸಂಪ್ರಾಪ್ನೋತಿ ದಿನೇದಿನೇ ।
ಧನಧಾನ್ಯ ಸಮೃದ್ಧಿಂ ಚ ಪುತ್ರಪೌತ್ರ ಸಮೃದ್ಧಿಮಾನ್ ॥

ಶಾಂತಿಯಿಂದ ದಿನದಿನವೂ ಅವನಿಗೆ ಆಯಸ್ಸು – ಆರೋಗ್ಯಗಳು ವೃದ್ಧಿಯಾಗುತ್ತವೆ । ಧನಧಾನ್ಯ ಸಮೃದ್ಧಿಯೂ, ಪುತ್ರಪೌತ್ರ ಸಂತತಿಯೂ ವೃದ್ಧಿಯಾಗುತ್ತದೆ ॥

॥ ಇತಿ ಉತ್ತರಗಾರ್ಗ್ಯೋಕ್ತ ತಿಥ್ಯಾದಿ ಗಂಡಾಂತ ಶಾಂತಿಃ ॥

*****

2. ದರ್ಶಜನನ ಶಾಂತಿಃ

ಅಥ ನಾರದಃ

ಅಥಾತೋ ದರ್ಶಜಾತಾನಾಂ ಮಾತಾಪಿತ್ರೋರ್ದರಿದ್ರತಾ ।
ತದ್ದೋಷ ಪರಿಹಾರಾರ್ಥಂ ಶಾಂತಿಂ ವಕ್ಷ್ಯಾಮಿ ನಾರದಃ ॥

ಈಗ, ಅಮಾವಾಸ್ಯೆಯಲ್ಲಿ ಜನಿಸಿದವರು, ತಂದೆತಾಯಿಯರಿಗೆ ದಾರಿದ್ರ್ಯವನ್ನು ಉಂಟುಮಾಡುತ್ತಾರೆ। ಆ ದೋಷಪರಿಹಾರಕ್ಕಾಗಿ, ನಾರದನಾದ ನಾನು ಶಾಂತಿಯನ್ನು ಹೇಳುತ್ತೇನೆ ॥

ಪುಣ್ಯಾಹಂ ವಾಚಯಿತ್ವಾऽದೌಕ್ತತು ಸಂಕಲ್ಪಪೂರ್ವಕಂ ।
ಕುಂಡಂ ವಾ ಮಂಡಲಂ ಕುರ್ಯಾತ್ತದ್ದೇಶೇ ಸ್ಥಾಪಯೇದ್ಘಟಂ ॥

ಮೊದಲು, ಹೋಮಸಂಕಲ್ಪ ಪೂರ್ವಕವಾಗಿ ಪುಣ್ಯಾಹವನ್ನು ಮಾಡಿ । ನಂತರ ಕುಂಡವನ್ನೂ ಮಂಡಲವನ್ನೂ ಮಾಡಬೇಕು, ಆ ಜಾಗದಲ್ಲಿ ಒಂದು ಕಲಶವನ್ನು, ಯಂತ್ರವನ್ನೂ ಸ್ಥಾಪಿಸಬೇಕು ॥

ತತ್ಕುಂಭೇ ನಿಕ್ಷಿಪೇದ್ದ್ರವ್ಯಂ ದಧಿ ಕ್ಷೀರ ಘೃತಾದಿಕಂ ।
ನ್ಯಗ್ರೋಧೋದುಂಬರಾಶ್ವತ್ಥಾಃ ಸಚೂತೋ ನಿಂಬಕಸ್ತಥಾ ॥

ಆ ಕಲಶದಲ್ಲಿ, ದಧಿ–ಕ್ಷೀರ–ಘೃತಾದಿ ದ್ರವ್ಯಗಳನ್ನೂ ಹಾಕಬೇಕು । ಹಾಗೂ ನ್ಯಗ್ರೋಧ – ಅತ್ತಿ – ಅರಳಿ – ಮಾವಿನ – ಬೇವಿನ ಮರ ॥

ಏತೇಷಾಂ ವೃಕ್ಷಮೂಲಾನಾಂ ತ್ವಗಾದೀನ್ಪಲ್ಲವಾಂ ಸ್ತಥಾ ।
ಪಂಚರತ್ನಾನಿ ನಿಕ್ಷಿಪ್ಯ ವಸ್ತ್ರಯುಗ್ಮೇನ ವೇಷ್ಟಯೇತ್ ॥

ಈ ವೃಕ್ಷಗಳ ತ್ವಗಟೆ, ಚಿಗುರು, ಎಲೆ ಮುಂತಾದವುಗಳನ್ನೂ ಹಾಗೂ । ಪಂಚರತ್ನಗಳನ್ನೂ ಹಾಕಿ, ಎರಡುವಸ್ತ್ರಗಳಿಂದ ಸುತ್ತಬೇಕು ॥

ಸರ್ವೇ ಸಮುದ್ರಾಸ್ಸರಿತಸ್ತೀರ್ಥಾನಿ ಜಲದಾನದಾಃ ।
ಆಯಾಂತು ಯಜಮಾನಸ್ಯ ದುರಿತಕ್ಷಯ ಕಾರಕಾಃ ॥

ಈ ಶ್ಲೋಕವನ್ನು ಹೇಳಬೇಕು ॥

ಆಪೋಹಿಷ್ಠೇತಿ ತಿಸೃಭಿಃ ಕಯಾನಶ್ಚಿತ್ರಸೃಭಿಸ್ತಥಾ ।
ಯತ್ಕಿಂಚೇದಮೃಚಾ ಚೈವ ಸಮುದ್ರಜ್ಯೇಷ್ಠಾ ಇತ್ಯಪಿ ॥

ನಂತರ ಆಪೋಹಿಷ್ಠಾ.... ಮೂರು ಮಂತ್ರಗಳೂ, ಕಯಾನಶ್ಚಿತ್ರ... ಮೂರು ಮಂತ್ರಗಳೂ । ಯತ್ಕಿಂಚೇದಂ ಎಂಬ ಮಂತ್ರದಿಂದ, ಸಮುದ್ರಜ್ಯೇಷ್ಠ,, ಮಂತ್ರಗಳಿಂದಲೂ ॥

ಅಭಿಮಂತ್ರ್ಯೋದಕಂ ಪಶ್ಚಾದಗ್ನೇಃ ಪೂರ್ವಪ್ರದೇಶಕೇ ।
ಹಾರಿದ್ರ ರಕ್ತಕಂ ಚೈವ ಕೃಷ್ಣಶ್ವೇತಂ ಚ ನೀಲಕಂ ॥

ಅಭಿಮಂತ್ರಿಸಿದ ನೀರನ್ನು ಅಗ್ನಿಯ ಹಿಂದೆ ಪೂರ್ವಪ್ರದೇಶದಲ್ಲಿ, ಹರಿದ್ರಾ–ಕುಂಕುಮಗಳಿಂದ ಕೂಡಿದ ಹಾಗೂ ಕೃಷ್ಣಶ್ವೇತವಾದ ಹಾಗೂ ನೀಲಿ ॥

ಏತೇಷಾಂ ತಂಡುಲೈಶ್ಚೈವ ಸರ್ವತೋಭದ್ರಮುದ್ಧರೇತ್ ।
ದರ್ಶಸ್ಯ ದೇವತಾಯಾಶ್ಚ ಸೋಮಸೂರ್ಯ ಸ್ವರೂಪಕಾಮ್ ॥

ಈ ಬಣ್ಣದ ಅಕ್ಷತೆಗಳಿಂದ ಸರ್ವತೋಭದ್ರಯಂತ್ರವನ್ನು ಮಾಡಬೇಕು । ಅಮಾವಾಸ್ಯೆಯ ದೇವತೆಯಾದ ಸೋಮಸೂರ್ಯರ ॥

ಪ್ರತಿಮಾಂ ಸ್ವರ್ಣಜಾಂ ನಿತ್ಯಂ ರಾಜತಾಂ ತಾಮ್ರಜಾಂ ತಥಾ ।
ಸರ್ವತೋಭದ್ರ ಮಧ್ಯೇ ಚ ಸ್ಥಾಪಯೇದ್ದರ್ಶ ದೇವತಾಮ್ ॥

ಚಿನ್ನದ ಪ್ರತಿಮೆಯನ್ನು ಹಾಗೂ ಬೆಳ್ಳಿಯ, ತಾಮ್ರದ ಪ್ರತಿಮೆಯನ್ನು ಪ್ರತಿನಿತ್ಯ ಪೂಜಿಸುವುದಕ್ಕಾಗಿ, ಎಲ್ಲಕಡೆಯಿಂದಲೂ ಸರ್ವತೋಭದ್ರಯಂತ್ರದ ನಡುವೆ ದರ್ಶ(ಅಮಾವಾಸ್ಯೆ)ದೇವತೆಯಾದ ಸೂರ್ಯ–ಚಂದ್ರರ ಪ್ರತಿಮೆಯನ್ನು ಇಡಬೇಕು ॥

ಗ್ರಹವರ್ಣಂ ವಸ್ತ್ರಯುಗ್ಮಂ ತದ್ವರ್ಣಂ ಗಂಧ ಪುಷ್ಪಕಂ ।
ಆಪ್ಯಾಯಸ್ವೇತಿ ಮಂತ್ರೇಣ ಸವಿತಾ ಪಶ್ಚಾತ್ತಾತ್ತಥಾ ॥

ಆ ಗ್ರಹದ ಬಣ್ಣದ ಎರಡುವಸ್ತ್ರಗಳನ್ನು ಹಾಗೂ ಅದೇಬಣ್ಣದ ಗಂಧ, ಹೂಗಳನ್ನು । ಆಪ್ಯಾಯಸ್ವ ಎಂಬ ಮಂತ್ರದಿಂದ ಹಾಗೂ ಸವಿತಾ ಪಶ್ಚಾತ್ತಾತ್ ಎಂಬ ಮಂತ್ರದಿಂದಲೂ ॥

ಉಪಚಾರೈಸ್ಸಮಾರಾಧ್ಯ ತತೋ ಹೋಮಂ ಸಮಾಚರೇತ್ ।
ತತೋ ವಹ್ನಿಂ ಪ್ರತಿಷ್ಠಾಪ್ಯ ಕ್ರತು ಸಂಕಲ್ಪಮೀದೃಶಂ ॥

ಷೋಡಷೋಪಚಾರಗಳಿಂದ ಪೂಜಿಸಿ, ಕೆಳಗಿನಂತೆ ಹೋಮಸಂಕಲ್ಪವನ್ನು ಮಾಡಿ, ಅಗ್ನಿಯನ್ನು ಸ್ಥಾಪಿಸಿಕೊಂಡು, ನಂತರ ಹೋಮಿಸಬೇಕು ॥

ಸಮಿಧಶ್ಚ ಚರುದ್ರವ್ಯಂ ಕ್ರಮೇಣ ಜುಹುಯಾದ್ಘೃತಂ ।
ಹುನೇತ್ ಸವಿತೃಮಂತ್ರೇಣ ಸೋಮೋಧೇನುಂ ಚ ಮಂತ್ರತಃ ॥

ಸಮಿತ್ – ಚರು ಈ ದ್ರವ್ಯಗಳಿಂದ ಹಾಗೂ ತುಪ್ಪದಿಂದ ಹೋಮಿಸಬೇಕು । ಸವಿತೃಮಂತ್ರದಿಂದಲೂ ಹಾಗೂ ಸೋಮೋಧೇನುಂ ಮಂತ್ರದಿಂದಲೂ ಹೋಮಿಸಬೇಕು ॥

ಏತೈರ್ಮಂತ್ರೈಶ್ಚ ಪ್ರತ್ಯೇಕಂ ಹುನೇದಷ್ಟೋತ್ತರಂ ಶತಂ ।
ದರ್ಶಸ್ಯ ದೇವತಾಹೋಮಂ ಅಷ್ಟಾವಿಂಶತಿ ಸಂಖ್ಯಯಾ ॥

ಈ 2 ಮಂತ್ರಗಳನ್ನು ಪ್ರತ್ಯೇಕವಾಗಿ 108 ಸಲ ಹೋಮಿಸಬೇಕು । ದರ್ಶದೇವತಾ ಹೋಮವನ್ನು 28 ಸಲ ಮಾಡಬೇಕು ॥

ಹೋಮಮೇವಂಚ ಕೃತ್ವಾsಥ ವಿಧ್ಯಾಚಾರಾಭಿಷೇಚನಂ ।
ಶ್ರೀಸೂಕ್ತಾಯುಷ್ಯ ಸೂಕ್ತೇ ಚ ಸಮುದ್ರಜ್ಯೇಷ್ಠಾ ಇತಿ ಕ್ರಮಾತ್ ॥

ಈ ರೀತಿ ಹೋಮಿಸಿ, ನಂತರ ವಿಧಿಯಂತೆ ಕರ್ತೃವಿಗೆ ಕಲಶದ ತೀರ್ಥಗಳಿಂದ ಸ್ನಾನ ಮಾಡಿಸಬೇಕು । ಶ್ರೀಸೂಕ್ತ, ಆಯುಷ್ಯಸೂಕ್ತ,, ಸಮುದ್ರಜ್ಯೇಷ್ಠಾ,, ಮಂತ್ರಗಳಿಂದ ಸ್ನಾನ ಮಾಡಿಸಬೇಕು ॥

ಏತೈರ್ಮಂತ್ರೈರಭಿಷೇಕಂ ಮಾತಾಪಿತ್ರೋಶ್ಚಿಶೋಸ್ತಥಾ ।
ತತಸ್ಸ್ವಿಷ್ಟಕೃದಾದಿ ಸ್ಯಾದ್ಧೋಮಶೇಷಂ ಸಮಾಪಯೇತ್ ॥

ಈ ಮಂತ್ರಗಳಿಂದ ಜಾತಕನ ತಾಯಿತಂದೆಗಳಿಗೂ ಅಭಿಷೇಕ ಮಾಡಿ । ನಂತರ ಸ್ವಿಷ್ಟಕೃದಾದಿ ಹೋಮವಿಧಿಗಳನ್ನು ಮಾಡಬೇಕು ॥

ಹಿರಣ್ಯಂ ರಾಜತಂ ಚೈವ ಕೃಷ್ಣಧೇನುಂ ಸದಕ್ಷಿಣಾಂ ।
ಅನ್ಯೇಭ್ಯೋsಪಿ ಯಥಾಶಕ್ತಿ ದಾತವ್ಯಾ ದಕ್ಷಿಣಾತಥಾ ॥

ನಂತರ ಚಿನ್ನ, ಬೆಳ್ಳಿ ಮತ್ತು ಕಪ್ಪುಹಸುವನ್ನು ದಕ್ಷಿಣಾಸಹಿತವಾಗಿ । ಬಂದಂತಹ ಬ್ರಾಹ್ಮಣರಿಗೆ ಯಥಾಶಕ್ತಿಯಾಗಿ ದಾನ ಮಾಡಬೇಕು ॥

ಬ್ರಾಹ್ಮಣಾನ್ ಭೋಜಯೇತ್ತತ್ರ ಕಾರಯೇತ್ಸ್ವಸ್ತಿ ವಾಚನಂ ॥

ನಂತರ ಬ್ರಾಹ್ಮಣರಿಗೆ ಭೋಜನ ಮಾಡಿಸಿ, ಆಶೀರ್ವಾದ ಪಡೆಯಬೇಕು ॥

॥ ಇತಿ ನಾರದೋಕ್ತ ದರ್ಶಜನನ ಶಾಂತಿಃ ॥

******

3. ಸಿನೀವಾಲೀ ಜನನ ಶಾಂತಿಃ

ಅಥ ಉತ್ತರಗಾರ್ಗ್ಯಃ

ಯಾವ ದಿನ ಉದಯಕ್ಕೆ ಚತುರ್ದಶೀ ತಿಥಿಯಿದ್ದು, ಅದೇದಿನ ಅಮಾವಾಸ್ಯೆಯೂ ಬಂದು, ಈ ಅಮಾವಾಸ್ಯೆಯ ಸಮಯದಲ್ಲಿ ಯಾರು ಹುಟ್ಟುತ್ತಾರೋ, ಅವರಿಗೆ ಸಿನೀವಾಲೀ ಜನನ ದೋಷವು ಬರುತ್ತದೆ. ಇಂತಹವರಿಗೆ ಸಿನೀವಾಲೀ ಜನನಶಾಂತಿ ಮಾಡತಕ್ಕದ್ದು

ಸಿನೀವಾಲ್ಯಾಂ ಪ್ರಸೂತಾಸ್ಯಾದ್ಯಸ್ಯ ಭಾರ್ಯಾ ಪಶುಸ್ತಥಾ ।
ಗಜಾಶ್ವ ಮಹಿಷೀ ಚೈವ ಶಕ್ರಸ್ಯಾಪಿ ವಿನಶ್ಯತಿ ॥

ಸಿನೀವಾಲೀ ದಿನದಲ್ಲಿ ಯಾರ ಹೆಂಡತಿಯು ಮಕ್ಕಳನ್ನು ಹಡೆಯುತ್ತಾರೋ, ಅವರ ಪಶ್ವಾದಿ ಐಶ್ವರ್ಯಗಳು ನಾಶ ಹೊಂದುತ್ತವೆ । ಇಂದ್ರನ ಪತ್ನಿಯೇ ಹಡೆದರೂ ಇದೇ ಗತಿಯೇ ಬರುತ್ತದೆ ॥

ಯೇ ಸಂತಿ ಸಕಲಾಶ್ಚಾನ್ಯೇ ಸ್ವಪ್ರಸಾದೋಪಜೀವಿನಃ ।
ವರ್ಜಯೇತ್ತಾನಶೇಷಾಂಸ್ತು ಪಶುಪಕ್ಷಿ ಮೃಗಾದಿಕಾನ್ ॥

ತಮ್ಮನ್ನು ಆಶ್ರಯಿಸಿ ಜೀವನವನ್ನು ಯಾರು ನಡೆಸುತ್ತಿದ್ದಾರೋ । ಈ ರೀತಿ ಹುಟ್ಟುವ ಆ ಎಲ್ಲಾ ಪಶು, ಪಕ್ಷಿ ಮೃಗಾದಿಗಳನ್ನೂ ಆ ಯಜಮಾನನು ಬಿಡಬೇಕು ॥

ಕುಹೂ ಪ್ರಸೂತಿರತ್ಯರ್ಥಂ ಸರ್ವದೋಷಕರೀ ಮಹತ್ ।
ಯಸ್ಯ ಪ್ರಸೂತಿರೇತೇಷಾಂ ತಸ್ಯಾಯುರ್ಧನ ನಾಶನಂ ॥

(ಯಾವ ದಿನ ಉದಯದಲ್ಲಿ ಅಮಾವಾಸ್ಯೆಯಿದ್ದು, ಅದೇದಿನ ಪಾಡ್ಯವೂ ಬಂದು, ಈ ಅಮಾವಾಸ್ಯೆಯಲ್ಲಿ ಹುಟ್ಟುದವರಿಗೆ ಕುಹೂ ದೋಷವು ಬರುತ್ತದೆ. ಇವರಿಗೆ ಕುಹೂಜನನ ಶಾಂತಿ ಅಗತ್ಯ ।) ಕುಹೂದಲ್ಲಿ ಹುಟ್ಟಿದರೆ, ಅದು ಅತ್ಯಂತ ಎಲ್ಲಾ ದೊಡ್ಡದೋಷಗಳನ್ನೂ ಉಳ್ಳದ್ದಾಗಿರುತ್ತದೆ । ಈ ಸಮಯದಲ್ಲಿ ಯಾರಿಗೆ ಮಕ್ಕಳಾಗುತ್ತವೋ, ಅವರ ಆಯಸ್ಸು, ಐಶ್ವರ್ಯ ಎಲ್ಲವೂ ನಾಶವಾಗುತ್ತವೆ ॥

ಸರ್ವಗಂಡ ಸಮಸ್ತತ್ರ ದೋಷಸ್ತು ಪ್ರಬಲೋಭವೇತ್ ।
ಶಾಂತಿಂ ವಿನಾ ವಿಶೇಷೇಣ ಪರಿತ್ಯಾಗೋ ವಿಧೀಯತೇ ॥

ಎಲ್ಲಾ ಗಂಡದೋಷಗಳ ಸಮಸ್ತ ದೋಷಗಳಿಂದ ಈ ಸಮಯವು ಕೂಡಿರುತ್ತದೆಯಾದ್ದರಿಂದ, ಇದು ಅತ್ಯಂತ ಪ್ರಬಲ ದೋಷವು । ಶಾಂತಿಯನ್ನು ಮಾಡಿಕೊಳ್ಳದಿದ್ದರೆ, ಆ ಮಗುವನ್ನು ಬಿಡಬೇಕೆಂದು ಹೇಳಿದೆ ॥

ಪರಿತ್ಯಾಗಾತ್ತತ್ರ ಶಾಂತಿಂ ಕುರ್ಯಾದ್ಧೀಮಾನ್ ವಿಚಕ್ಷಣಃ ।
(ಪರಿತ್ಯಾಗಾದಿತಿ ಲಬ್ಲೋಪೇ ಪಂಚಮೀ, ಪರಿತ್ಯಾಗಂ ಕೃತ್ವೇತ್ಯರ್ಥಃ)
ತತ್ಫಲಂ ತತ್ಕ್ಷಣಾರ್ಧೇನ ಪುನರೇವಾನು ಪಾಲನೇ ॥

ಶಾಂತಿ ಮತ್ತು ಮಗುವನ್ನು ಬಿಡುವಿಕೆ, ಇವೆರಡರಲ್ಲಿ ಬುದ್ಧಿವಂತನಾದವನು ಪರಿತ್ಯಾಗವನ್ನು ಆಯ್ಕೆ ಮಾಡಬೇಕು । (ಪರಿತ್ಯಾಗಾತ್ ಎಂಬ ಪದದಲ್ಲಿ ಲ್ಯಪ್ ಪ್ರತ್ಯಯವು ಲೋಪವಾಗಿ ಪಂಚಮೀ ವಿಭಕ್ತಿ ಬಂದಿದೆ, ಇದಕ್ಕೆ ಪರಿತ್ಯಾಗವನ್ನು ಮಾಡಿ, ಎಂದು ಅರ್ಥ ಮಾಡಬೇಕು) ಆ ದೋಷದ ಫಲವನ್ನು, ಈ ಮಕ್ಕಳ ಪಾಲನೆ ಮಾಡುವವನೂ ಪಡೆಯುತ್ತಾನೆ ॥

ನ ತ್ಯಜೇತ್ಪಂಡಿತೋ ಮೋಹಾದರ್ಥಾದಜ್ಞಾನತೋಽಪಿ ವಾ ।
ತದ್ಯೋಗಂ ನಾಶಯೇತ್ಕಿಂಚಿತ್ಸ್ವಯಂ ವಾ ನಾಶಮಶ್ನುತೇ ॥

ಪಂಡಿತನಾದವನು, ಅಜ್ಞಾನದಿಂದಲೋ ಅಥವಾ ಮೋಹದಿಂದಲೋ, ಶಾಂತಿಯನ್ನು ಮಾಡದೇ ಇರಬಾರದು । ಆ ಮಗುವಿನ ಜೊತೆಗಿನ ಸಂಬಂಧವು ಸಕಲೈಶ್ವರ್ಯ ನಾಶಕ್ಕೆ ಕಾರಣವಾಗುತ್ತದೆ ॥

ಕಲ್ಪೋಕ್ತಶಾಂತಿಃ ಕರ್ತವ್ಯಾಶೀಘ್ರಂ ದೋಷಾಪನುತ್ತಯೇ ।
ರುದ್ರಶಕ್ರಶ್ಚ ಪಿತರಃ ಪೂಜ್ಯಾಸ್ಸ್ಯುರ್ದೇವತಾಃ ಕ್ರಮಾತ್ ॥

ದೋಷವನ್ನು ಕಳೆದುಕೊಳ್ಳಲು, ಕಲ್ಪೋಕ್ತವಿಧಾನದಿಂದ ಶಾಂತಿಯನ್ನು ಬೇಗನೇ ಮಾಡಬೇಕು । ರುದ್ರ , ಇಂದ್ರ , ಪಿತೃದೇವತೆ(ಅಗ್ನಿಷ್ವಾತ್ತಾ – ಸೋಮಾಯ ಪಿತೃಮತೇ – ಯಮೋಂಗಿರಸ್ವಾನ್) ಇವರುಗಳಿಗೆ ಕ್ರಮವಾಗಿ ಪೂಜೆ ಮಾಡಬೇಕು ॥

ಕರ್ಷಮಾತ್ರ ಸುವರ್ಣೇನ ತದರ್ಧಾರ್ಧೇನ ವಾ ಪುನಃ ।
ಅಥ ವಾ ಶಕ್ತಿತಃ ಕುರ್ಯಾದ್ವಿತ್ತಶಾಠ್ಯ ವಿವರ್ಜಿತಃ ॥

ಒಂದು ತೊಲ ಅಥವಾ ಅರ್ಧತೊಲಾ ಸುವರ್ಣದ ದಾನದಿಂದ ಅಥವ ಅವನ ಶಕ್ತಿಗನುಗುಣವಾಗಿ ಚಿನ್ನವನ್ನು ದಾನಮಾಡುವುದರಿಂದ, ಈ ದೋಷವನ್ನು ಕಳೆದುಕೊಳ್ಳುತ್ತಾನೆ । ಜಿಪುಣತನ, ಮೋಸಗಳಿಲ್ಲದೇ ದಾನವನ್ನು ಮಾಡಬೇಕು ॥

ಪ್ರತಿಮಾಂ ಕಾರಯೇತ್ ಶಂಭೋಶ್ಚತುರ್ಭುಜ ಸಮನ್ವಿತಾಮ್ ।
ತ್ರಿಶೂಲ ಖಡ್ಗ ವರದಾಭಯ ಹಸ್ತಾಂ ಯಥಾಕ್ರಮಮ್ ॥

ತ್ರಿಶೂಲ, ಖಡ್ಗ, ವರ ಅಭಯ ಹಸ್ತಗಳಿಂದ ಕೂಡಿದ ನಾಲ್ಕುಭಜಗಳುಳ್ಳ ಶಿವನ ಪ್ರತಿಮೆಯನ್ನು ಮಾಡಿಸಬೇಕು ॥

ಶ್ವೇತವರ್ಣಾಂ ಶ್ವೇತಪುಷ್ಪಾಂ ಶ್ವೇತವಸ್ತ್ರಾಂ ವೃಷೇಸ್ಥಿತಾಂ ।
ತ್ರ್ಯಂಬಕೇನ ಮಂತ್ರೇಣ ಪೂಜಾಂ ಕುರ್ಯಾದ್ಯಥಾವಿಧಿ ॥

ಬಿಳಿಬಣ್ಣದ ಪುಷ್ಪಗಳಿಂದ, ಬಿಳಿಬಟ್ಟೆ ಧರಿಸಿದ, ವೃಷಭದ ಮೇಲೆ ಕುಳಿತಿರುವ ಆ ಶಿವನನ್ನು ತ್ರ್ಯಂಬಕ ಮಂತ್ರದಿಂದ ಪೂಜಿಸಬೇಕು ॥

ಇಂದ್ರಶ್ಚತುರ್ಭುಜೋ ವಜ್ರಾಂಕುಶ ಚಾಪಾಸಿ ಸಾಯಕಃ ।
ರಕ್ತವರ್ಣೋ ಗಜಾರೂಢೋ ಯತ ಇಂದ್ರೇತಿ ಮಂತ್ರತಃ ॥

ವಜ್ರ, ಅಂಕುಶ, ಚಾಪ(ಬಿಲ್ಲು), ಕತ್ತಿ, ಬಾಣಗಳಿಂದ ಕೂಡಿದ ನಾಲ್ಕು ಭುಜಗಳುಳ್ಳ ಗಜಾರೂಢನಾದ, ರಕ್ತವರ್ಣದಿಂದ ಕೂಡಿದ ಇಂದ್ರನನ್ನು ಪೂಜಿಸಬೇಕು ॥

ಪಿತರಃ ಕೃಷ್ಣವರ್ಣಾಶ್ಚ ಚತುರ್ಹಸ್ತಾ ವಿಮಾನಗಾಃ ।
ಯಷ್ಟ್ಯಕ್ಷಸೂತ್ರ ಕಮಂಡಲ್ವಭಯಸ್ಯೈವ ಧಾರಿಣಃ ॥

ವಿಮಾನದಮೇಲೆ ಕುಳಿತಿರುವ, 4 ಹಸ್ತಗಳುಳ್ಳ, ಕೃಷ್ಣವರ್ಣದಿಂದ ಕೂಡಿದ, ದಂಡ, ಅಕ್ಷಸೂತ್ರ, ಕಮಂಡಲು, ಅಭಯವನ್ನು ಧರಿಸಿರುವ ಪಿತೃದೇವತೆಗಳನ್ನು ॥

ಯೇ ಸತ್ವಾಸ ಇತಿ ಮಂತ್ರೇಣ ಪೂಜಾಂ ಕುರ್ಯಾದ್ಯಥಾವಿಧಿ ।
ಆಗ್ನೇಯಾಂ ದಿಶಿಮಾರಭ್ಯ ಕುಂಭಾನ್ ಕೋಣೇಷು ವಿನ್ಯಸೇತ್ ॥

ಯೇ ಸತ್ವಾಸ ಮಂತ್ರದಿಂದ, ವಿಧಿಗೆ ಅನುಸಾರವಾಗಿ ಪೂಜಿಸಬೇಕು । ಆಗ್ನೇಯದಿಕ್ಕಿನಿಂದ ಆರಂಭಿಸಿ ಎಲ್ಲಾ ಉಪದಿಕ್ಕುಗಳಲ್ಲಿಯೂ ಕಲಶಗಳನ್ನು ಇಟ್ಟು ॥

ತನ್ಮಧ್ಯೇ ಸ್ಥಾಪಯೇತ್ಕುಂಭಂ ಶತಚ್ಛಿದ್ರ ಸಮನ್ವಿತಂ ।
ತೇಷ್ವೇವ ಪಂಚಗವ್ಯಾದೀನ್ ತತ್ತನ್ಮಂತ್ರೈಶ್ಚ ನಿಕ್ಷಿಪೇತ್ ॥

ಮಧ್ಯದಲ್ಲಿ ಒಂದು ಕಲಶವನ್ನಿಟ್ಟು, ಅದಕ್ಕೆ ದಾರವನ್ನು ಸುತ್ತಿ ಶತಚ್ಛಿದ್ರವನ್ನು ಕಲ್ಪಿಸಿ ಇಡಬೇಕು । ಆ 5 ಕಲಶಗಳಲ್ಲಿಯೇ ಪಂಚಗವ್ಯಾದಿ ದ್ರವ್ಯಗಳನ್ನು ಆಯಾಯಾ ಮಂತ್ರಗಳಿಂದ ಹಾಕಬೇಕು ॥

ಕಲ್ಪೋಕ್ತಶಾಂತಿಃ ಕರ್ತವ್ಯಾ ಕುರ್ಯಾತ್ ಶೀಘ್ರಂ ಸ್ವಶಕ್ತಿತಃ ।
ಗೋದಾನಂ ವಸ್ತ್ರದಾನಂ ಚ ಸುವರ್ಣಂಚೋರ್ವರಾಂ ಶುಭಾಂ ॥

ಕಲ್ಪೋಕ್ತವಿಧಿಯಂತೆ, ಬೇಗನೇ ಶಾಂತಿಕರ್ಮವನ್ನು ಮಾಡಬೇಕು । ಹಾಗೆಯೇ ಗೋ, ವಸ್ತ್ರ, ಚಿನ್ನ ಹಾಗೂ ಸಸ್ಯಸಹಿತವಾದ ಭೂಮಿ, ಇವುಗಳನ್ನು ದಾನವಾಗಿ ಕೊಡಬೇಕು ॥

ದಶದಾನಾನಿ ಚೋಕ್ತಾನಿ ಕ್ಷೀರಮಾಜ್ಯಂ ಗುಡಂ ತಥಾ ।
ಆಜ್ಯಾವೇಕ್ಷಣಮೇತಾನಿ ತತ್ತನ್ಮಂತ್ರೈಶ್ಚ ಕಾರಯೇತ್ ॥

ದಶದಾನಗಳನ್ನೂ ಹೇಳಿದೆ ಅದಲ್ಲದೇ ಹಾಲು, ತುಪ್ಪ, ಬೆಲ್ಲ ಇವುಗಳನ್ನೂ ಕೊಡಬೇಕು । ಆಜ್ಯದಲ್ಲಿ ಮುಖವನ್ನು ನೋಡುವಿಕೆ ಮುಂತಾದವುಗಳನ್ನು ಆಯಾಯಾ ಮಂತ್ರಗಳಿಂದ ಮಾಡಬೇಕು ॥

ಸಮಿದಾಜ್ಯಚರೂನ್ ಹೋಮಂ ತಿಲಮಾಷೈಶ್ಚ ಸರ್ಷಪೈಃ ।
ಅಶ್ವತ್ಥ ಪ್ಲಕ್ಷ ಪಾಲಾಶ ಸಮಿದ್ಭಿಃ ಖಾದಿರೈರಪಿ ॥

ನಂತರ ಸಮಿತ್, ಆಜ್ಯ, ಚರು, ತಿಲ, ಉದ್ದು, ಸರ್ಷಫ । ಅರಳಿ, ಆಲ, ಮುತ್ತುಗ, ಖದಿರ ಸಮಿತ್ತುಗಳಿಂದ ॥

ಅಷ್ಟೋತ್ತರಶತಂ ಮುಖ್ಯಂ ಪ್ರತ್ಯೇಕಂ ಜುಹುಯಾತ್ತತಃ ।
ತ್ರ್ಯಂಬಕೇನ ಮಂತ್ರೇಣ ತಿಲಾನ್ವ್ಯಾಹೃತಿಭಿಃ ಪುನಃ ॥

ಪ್ರತ್ಯೇಕವಾಗಿ 108 ಸಂಖ್ಯೆಯಲ್ಲಿ ಎಲ್ಲಾ ದ್ರವ್ಯಗಳಿಂದಲೂ ಹೋಮಿಸಬೇಕು । ತಿಲವನ್ನು ತ್ರ್ಯಂಬಕ ಮಂತ್ರ ಮತ್ತು ವ್ಯಾಹೃತಿಗಳಿಂದಲೂ ಹೋಮಿಸಬೇಕು ॥

ಚತುರ್ಭಿಃ ಕಲಶೈರ್ಯುಕ್ತಂ ಬೃಹತ್ಕುಂಭ ಸಮನ್ವಿತಮ್ ।
ಶಾಂತಿವತ್ಕಲಶಂ ಕಾರ್ಯಂ ಅಭಿಷೇಕಂ ಚ ಕಾರಯೇತ್ ॥

ಮಧ್ಯದಲ್ಲಿರುವ ಪ್ರಧಾನಕಲಶದ ಸಹಿತವಿರುವ 4 ಕಲಶಗಳಿಂದಲೂ ಅಭಿಷೇಕವನ್ನು ಯಜಮಾನನಿಗೆ ಮಾಡಿಸಬೇಕು ॥

ಪಿತೃ ಮಾತೃ ಶಿಶೂನಾಂ ಚ ಅಭಿಷಿಂಚೇತ್ತು ವಾರುಣೈಃ ।
ಶಂಕರಸ್ಯಾಭಿಷೇಕಂ ಚ ಕುರ್ಯಾತ್ ಬ್ರಾಹ್ಮಣಭೋಜನಂ ॥

ತಂದೆ, ತಾಯಿ, ಮಕ್ಕಳಿಗೂ ವರುಣ ಮಂತ್ರದಿಂದ ಅಭಿಷೇಕ ಮಾಡಬೇಕು । ನಂತರ ಶಿವನಿಗೂ ಅಭಿಷೇಕ ಮಾಡಿ, ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು ॥

ಅನ್ಯೇಷಾಂ ಚೈವ ಸರ್ವೇಷಾಂ ಬ್ರಾಹ್ಮಣಾನಾಂ ಚ ತರ್ಪಣಂ ।
ಯಥಾ ಶಕ್ತ್ಯನುಸಾರೇಣ ದ್ವಿಜವಾಚನ ಪೂರ್ವಕಂ ॥

ಹೀಗೆ ಎಲ್ಲರಿಗೂ ಯಥಾಶಕ್ತಿ ಅನ್ನದಾನ ಮಾಡಿ, ಬ್ರಾಹ್ಮಣರ ಆಶೀರ್ವಾದ ಪಡೆಯಬೇಕು ॥

॥ ಇತ್ಯುತ್ತರ ಗಾರ್ಗ್ಯೋಕ್ತ ಸಿನೀವಾಲೀ ಜನನಶಾಂತಿಃ ॥

******

4. ಕೃಷ್ಣ ಚತುರ್ದಶೀ ಜನನಶಾಂತಿಃ

ಅಥ ಉತ್ತರಗಾರ್ಗ್ಯಃ

ಮಂದರಸ್ಥಂ ಸುಖಾಸೀನಂ ಗರ್ಗಂ ಮುನಿವರಂ ಶುಭಂ ।
ನಮಸ್ಕೃತ್ವಾತು ಪಪ್ರಚ್ಛ ಶೌನಕೋ ಮುನಿಪುಂಗವಃ ॥

ಮಂದರಪರ್ವತದಲ್ಲಿ, ಸುಖವಾಗಿ ಕುಳಿತಿರುವ ಮುನಿಶ್ರೇಷ್ಠರಾದ ಗರ್ಗರನ್ನು ನಮಿಸಿ, ಶೌನಕರು ಪ್ರಶ್ನಿಸಿದರು ॥

ಶಾಂತಿಕರ್ಮಣಿ ಸರ್ವಾಣಿ ತ್ವತ್ತೋ ಜಾನಾಮ್ಯಹಂ ಪುರಾ ।
ಅಧುನಾ ಶ್ರೋತುಮಿಚ್ಛಾಮಿ ಕೃಷ್ಣಪಕ್ಷ ಚತುರ್ದಶೀ ॥

ನಿಮ್ಮಿಂದ ಹಿಂದೆ ಎಲ್ಲಾ ಶಾಂತಿಕರ್ಮಗಳನ್ನೂ ತಿಳಿದಿದ್ದೇನೆ । ಈಗ ಕೃಷ್ಣಪಕ್ಷದ ಚತುರ್ದಶಿಯ ॥

ದಿವಾ ವಾ ಯದಿ ವಾ ರಾತ್ರೌ ಪ್ರಸೂತೇಃ ಕಿಂ ಫಲಂ ವದ ।

ಬೆಳಿಗ್ಗೆ ಅಥವ ರಾತ್ರಿಯಲ್ಲಿ ಹುಟ್ಟಿದರೆ ಏನು ಫಲ ಎಂದು ಕೇಳಲು ಇಚ್ಚಿಸುತ್ತೇನೆ ।

ಗರ್ಗಃ

ಕೃಷ್ಣಪಕ್ಷೇ ಚತುರ್ದಶ್ಯಾಂ ಪ್ರಸೂತೇ ಷ್ಷಡ್ವಿಧಂ ಫಲಂ ।
ಚತುರ್ದಶೀಂ ಚ ಷಡ್ಭಾಗಂ ಕುರ್ಯಾದಾದೌ ಶುಭಂ ಸ್ಮೃತಮ್ ॥

ಕೃಷ್ಣಪಕ್ಷದ ಚತುರ್ದಶಿಯಲ್ಲಿ ಹುಟ್ಟಿದರೆ 6 ರೀತಿಯ ಫಲಗಳು ಉಂಟಾಗುತ್ತವೆ । ಆ ಫಲಗಳು ಚತುರ್ದಶಿಯನ್ನು 6 ಭಾಗಮಾಡಿ ಕ್ರಮವಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ । ಮೊದಲನೇ ಭಾಗದಲ್ಲಿ ಹುಟ್ಟಿದರೆ ಶುಭವು ॥

ದ್ವಿತೀಯೇ ಪಿತರಂ ಹಂತಿ ತೃತೀಯೇ ಮಾತರಂ ತಥಾ ।
ಚತುರ್ಥೇ ಮಾತುಳಂ ಹಂತಿ ಪಂಚಮೇ ವಂಶನಾಶನಂ ॥

2 ನೇ ಭಾಗದಲ್ಲಿ ಹುಟ್ಟಿದರೆ, ತಂದೆಗೆ ಅನಿಷ್ಟ. 3 ನೇ ಭಾಗದಲ್ಲಿ ತಾಯಿಗೆ । 4 ನೇ ಭಾಗದಲ್ಲಿ ಸೋದರಮಾವನಿಗೆ, 5 ನೇ ಭಾಗದಲ್ಲಿ ವಂಶಕ್ಕೆ ಅರಿಷ್ಟವು ॥

ಷಷ್ಠೇ ತು ಧನಹಾನಿಸ್ಯಾತ್ ಆತ್ಮನೋ ಕುಲನಾಶನಮ್ ।
ತಸ್ಮಾತ್ಸರ್ವ ಪ್ರಯತ್ನೇನ ಶಾಂತಿಂ ಕುರ್ಯಾದ್ವಿಧಾನತಃ ॥

6 ನೇ ಭಾಗದಲ್ಲಿ ಹುಟ್ಟುದರೆ ವಂಶನಾಶವು ಹಾಗೂ ಸಂಪತ್ತಿನ ನಾಶವು । ಆದ್ದರಿಂದ ಪ್ರಯತ್ನಪೂರ್ವಕವಾಗಿ ಶಾಂತಿಯನ್ನು ವಿಧಿಪೂರ್ವಕವಾಗಿ ಮಾಡಬೇಕು ॥

ಆಚಾರ್ಯಂ ವರಯೇದ್ಧೀಮಾನ್ ಪುತ್ರದಾರ ಸಮನ್ವಿತಂ ।
ಸ್ವಕರ್ಮ ನಿರತಂ ಶಾಂತಂ ಶ್ರೋತ್ರಿಯಂ ವೇದಪಾರಗಂ ॥

ವಿವೇಕಿಯಾದವನು, ಗೃಹಸ್ಥನಾದ – ಮಕ್ಕಳುಳ್ಳ – ನಿತ್ಯಕರ್ಮಗಳನ್ನು ಮಾಡುವ – ವೇದಶಾಸ್ತ್ರಗಳನ್ನು ಅಧ್ಯಯನ ಮಾಡಿದ – ಶ್ರೋತ್ರಿಯನನ್ನು, ಆಚಾರ್ಯನನ್ನಾಗಿ ಆಹ್ವಾನಿಸಬೇಕು ॥

ಸರ್ವಾಲಂಕಾರ ಸಂಯುಕ್ತಂ ಸರ್ವಲಕ್ಷಣ ಸಂಯುತಮ್ ।
ಬ್ರಾಹ್ಮಣಾನ್ ಋತ್ವಿಜಶ್ಚೈವ ಸ್ವಸ್ತಿವಾಚನ ಪೂರ್ವಕಮ್ ॥

ಸರ್ವಾಲಂಕಾರದಿಂದ ಕೂಡಿದ, ಸರ್ವಲಕ್ಷಣವಾದ । ಬ್ರಾಹ್ಮಣರನ್ನು ಋತ್ವಿಜರನ್ನಾಗಿ ವರಿಸಿ, ಸ್ವಸ್ತಿವಾಚನವನ್ನು ಮಾಡಬೇಕು ॥

ರುದ್ರೋಽಧಿದೇವತಾ ತಸ್ಯಾಃ ಕರ್ಷಮಾತ್ರ ಸುವರ್ಣತಃ ।
ತದರ್ಧಾರ್ಧೇನ ವಾ ಕುರ್ಯಾದ್ವಿತ್ತಶಾಠ್ಯ ವಿವರ್ಜಿತಃ ॥

ರುದ್ರನೇ ಈ ಶಾಂತಿಗೆ ಅಧಿದೇವನು, ಆ ರುದ್ರನನ್ನು ಸುವರ್ಣದಿಂದ ಪ್ರತಿಮೆ ಮಾಡಿಸಬೇಕು ॥

ಪ್ರತಿಮಾಂ ಕಾರಯೇತ್ ಶಂಭೋಃ ಸರ್ವಲಕ್ಷಣ ಸಂಯುತಾಮ್ ।
ವೃಷಭೇ ಚ ಸಮಾಸೀನಂ ವರದಾಭಯ ಪಾಣಿನಮ್ ॥

ವರದಾಭಯ ಹಸ್ತಗಳಿಂದ ಕೂಡಿದ, ವೃಷಭ ವಾಹನನಾದ, ಸರ್ವಲಕ್ಷಣಗಳಿಂದ ಕೂಡಿದ ರೀತಿಯಲ್ಲಿ ರುದ್ರನ ಪ್ರತಿಮೆಯನ್ನು ಮಾಡಬೇಕು ॥

ಶುದ್ಧಸ್ಫಟಿಕ ಸಂಕಾಶಂ ಶ್ವೇತಮಾಲ್ಯಾಂಬರಾನ್ವಿತಮ್ ।
ತ್ರ್ಯಂಬಕೇನ ಮಂತ್ರೇಣ ಪೂಜಾಂ ಕುರ್ಯಾದ್ವಿಧಾನತಃ ॥

ಶುದ್ಧವಾದ ಬಿಳಿ ಹೂ, ವಸ್ತ್ರಗಳಿಂದ ಕೂಡಿದ । ಆ ರುದ್ರದೇವನಿಗೆ ತ್ರ್ಯಂಬಕ ಮಂತ್ರದಿಂದ ಯಥಾವಿಧಿಯಾಗಿ ಪೂಜಿಸಬೇಕು ॥

ಜಪ್ತ್ವಾ ಪುರುಷಸೂಕ್ತಂ ಚ ಕದ್ರುದ್ರಾಯ ಕ್ರಮಾಜ್ಜಪೇತ್ ।
ಈಶ್ವರಸ್ಯಾಭಿಷೇಕಂ ಚ ಗ್ರಹಪೂಜಾಂ ಚ ಕಾರಯೇತ್ ॥

ಪುರುಷಸೂಕ್ತ ಮತ್ತು ಕದ್ರುದ್ರಾಯ ಮಂತ್ರಗಳನ್ನು ಕ್ರಮವಾಗಿ ಜಪಿಸಿ । ಶಿವನಿಗೆ ಅಭಿಷೇಕವನ್ನೂ ಮತ್ತು ಗ್ರಹಗಳಿಗೆ ಪೂಜೆಯನ್ನೂ ಯಜಮಾನನಿಂದ ಮಾಡಿಸಬೇಕು ॥

ಕುರ್ಯಾದಾಘಾರ ಪರ್ಯಂತಂ ಸ್ವಗೃಹ್ಯೋಕ್ತ ವಿಧಾನತಃ ।
ಸಮಿದಾಜ್ಯ ಚರೂಶ್ಚೈವ ತಿಲ ಮಾಷಾಂಶ್ಚ ಸರ್ಷಪೈಃ ॥

ಆಘಾರಹೋಮದವರೆಗೆ ಮಾಡಿ, ನಂತರ ಸ್ವಗೃಹ್ಯಸೂತ್ರದಂತೆ ಮಾಡಿ । ಸಮಿತ್, ಆಜ್ಯ, ಚರು, ತಿಲ, ಉದ್ದು, ಸರ್ಷಫ ॥

ಅಶ್ವತ್ಥ ಪ್ಲಕ್ಷ ಪಾಲಾಶ ಸಮಿದ್ಭಿಃ ಖಾದಿರೈಃ ಶುಭೈಃ ।
ಅಷ್ಟೋತ್ತರಸಹಸ್ರಂ ವಾ ಅಷ್ಟೋತ್ತರಶತಂ ತು ವಾ ॥

ಅರಳಿ, ಆಲ, ಮುತ್ತುಗ, ಖದಿರ ಸಮಿತ್ತುಗಳಿಂದ ಪ್ರತ್ಯೇಕವಾಗಿ 1008 ಅಥವಾ 108 ಸಂಖ್ಯೆಗಳಿಂದ ಹೋಮಿಸಬೇಕು ॥

ಅಷ್ಟಾವಿಂಶತಿಮೇತೈಶ್ಚ ಹೋಮಂ ಕುರ್ಯಾತ್ಪೃಥಕ್ ಪೃಥಕ್ ।
ತ್ರ್ಯಂಬಕೇನ ಮಂತ್ರೇಣ ತಿಲಾನ್ ವ್ಯಾಹೃತಿಭಿಃ ಕ್ರಮಾತ್ ॥

ಅಥವಾ 28 ಸಂಖ್ಯೆಗಳಿಂದಾದರೂ ಹೋಮಿಸಬೇಕು । ನಂತರ ತಿಲವನ್ನು ತ್ರ್ಯಂಬಕ ಮತ್ತು ವ್ಯಾಹೃತಿಗಳಿಂದ ಹೋಮಿಸಬೇಕು ॥

ಗ್ರಹಾ ಅಪಿ ಚ ಹೋತವ್ಯಾ ಅಸ್ಮದುಕ್ತ ವಿಧಾನತಃ ।
ಏವಂ ಕ್ರಮೇಣ ಹೋತವ್ಯಂ ಹೋಮಶೇಷಂ ಸಮಾಪಯೇತ್ ॥

ಗ್ರಹಗಳ ಹೋಮವನ್ನು ನಾವು ಹೇಳಿದ ವಿಧಾನದಲ್ಲಿ ಮಾಡಬೇಕು । ಹೀಗೆ ಹೋಮಿಸಿ, ಉತ್ತರತಂತ್ರವನ್ನು ಮಾಡಿ, ಮುಗಿಸಬೇಕು ॥

ಸರ್ವಾಲಂಕಾರ ಸಂಯುಕ್ತಾಂ ಸವತ್ಸಾಂ ಗಾಂ ಪಯಸ್ವಿನೀಮ್ ॥

ಪ್ರತಿಮಾಂ ವಸ್ತ್ರಂ ಯುಗ್ಮಂ ಚ ಆಚಾರ್ಯಾಯ ನಿವೇದಯೇತ್ ।

ಅಲಂಕೃತವಾದ, ಕರುಸಹಿತ, ಹಾಲುಕೊಡುವ ಗೋವನ್ನು ಹಾಗೂ ಪ್ರತಿಮೆ, ವಸ್ತ್ರಗಳನ್ನೂ ಆಚಾರ್ಯನಿಗೆ ದಕ್ಷಿಣೆಯಾಗಿ ಕೊಡಬೇಕು ॥

ಏವಂ ಯಃ ಕುರುತೇ ಶಾಂತಿಂ ಸರ್ವಪಾಪೈಃ ಪ್ರಮುಚ್ಯತೇ ॥
ಸರ್ವಾನ್ಕಾಮಾನವಾಪ್ನೋತಿ ಚಿರಜೀವೀ ಸುಖೀ ಭವೇತ್ ।

ಹೀಗೆ ಯಾರು ಶಾಂತಿಯನ್ನು ಮಾಡುತ್ತಾನೋ ಅವನು ಎಲ್ಲ ಪಾಪಗಳಿಂದಲೂ ಬಿಡುಗಡೆಹೊಂದಿ, ಎಲ್ಲ ಕಾಮನೆಗಳನ್ನೂ ಪಡೆದವನಾಗಿ ಬದುಕುತ್ತಾನೆ ॥

॥ ಇತ್ಯುತ್ತರ ಗಾರ್ಗ್ಯೋಕ್ತ ಕೃಷ್ಣಚತುರ್ದಶೀ ಜನನ ಶಾಂತಿಃ ॥

*****

5. ದಿನ ಕ್ಷಯಾದಿ ಸರ್ವಗಂಡಾಂತ ಶಾಂತಿಃ

ಅಥ ಉತ್ತರಗಾರ್ಗ್ಯಃ

ಅಥಾತಸ್ಸಂಪ್ರವಕ್ಷ್ಯಾಮಿ ಜನ್ಮಕಾಲೇ ವಿಶೇಷತಃ ।
ಗಂಡಾನಾನಾಂಚ ನಾಮಾನಿ ಮಹಾದೋಷಕರಾಣಿ ಚ ॥

ಜನ್ಮಕಾಲದಲ್ಲಿ ವಿಶೇಷವಾಗಿ ಮಹಾದೋಷಕಾರಿಯಾದಂತಹ ನಾನಾ ರೀತಿಯಾದ ಗಂಡಗಳ(ದೋಷ) ಹೆಸರನ್ನು ಹೇಳುತ್ತೇವೆ ॥

ದಿನಕ್ಷಯೇ ವ್ಯತೀಪಾತೇ ವ್ಯಾಘಾತೇ ವಿಷ್ಟಿವೈಧೃತೌ ।
ಶೂಲೇ ಗಂಡೇsತಿ ಗಂಡೇ ಚ ಪರಿಘೇ ಯಮಕಂಟಕೇ ॥

ದಿನಕ್ಷಯ, ವ್ಯತೀಪಾತ, ವ್ಯಾಘಾತ, ವಿಷ್ಟಿ, ವೈಧೃತಿ । ಶೂಲ, ಗಂಡ, ಅತಿಗಂಡ, ಪರಿಘ, ಯಮಕಂಟಕ ಇವುಗಳು ತುಂಬಾ ದೋಷಕಾರಿಗಳು ॥

ಕಾಲಗಂಡೇ ಮೃತ್ಯುಯೋಗೇ ದಗ್ಧಯೋಗೇ ಸುದಾರುಣೇ ।
ತಸ್ಮಿನ್ ಗಂಡದಿನೇ ಪ್ರಾಪ್ತೇ ಪ್ರಸೂತಿರ್ಯದಿ ಜಾಯತೇ ॥

ಕಾಲಗಂಡ, ಮೃತ್ಯುಯೋಗ, ದಗ್ಧಯೋಗ, ಇವುಗಳೆಲ್ಲಾ ಅತ್ಯಂತ ಕ್ರೂರವಾದ ದೋಷವುಳ್ಳದ್ದಾಗಿವೆ । ಈ ರೀತಿ ಮೇಲೆಹೇಳಿದ ಹೆಸರುಳ್ಳ ಗಂಡದಿನದಲ್ಲಿ ಒಂದುವೇಳೆ ಮಗುವಿನ ಜನನವಾದರೆ ॥

ಅತಿದೋಷಕರೀಪ್ರೋಕ್ತಾ ತತ್ರ ಪಾಪಯುತೇಸತಿ ।
ವಿಚಾರ್ಯ ತತ್ರ ದೈವಜ್ಞಂ ಶಾಂತಿಂ ಕುರ್ಯಾದ್ಯಥಾವಿಧಿ ॥

ಅತಿದೋಷಕರವೂ ಹಾಗೂ ಅತ್ಯಂತ ಪಾಪವುಳ್ಳದ್ದೂ ಆಗುತ್ತದೆ । ಆದ್ದರಿಂದ ದೈವಜ್ಞರ ಹತ್ತಿರ ವಿಚಾರಿಸಿ, ವಿಧಿಯಂತೆ ಶಾಂತಿಯನ್ನು ಮಾಡಬೇಕು ॥

ಯಜನಂ ದೇವತಾನಾಂ ಚ ಗ್ರಹಣಾಂ ಚೈವ ಪೂಜನಂ ।
ದೀಪಂ ಶಿವಾಲಯೇ ಭಕ್ತ್ಯಾ ಘೃತೇನ ಪರಿಕಲ್ಪಯೇತ್ ॥

ದೇವತೆಗಳಿಗೆ ಹೋಮ, ಗ್ರಹಗಳಿಗೆ ಪೂಜೆ, ಶಿವಾಲಯದಲ್ಲಿ ಭಕ್ತಿಯಿಂದ ತುಪ್ಪದ ದೀಪವನ್ನು ಹಚ್ಚುವುದು ॥

ಅಭಿಷೇಕಂ ಶಂಕರಾಯ ಅಶ್ವತ್ಥಸ್ಯ ಪ್ರದಕ್ಷಿಣಮ್ ।
ಆಯುರ್ವೃದ್ಧಿಕರಂ ಕಾರ್ಯಂ ಸರ್ವಾರಿಷ್ಟ ವಿನಾಶನಮ್ ॥

ಶಂಕರನಿಗೆ ಅಭಿಷೇಕ, ಅಶ್ವತ್ಥ ಮರಕ್ಕೆ ಪ್ರದಕ್ಷಿಣೆ । ಇವುಗಳು ಎಲ್ಲ ಅರಿಷ್ಟಗಳನ್ನೂ ನಾಶಗೊಳಿಸುವುದೂ ಹಾಗೂ ಆಯುಷ್ಯಾಭಿವೃದ್ಧಿಯನ್ನು ಉಂಟುಮಾಡುವುದೂ ಆಗಿರುವುದರಿಂದ ಯಥಾವಿಧಿಯಾಗಿ ಮಾಡಬೇಕು ॥

ಗುರುದೈವತ ವಿಪ್ರಾಣಾಂ ಪೂಜನಂ ಗೋಪ್ರವರ್ಧನಂ ।
ಪುಷ್ಟ್ಯಾಯುಃ ತುಷ್ಟಿ ಸಿದ್ಧ್ಯರ್ಥಂ ಅಭೀಷ್ಟಫಲ ಸಿದ್ಧಯೇ ॥

ಗುರುಗಳಿಗೆ ಹಾಗೂ ದೇವತೆಗಳಿಗೆ ಹಾಗೂ ಬ್ರಾಹ್ಮಣರಿಗೆ ಮತ್ತು ಗೋವುಗಳಿಗೆ ಪೂಜೆ, ಸತ್ಕಾರಗಳನ್ನು ಮಾಡುವುದು । ಪುಷ್ಟಿ, ಆಯಸ್ಸು, ತುಷ್ಟಿ ಹಾಗೂ ಇಷ್ಟಾರ್ಥಫಲ ಸಿದ್ಧಿಗೆ ಕಾರಣವಾಗುತ್ತವೆ ॥

ಸರ್ವಾರಿಷ್ಟಹರಾರ್ಥಾಯ ಗ್ರಹಯಜ್ಞಂ ಸಮಾಚರೇತ್ ।
ಶಿವಾಯ ವಿಧಿವದ್ಭಕ್ತ್ಯಾ ದೀಪದಾನಂ ಕರೋತಿಯಃ ॥

ಎಲ್ಲಾ ಅರಿಷ್ಟಗಳನ್ನೂ ಪರಿಹರಿಸುವುದಕ್ಕಾಗಿ, ನವಗ್ರಹ ಹೋಮ ಮಾಡಬೇಕು । ಶಿವನ ಅನುಗ್ರಹಕ್ಕಾಗಿ ಯಥಾವಿಧಿಯಂತೆ ಭಕ್ತಿಯಿಂದ ದೀಪದಾನವನ್ನು ಯಾರು ಮಾಡುತ್ತಾರೋ ॥

ಅಖಂಡಂ ಗೋಘೃತೇನೈವ ಸರ್ವಮೃತ್ಯುಂ ಜಯೇನ್ನರಃ ।
ವಿಷ್ಣುಮೂರ್ತಿಂ ಮಹಾಪುಣ್ಯಂ ಅಶ್ವತ್ಥಂ ಶ್ರೀಕರಂ ತಥಾ ॥

ಸಂಪೂರ್ಣ ಹಸುವಿನ ತುಪ್ಪದಿಂದ ದೀಪದಾನ ಮಾಡಿ, ಎಲ್ಲ ರೀತಿಯ ಮೃತ್ಯುವನ್ನೂ ಗೆಲ್ಲುತ್ತಾರೆ । ವಿಷ್ಣುವಿನ ಮೂರ್ತಿ ದಾನವು ಮಹಾಪುಣ್ಯಕರವು, ಅಶ್ವತ್ಥ ಮರವು ಸಂಪತ್ಕರವು ॥

ಪ್ರದಕ್ಷಿಣಂ ನರೋಭಕ್ತ್ಯಾ ಕೃತ್ವಾ ಮೃತ್ಯುಂಜಯಂ ಜಪೇತ್ ।
ಸರ್ವ ಸಂಪತ್ಸಮೃದ್ಧ್ಯರ್ಥಂ ನಿತ್ಯಂ ಕಲ್ಯಾಣವೃದ್ಧಯೇ ॥

ಆದ್ದರಿಂದ ಅರಳಿಮರದ ಪ್ರದಕ್ಷಿಣೆಯನ್ನು ಭಕ್ತಿಯಿಂದ ಮಾಡಿ, ಮೃತ್ಯುಂಜಯ ಮಂತ್ರ ಜಪ ಮಾಡಬೇಕು । ಎಲ್ಲ ಸಂಪತ್ತಿನ ಸಮೃದ್ಧಿಗಾಗಿ ಹಾಗೂ ನಿತ್ಯವೂ ಮಂಗಳಾಭಿವೃದ್ಧಿಗಾಗಿ ಹಾಗೂ ॥

ಅಭೀಷ್ಟ ಫಲ ಸಿದ್ಧ್ಯರ್ಥಂ ಕುರ್ಯಾದ್ಬ್ರಾಹ್ಮಣ ಭೋಜನಂ ।
ಅಭಿಷೇಕಂ ಶಿವೇ ಶಾಂತಿಂ ಕೃತ್ವಾ ಭಕ್ತ್ಯಾ ನರೋತ್ತಮಃ ॥

ಇಷ್ಟಾರ್ಥ ಸಿದ್ಧಿಗಾಗಿ, ಬ್ರಾಹ್ಮಣಭೋಜನ ಮಾಡಿಸಬೇಕು । ಶಿವನಿಗೆ ಅಭಿಷೇಕ ಮಾಡಿ, ನರನು ॥

ಅಕಾಲಮೃತ್ಯುಂ ನಿರ್ಜಿತ್ಯ ದೀರ್ಘಾಯುರ್ಜಾಯತೇ ನರಃ ।
ಗಾಣಪತ್ಯಂ ಪುರುಷಸೂಕ್ತಂ ಸೌರಂ ಮೃತ್ಯುಂಜಯಂ ಶುಭಮ್ ॥

ಅಕಾಲಮೃತ್ಯುವನ್ನು ಜಯಿಸಿ ದೀರ್ಘಾಯುಸ್ಸಿನಿಂದ ಕೂಡಿದವನಾಗುತ್ತಾನೆ । ಗಣಪತಿ ಸೂಕ್ತ, ಪುರುಷಸೂಕ್ತ, ಸೌರಮಂತ್ರ, ಮೃತ್ಯುಂಜಯ ಇವುಗಳ ಜಪವು ಶುಭವು ॥

ಶಾಂತಿಜಾಪ್ಯಂ ರುದ್ರಜಾಪ್ಯಂ ಕೃತ್ವಾ ಮೃತ್ಯುಂಜಯೀ ಭವೇತ್ ।
ಮೂಲೇ ವಾ ಸರ್ವಗಂಡೇ ವಾ ಕುರ್ಯಾದೇತಾನಿ ಯತ್ನತಃ ॥
ಆಯುರ್ವೃದ್ಧಿಕರಾರ್ಥಾಯ ಗಂಡದೋಷ ಪ್ರಶಾಂತಯೇ ।

ಈ ಮೇಲೆ ಹೇಳಿದ ಮಂತ್ರಗಳನ್ನು ಹಾಗೂ ರುದ್ರವನ್ನೂ ಜಪಿಸಿ, ಮೃತ್ಯುವನ್ನು ಜಯಿಸುತ್ತಾನೆ । ಮೂಲಾನಕ್ಷತ್ರದಲ್ಲಿ ಹುಟ್ಟಿದವರಿಗೂ ಹಾಗೂ ಮೇಲೆ ಹೇಳಿದ ಗಂಡಯೋಗ ಗಳಲ್ಲಿ ಹುಟ್ಟಿದವರಿಗೂ, ಈ ಶಾಂತಿಯನ್ನು ॥ ಆಯುಷ್ಯದ ಅಭಿವೃದ್ಧಿಗಾಗಿ, ದೋಷಗಳ ಪರಿಹಾರಕ್ಕಾಗಿ ಅವಶ್ಯವಾಗಿ ಮಾಡಬೇಕು ॥

॥ ಇತ್ಯುತ್ತರ ಗಾರ್ಗ್ಯೋಕ್ತ ದಿನಕ್ಷಯಾದಿ ಸರ್ವಗಂಡಾಂತ ಶಾಂತಿಃ ॥

******

6. ವೈಧೃತೀ ವ್ಯತೀಪಾತ ಸಂಕ್ರಾಂತ್ಯಾದಿ ಜನನಶಾಂತಿಃ

ಅಥ ಶೌನಕಃ

ಅಥಾತಸ್ಸಂಪ್ರವಕ್ಷ್ಯಾಮಿ ಶೌನಕಶ್ಶಾಂತಿಮುತ್ತಮಾಮ್ ।
ವೈಧೃತೌ ಚ ವ್ಯತೀಪಾತಾತ್ ಮಹಾದೋಷೋಽಭಿಜಾಯತೇ ॥

ಈಗ ನಾವು ಶೌನಕರು ಹೇಳಿದ ವೈಧೃತೀ, ವ್ಯತೀಪಾತದಂತಹ ಮಹಾದೋಷಗಳನ್ನು ಪರಿಹರಿಸುವ ಉತ್ತಮವಾದ ಶಾಂತಿಯನ್ನು ಹೇಳುತ್ತೇವೆ ॥

ಕುಮಾರಜನ್ಮಕಾಲೇ ತು ವ್ಯತೀಪಾತಶ್ಚ ವೈಧೃತಿಃ ।
ಸಂಕ್ರಮಶ್ಚ ರವೇಸ್ತತ್ರ ಜಾತೋ ದಾರಿದ್ರ್ಯ ಕಾರಕಃ ॥

ಮಗುವಿನ ಜನ್ಮಕಾಲದಲ್ಲಿ ವ್ಯತೀಪಾತ ಅಥವ ವೈಧೃತಿ ಅಥವ । ಸಂಕ್ರಮಣವು ಇದ್ದರೆ, ಹುಟ್ಟುವ ಮಗುವು ದಾರಿದ್ರ್ಯಕ್ಕೆ ಕಾರಣವಾಗುತ್ತದೆ ॥

ದಾರಿದ್ರ್ಯಂ ಚ ಮಹಾದುಃಖಂ ವ್ಯಾಧಿ ಪೀಡಾಂ ಮಹದ್ಭಯಂ ।
ಅಶ್ರಿಯಂ ಮೃತ್ಯುಮಾಪ್ನೋತಿ ನಾತ್ರಕಾರ್ಯಾ ವಿಚಾರಣಾ ॥

ದಾರಿದ್ರ್ಯ, ಮಹಾದುಃಖ, ರೋಗ, ಭಯ । ಬಡತನ, ಸಾವು, ಇವೆಲ್ಲವನ್ನೂ ಮೇಲೆ ಹೇಳಿದ ಕಾಲ, ಲಕ್ಷಣದಲ್ಲಿ ಹುಟ್ಟಿದ ಮಗುವು ಪಡೆಯುತ್ತದೆ, ಸಂಶಯವಿಲ್ಲ ॥

ಸ್ತ್ರೀಣಾಂ ಚ ಶೋಕದುಃಖಂ ಚ ಸರ್ವನಾಶಕರೋ ಭವೇತ್ ।
ಶಾಂತಿರ್ವಾ ಪುಷ್ಕಳಾ ಕಾರ್ಯಾ ತತ್ರದೋಷ ವಿನಾಶಿನೀ ॥

ಈ ಲಕ್ಷಣದಲ್ಲಿ ಸ್ತ್ರೀಯರು ಹುಟ್ಟಿದರೆ, ಶೋಕ – ದುಃಖ – ಸರ್ವನಾಶಕ್ಕೂ ಕಾರಣವಾಗುತ್ತದೆ । ಆದ್ದರಿಂದ ಶಾಂತಿಕರ್ಮವನ್ನು ಚೆನ್ನಾಗಿ ಮಾಡಬೇಕು, ಇದರಿಂದ ಎಲ್ಲ ದೋಷ ನಿವಾರಣೆ ಆಗುತ್ತದೆ ॥

ಗೋಮುಖ ಪ್ರಸವಂ ಕುರ್ಯಾಚ್ಛಾಂತಿಂ ಕುರ್ಯಾತ್ಪ್ರಯತ್ನತಃ ।
ಜಪಾಭಿಷೇಕ ದಾನಾನಿ ಹೋಮಾನಪಿ ವಿಶೇಷತಃ ॥

ಗೋಮುಖ ಪ್ರಸವ ಶಾಂತಿಯನ್ನೂ ಅವಶ್ಯವಾಗಿ ಮಾಡಬೇಕು । ಜಪ, ಅಭಿಷೇಕ, ದಾನ, ಹೋಮಾದಿಗಳನ್ನೂ ವಿಶೇಷವಾಗಿ ಮಾಡಬೇಕು ॥

ನವಗ್ರಹಮಖಂ ಕುರ್ಯಾತ್ತಸ್ಯ ದೋಷೋಪಶಾಂತಯೇ ।
ಪ್ರಥಮಂ ಗೋಮುಖಾಜ್ಜನ್ಮ ತತಶ್ಶಾಂತಿಂ ಸಮಾಚರೇತ್ ॥

ನವಗ್ರಹ ಹೋಮವನ್ನು ದೋಷಶಾಂತಿಗೆ ಮಾಡಬೇಕು । ಮೊದಲು ಗೋಮುಖ ಜನನ ನಂತರ ಶಾಂತಿಯನ್ನು ಮಾಡಬೇಕು ॥

ಗೃಹಸ್ಯ ಪೂರ್ವದಿಗ್ಭಾಗೇ ಗೋಮಯೇನೋಪಲಿಪ್ಯ ಚ ।
ಅಲಂಕೃತೇ ಶುದ್ಧದೇಶೇ ವ್ರೀಹಿರಾಶಿಂ ಪ್ರಕಲ್ಪಯೇತ್ ॥

ಮನೆಯ ಪೂರ್ವಭಾಗದಲ್ಲಿ ಗೋಮಯವನ್ನು ನೆಲಕ್ಕೆ ಸಾರಿಸಿ । ಅಲಂಕೃತವಾದ ಶುದ್ಧ ಜಾಗದಲ್ಲಿ ಭತ್ತದ ರಾಶಿಯನ್ನು ಹರಡಬೇಕು ॥

ಪಂಚದ್ರೋಣಮಿತಂ ಧಾನ್ಯಂ ತದರ್ಧಂ ತಂಡುಲಂ ತಥಾ ।
ತದರ್ಧಂ ತು ತಿಲೈಃ ಕುರ್ಯಾದನ್ಯೋನ್ಯೋಪರಿ ಕಲ್ಪಯೇತ್ ॥

5 ಸೇರು ಧಾನ್ಯವನ್ನು ಭತ್ತ, ಅದರಅರ್ಧ ಅಕ್ಕಿ । ಅದರ ಅರ್ಧ ಎಳ್ಳು ಇವುಗಳನ್ನು ಮೇಲೆ ಮೇಲೆ ಪ್ರತ್ಯೇಕವಾಗಿ ಹರಡಬೇಕು ॥

ದ್ರವ್ಯತ್ರಿತಯರಾಶೌ ತು ಅಷ್ಟಪತ್ರಂ ಲಿಖೇದ್ಬುಧಃ ।
ಪುಣ್ಯಾಹಂ ವಾಚಯಿತ್ವಾತು ಆಚಾರ್ಯಂ ವೃಣುಯಾತ್ಪುರಾ ॥

ಈ 3 ದ್ರವ್ಯರಾಶಿಯ ಮೇಲೆ ಅಷ್ಟದಳವನ್ನು ಬರೆಯಬೇಕು । ಮೊದಲು ಪುಣ್ಯಾಹ ಮಾಡಿ ಆಚಾರ್ಯನನ್ನು ಆಹ್ವಾನಿಸಬೇಕು ॥

ಪ್ರತಿಮಾಂ ಸ್ಥಾಪಯೇದ್ಧೀಮಾನ್ ಸಾಧಿಪ್ರತ್ಯಧಿದೇವತಾಮ್ ।
ಚಂದ್ರಾದಿತ್ಯಾಕೃತೀ ಪಾರ್ಶ್ವೇ ಮಧ್ಯೇ ವೈಧೃತಿಮರ್ಚಯೇತ್ ॥

ಅಧಿಪ್ರತ್ಯಧಿಗಳ ಸಹಿತವಾದ ನವಗ್ರಹಗಳ ಪ್ರತಿಮೆಯನ್ನು ಸ್ಥಾಪಿಸಬೇಕು । ಚಂದ್ರ, ಆದಿತ್ಯ, ಇವರ ಮೂರ್ತಿಯನ್ನು ಪಕ್ಕದಲ್ಲಿಯೂ, ವೈಧೃತಿಯನ್ನು ಮಧ್ಯದಲ್ಲಿಯೂ ಪೂಜಿಸಬೇಕು ॥

ಏವಮೇವ ವ್ಯತೀಪಾತ ಶಾಂತೌ ಸಂಕ್ರಮಣಸ್ಯತು ।
ಭಾನೋರುತ್ತರತೋ ರುದ್ರಂ ಅಗ್ನಿಂ ದಕ್ಷಿಣತೋ ಯಜೇತ್ ॥

ವ್ಯತೀಪಾತ, ಸಂಕ್ರಮಣ ಶಾಂತಿಗಳಲ್ಲೂ ಹೀಗೇ ಮಾಡಬೇಕು । ರವಿಯ ಉತ್ತರದಲ್ಲಿ ರುದ್ರನನ್ನೂ, ದಕ್ಷಿಣದಲ್ಲಿ ಅಗ್ನಿಯನ್ನೂ ಪೂಜಿಸಬೇಕು ॥

ಅಧಿದೈವಂ ಭವೇತ್ಸೂರ್ಯಶ್ಚಂದ್ರಃ ಪ್ರತ್ಯಧಿದೇವತಾ ।
ತತ್ತದ್ವ್ಯಾಹೃತಿ ಪೂರ್ವೇಣ ತತ್ತನ್ಮಂತ್ರೇಣ ಪೂಜಯೇತ್ ॥

ಅಧಿದೇವತೆಯು ಸೂರ್ಯನು, ಪ್ರತ್ಯಧಿದೇವತೆಯು ಚಂದ್ರನು । ವ್ಯಾಹೃತಿ ಪೂರ್ವಕವಾಗಿ ಗ್ರಹಗಳ ಮಂತ್ರಗಳಿಂದ ಪೂಜಿಸಬೇಕು ॥

ತ್ರ್ಯಂಬಕೇನ ಮಂತ್ರೇಣ ಪ್ರಧಾನ ಪ್ರತಿಮಾಂ ಯಜೇತ್ ।
ಉತ್ಸೂರ್ಯ ಇತಿ ಮಂತ್ರೇಣ ಸೂರ್ಯಪೂಜಾಂ ಸಮಾಚರೇತ್ ॥

ತ್ರ್ಯಂಬಕ ಮಂತ್ರದಿಂದ ಪ್ರಧಾನಪ್ರತಿಮೆಯನ್ನು ಪೂಜಿಸಿ । ಉತ್ಸೂರ್ಯ ಮಂತ್ರದಿಂದ ರವಿಯನ್ನು ಪೂಜಿಸಬೇಕು ॥

ಉಪಚಾರೈಃ ಷೋಡಶಭಿರ್ಯದ್ವಾ ಪಂಚೋಪಚಾರಕೈಃ ।
ಅರ್ಚಯೇದ್ಗಂಧ ಪುಷ್ಪಾದ್ಯೈಃ ಫಲನೈವೇದ್ಯಮರ್ಪಯೇತ್ ॥

ಪಂಚ / ಷೋಡಶ ಉಪಚಾರಗಳಿಂದ ಪೂಜಿಸಿ । ಗಂಧಾದಿಗಳಿಂದ ಪೂಜಿಸಿ, ಫಲ ನೈವೇದ್ಯವನ್ನು ಅರ್ಪಿಸಬೇಕು ॥

ಮೃತ್ಯುಂಜಯೇನ ಮಂತ್ರೇಣ ಪ್ರಧಾನ ಪ್ರತಿಮಾಂ ಯಜೇತ್ ।
ಅಷ್ಟೋತ್ತರಸಹಸ್ರಂ ವಾ ಅಷ್ಟೋತ್ತರಶತಂ ತು ವಾ ॥

ಪ್ರಧಾನವಾದ ದೇವತೆಗೆ ಮೃತ್ಯುಂಜಯ ಮಂತ್ರದಿಂದ ಹೋಮಿಸಬೇಕು । 1008 ಅಥವಾ 108 ॥

ಅಷ್ಟಾವಿಂಶತಿಧಾ ವಾऽಥ ಪ್ರಜಪ್ಯಾಥ ಸ್ವಶಕ್ತಿತಃ ।
ಸರ್ವಸೌರಂ ಪ್ರಜಪ್ಯಾಥ ಸೋಮಾರ್ಧಂ ಸೋಮಮಂತ್ರತಃ ॥

ಅಥವ 28 ಸಂಖ್ಯೆಗಳಿಂದ ಜಪಿಸಿ, ಹೋಮಿಸಬೇಕು । ಸೌರಮಂತ್ರ / ಚಂದ್ರಮಂತ್ರ ಹಾಗೂ ॥

ಆನೋಭದ್ರೇತಿ ಸೂಕ್ತಂ ಚ ಭದ್ರಾ ಅಗ್ನೇಶ್ಚ ಸೂಕ್ತಕಮ್ ।
ಜಪೇಚ್ಚ ಪೌರುಷಂ ಸೂಕ್ತಂ ತ್ರ್ಯಂಬಕಮತಃಪರಮ್ ॥

ಆನೋಭದ್ರಾ, ಭದ್ರಾಅಗ್ನೇ ಹಾಗೂ ಪುರುಷಸೂಕ್ತ ಹಾಗೂ ತ್ರ್ಯಂಬಕಗಳಿಂದ ಜಪ ಹೋಮ ಮಾಡಬೇಕು ॥

ಕುಂಭಂ ಸ್ಪೃಷ್ಟ್ವಾ ಚತುರ್ದಿಕ್ಷು ಜಪಂ ಕುರ್ಯುಃ ಅಥರ್ತ್ವಿಜಾಃ ।
ಕುಂಭಸ್ಯ ಪಶ್ಚಿಮೇದೇಶೇ ಸ್ಥಂಡಿಲೇsಗ್ನಿಂ ಪ್ರಕಲ್ಪಯೇತ್ ॥

ಕುಂಭವನ್ನು 4 ದಿಕ್ಕುಗಳಿಂದಲೂ ಮುಟ್ಟಿಕೊಂಡು ಜಪಿಸಿ । ಕುಂಭದ ಪಶ್ಚಿಮದಲ್ಲಿ ಕುಂಡವನ್ನು ಸ್ಥಾಪಿಸಬೇಕು ॥

ಸ್ವಗೃಹ್ಯೋಕ್ತ ವಿಧಾನೇನ ಕಾರಯೇತ್ ಸಂಸ್ಕೃತಾನಲಮ್ ।
ತ್ರಯಂಬಕೇನ ಮಂತ್ರೇಣ ಸಮಿದಾಜ್ಯ ಚರೂನ್ ಹುನೇತ್ ॥

ಸ್ವಗೃಹ್ಯಸೂತ್ರದಂತೆ ಅಗ್ನಿಸ್ಥಾಪನೆಯೇ ಮೊದಲಾಗಿ ಪ್ರಯೋಗವನ್ನು ಮಾಡಬೇಕು । ತ್ರ್ಯಂಬಕ ಮಂತ್ರದಿಂದ, ಸಮಿತ್ ಚರು, ಆಜ್ಯಗಳಿಂದ ಹೋಮಿಸಬೇಕು ॥

ಮೃತ್ಯುಂಜಯೇನ ಮಂತ್ರೇಣ ತಿಲಹೋಮಂ ಸಮಾಚರೇತ್ ।
ತತಃ ಸ್ವಿಷ್ಟಕೃತಂ ಹುತ್ವಾ ಅಭಿಷೇಕಂ ಸಮಾಚರೇತ್ ॥

ಮೃತ್ಯುಂಜಯ ಮಂತ್ರದಿಂದ ತಿಲ ಹೋಮ ಮಾಡಬೇಕು । ನಂತರ ಸ್ವಿಷ್ಟಕೃತ್ ಮೊದಲಾದ ಉತ್ತರ ತಂತ್ರವನ್ನು ಮಾಡಿ, ಯಜಮಾನನಿಗೆ ಅಭಿಷೇಕ ಮಾಡಬೇಕು ॥

ಏವಂ ಯಃ ಕುರುತೇ ಮರ್ತ್ಯೋ ನ ಚ ದುಃಖಮವಾಪ್ನುಯಾತ್ ।
ಆಯುರಾರೋಗ್ಯಮೈಶ್ವರ್ಯಂ ಮಾತಾಪಿತ್ರೋಶ್ಶಿಶೋರಪಿ ॥

ಈ ರೀತಿ ಆಚರಿಸಿದವನು ದುಃಖವನ್ನು ಹೊಂದುವುದಿಲ್ಲ । ಆಯಸ್ಸು, ಆರೋಗ್ಯ, ಐಶ್ವರ್ಯಗಳು ವೃದ್ಧಿಸುತ್ತವೆ ॥

ಸರ್ವದುಃಖ ನಿವೃತ್ತಿಸ್ಯಾತ್ ಪುತ್ರಪೌತ್ರ ಪ್ರವರ್ಧನಮ್ ।
ಸರ್ವಾನ್ಕಾಮಾನವಾಪ್ನೋತಿ ಸುಖೀಭೂತ್ವಾ ಚಿರಂ ವಸೇತ್ ॥

ಎಲ್ಲ ದುಃಖಗಳು ನಾಶವಾಗಿ ಸಂತತಿಯ ವೃದ್ಧಿ ಆಗುತ್ತದೆ । ಎಲ್ಲಾ ಕಾಮನೆಗಳನ್ನೂ ಪಡೆದು, ಸುಖಿಯಾಗಿ ಬಾಳುತ್ತಾರೆ ॥

॥ ಇತಿ ಶೌನಕೀಯೇ ವೈಧೃತಿ ವ್ಯತೀಪಾತ ಸಂಕ್ರಾಂತಿ ಜನನಶಾಂತಿಃ ॥

******

7. ವಿಷ ಘಟಿಕಾ ಜನನಶಾಂತಿಃ

ಅಥ ವೃದ್ಧಗಾರ್ಗ್ಯಃ

ವಿಷನಾಡೀಷು ಸಂಜಾತಃ ಪಿತೃಮಾತೃ ಧನಾತ್ಮನಾಮ್ ।
ನಾಶಕೃದ್ವಿಷ ಶಸ್ತ್ರಾದ್ಯೈಃ ಕ್ರೂರೇ ಲಗ್ನೇsಷ್ಟಮೇsಪಿ ವಾ ॥

ವಿಷನಾಡಿಗಳಲ್ಲಿ ಹುಟ್ಟಿದಂತಹ ಮಗುವು, ತಂದೆತಾಯಿಯರ ಆಯುಷ್ಯ, ಆರೋಗ್ಯ ಮತ್ತು ಐಶ್ವರ್ಯಗಳನ್ನು ನಾಶಮಾಡುವುದಾಗುತ್ತದೆ । ಲಗ್ನದಲ್ಲಿ ದುಷ್ಟಗ್ರಹಗಳಿದ್ದು ಅಥವಾ ಲಗ್ನಾಷ್ಟಮಗಳಲ್ಲಿ ದುಷ್ಟಗ್ರಹಗಳಿದ್ದು ಅವು ಬಲಿಷ್ಠವಾಗಿದ್ದರೆ, ವಿಷ – ಶಸ್ತ್ರಾದಿಗಳಿಂದ ತಂದೆತಾಯಿಯರ ಮರಣವು ಉಂಟಾಗುತ್ತದೆ ॥

ತದ್ದೋಷ ಪರಿಹಾರಾರ್ಥಂ ಶಾಂತಿಕರ್ಮ ಸಮಾಚರೇತ್ ।
ರುದ್ರೋ ಯಮೋsಗ್ನಿರ್ಮೃತ್ಯುಶ್ಚ ದೇವತಾಃ ಪರಿಕೀರ್ತಿತಾಃ ॥

ಈ ದೋಷದ ಪರಿಹಾರಕ್ಕಾಗಿ ಶಾಂತಿಕರ್ಮವನ್ನು ಮಾಡಬೇಕು । ಆ ಶಾಂತಿಕರ್ಮಕ್ಕೆ ರುದ್ರ, ಯಮ, ಅಗ್ನಿ ಮತ್ತು ಮೃತ್ಯುಗಳೇ ದೇವತೆಗಳು ॥

ಕದ್ರುದ್ರಾಯೇತಿ ಮಂತ್ರೇಣ ಯಮಾಯ ಸೋಮಮಿತ್ಯಥ ।
ಅಗ್ನಿರ್ಮೂರ್ಧೇತಿ ಮಂತ್ರೇಣ ಪರಂಮೃತ್ಯೋ ಇತಿ ತ್ವಥ ॥

ಕದ್ರುದ್ರಾಯ ಮಂತ್ರದಿಂದ ಹಾಗೂ ಯಮಾಯ ಸೋಮಂ ಮಂತ್ರಗಳಿಂದ । ಮತ್ತೂ ಅಗ್ನಿರ್ಮೂರ್ಧಾ ಮಂತ್ರಗಳಿಂದಲೂ ಹಾಗೂ ಪರಂ ಮೃತ್ಯೋ ಮಂತ್ರಗಳಿಂದ ॥

ಏತೈಶ್ಚತುರ್ಭಿರ್ಮಂತ್ರೈಶ್ಚ ಕ್ರಮಾದರ್ಚೇತ್ ಹುನೇತ್ತತಃ ।
ಸಮಿಚ್ಚರು ಘೃತದ್ರವ್ಯೈಃ ಪ್ರತ್ಯೇಕಂ ಚ ಯಥಾಕ್ರಮಮ್ ॥

ಈ ಮಂತ್ರಗಳಿಂದ ಕ್ರಮವಾಗಿ ಆಯಾಯಾ ದೇವತೆಗಳಿಗೆ ಪೂಜಿಸಿ । ಸಮಿತ್, ಚರು, ಆಜ್ಯದ್ರವ್ಯಗಳಿಂದ ಹೋಮಿಸಬೇಕು ॥

ಋತ್ವಿಗ್ಭಿಶ್ಚ ಸಹಾಚಾರ್ಯೋ ಹುನೇದಷ್ಟಸಹಸ್ರಕಮ್ ।
ಅಷ್ಟೋತ್ತರಶತಂ ವಾsಥ ಅಷ್ಟಾವಿಂಶತಿ ಮೇವ ವಾ ॥

ಋತ್ವಿಜರು, ಆಚಾರ್ಯರೂ ಸೇರಿ, 1008। ಅಥವ 108 ಅಥವಾ 28 ಸಂಖ್ಯೆಗಳಿಂದ ಹೋಮಿಸಬೇಕು ॥

ತತಸ್ತಿಲೈರ್ಹುನೇದ್ದೇವಾನ್ ತತ್ತನ್ಮಂತ್ರೈಶ್ಚ ಕಲ್ಪವಿತ್ ।
ತತೋಽಭಿಷೇಚಯೇದ್ದಾನ ಮಂತ್ರೈಃ ಪೌರಾಣಿಕೈಃ ಕ್ರಮಾತ್ ॥

ನಂತರ ತಿಲಹೋಮವನ್ನು ಆಯಾಯಾ ಮಂತ್ರಗಳಿಂದ ಕ್ರಮವಾಗಿ ಮಾಡಬೇಕು। ನಂತರ ಯಜಮಾನನಿಗೆ ಮಂತ್ರಗಳಿಂದ ಕಲಶದ ನೀರನ್ನು ಹಾಕಿ, ದಾನಾದಿಗಳನ್ನು ಕೊಡಿಸಬೇಕು ॥

ಗೋ ಭೂ ಹಿರಣ್ಯ ವಸ್ತ್ರೈಶ್ಚ ಆಚಾರ್ಯಂ ಪೂಜಯೇತ್ಸುಧೀಃ ।
ಏವಂ ಕೃತೇ ವಿಧಾನೇನ ವಿಷದೋಷಃ ಪ್ರಶಾಮ್ಯತಿ ॥

ಗೋ, ಭೂ, ಹಿರಣ್ಯಾದಿಗಳಿಂದ ಆಚಾರ್ಯರನ್ನು ಸತ್ಕರಿಸಬೇಕು। ಈ ರೀತಿ ಆಚರಿಸಿದರೆ ವಿಷನಾಡಿ ಜನನ ದೋಷವು ಪರಿಹಾರವಾಗುತ್ತದೆ ॥

॥ ಇತಿ ವೃದ್ಧಗಾರ್ಗ್ಯೋಕ್ತ ವಿಷಘಟಿಕಾ ಜನನಶಾಂತಿಃ ॥

******

8. ಗ್ರಹಯೋಗ ಜನನಶಾಂತಿಃ

ಅಥ ಮದನರತ್ನ ಯಮಲಃ

ಅಥಾತಃ ಸಂಪ್ರವಕ್ಷ್ಯಾಮಿ ಗ್ರಹಯೋಗಾಖ್ಯ ಶಾಂತಿಕಂ ।
ಏಕರ್ಕ್ಷೇತಿಗ್ಮ ರಾಶೌ ವಾ ಏಕರಾಶ್ಯರ್ಕ್ಷ ಭೇದನೇ ॥

ಗ್ರಹಯೋಗ ಶಾಂತಿಯನ್ನು ಹೇಳುತ್ತೇವೆ । ಎರಡು ರಾಶಿಗಳಲ್ಲಿರುವ ಒಂದು ನಕ್ಷತ್ರದಲ್ಲಿ ಹುಟ್ಟಿದರೆ ಅಥವಾ ಎರಡು ನಕ್ಷತ್ರಗಳುಳ್ಳ ಒಂದು ರಾಶಿಯಲ್ಲಿ ಹುಟ್ಟಿದರೆ ಈ ಗ್ರಹ ಯೋಗ ಶಾಂತಿಯನ್ನು ಮಾಡಬೇಕು ॥

ಶಶಿಸೂರ್ಯ ಸಮಾಯುಕ್ತೇ ಗ್ರಹಭಯ ಸಮನ್ವಿತೇ ।
ದುರ್ಭಿಕ್ಷಾದಿ ಭಯೇ ಚೈವ ಚತುರ್ಭಯ ಸಮನ್ವಿತೇ ॥

ಸೂರ್ಯಚಂದ್ರರು ಸೇರಿದಾಗ, ಗ್ರಹಭಯವು ಉಂಟಾಗುತ್ತದೆ । ಇದರಿಂದ ದುರ್ಭಿಕ್ಷ ಮುಂತಾದ ನಾಲ್ಕು ರೀತಿಯ ಆಪತ್ತುಗಳು ಉಂಟಾಗುತ್ತವೆ ॥

ಮಹಾರೋಗಭಯಂ ರಾಷ್ಟ್ರಕ್ಷಯೋ ವೃಷ್ಟಿ ವಿನಾಶನಂ ।
ಪಂಚಗ್ರಹ ಸಮಾಯೋಗೇ ದುರ್ಭಿಕ್ಷಂ ಸಂಕರಾದಿಕಮ್ ॥

ಮಹಾರೋಗಗಳ ಭಯ, ರಾಷ್ಟ್ರಕ್ಕೆ ಆಪತ್ತು, ಅತಿವೃಷ್ಟಿ ಈ ಆಪತ್ತುಗಳ ಸಾಧ್ಯತೆ ಇರುತ್ತದೆ । 5 ಗ್ರಹಗಳು ಒಂದೇ ರಾಶಿ ಅಥವ ನಕ್ಷತ್ರಗಳಲ್ಲಿ ಸೇರಿದಾಗ, ದುರ್ಭಿಕ್ಷ – ಸಂಕರ(ಎಲ್ಲಾ ರೀತಿಯ ಬೆರಕೆಗಳು) ಉಂಟಾಗುತ್ತದೆ ॥

ನೃಪವೈರಂ ಗರ್ಭನಾಶೋ ಜಾಯತೇ ಜನನಾಶನಂ ।
ಗ್ರಹಷಟ್ಕ ಸಮಾಯೋಗೇ ಮಂತ್ರಿಣಾಂ ಮರಣಂ ಭವೇತ್ ॥

ರಾಜರಲ್ಲಿ ವೈರತ್ವ, ಯುದ್ಧ, ಗರ್ಭನಾಶ, ಜೀವಿಗಳ ನಾಶವೂ ಆಗುತ್ತದೆ । 6 ಗ್ರಹಗಳು ಒಂದೇಕಡೆಯಲ್ಲಿ ಸೇರಿದಾಗ, ಮಂತ್ರಿಗಳ ಸಾವಾಗುತ್ತದೆ ॥

ಪಶ್ವಶ್ವಾದಿ ಭಯಂ ಸರ್ವಂ ಸಂಕರಾದಿ ಜನಕ್ಷಯಃ ।
ಪಟ್ಟರಾಜ್ಞೋ ವಿನಾಶೋ ವಾ ಮಹಾಭಯಮಥಾಪಿ ವಾ ॥

ಮತ್ತೂ ಪಶುಗಳ ನಾಶ, ಎಲ್ಲಾ ರೀತಿಯ ಬೆರಕೆ ಹಾಗೂ ಅಪಾರ ಸಾವಾಗುತ್ತವೆ। ಹಾಗೂ ರಾಜ ಅಥವ ಯುವರಾಜನ ನಾಶ ಅಥವ ದೊಡ್ಡ ಭೂಕಂಪ, ಪ್ರವಾಹ, ಮಾರುತಗಳು ಉಂಟಾಗುತ್ತವೆ ॥

ಸಪ್ತಗ್ರಹ ಸಮಾಯೋಗೇ ಕ್ಷಿತೀಶ ಮರಣಂ ಧ್ರುವಂ।
ಜಗತ್ಪ್ರಳಯಮೇವಾಪಿ ತದಾ ನಿರ್ಮಾನುಷಂ ಜಗತ್ ॥

7 ಗ್ರಹಗಳು ಒಂದೇಕಡೆ ಸೇರಿದರೆ, ರಾಜನ ನಾಶವು ನಿಶ್ಚಿತವು। ಹಾಗೂ ಜಗತ್ತಿನ ಪ್ರಳಯ ಮತ್ತು ಅಪಾರವಾದ ಮನುಷ್ಯರ ನಾಶವು ಆಗುತ್ತದೆ ॥

ಸೂರ್ಯಸ್ಯಾತ್ ಅತಿರಿಕ್ತಶ್ಚೇತ್ತದಾ ಯೋಗೋ ಮಹಾದ್ಭುತಃ।
ವಿನಾ ಚಂದ್ರೇಣ ಯೋಗೋಪಿ ಜಗತ್ಪ್ರಳಯ ಕಾರಣಮ್ ॥

ಸೂರ್ಯನು ಈ ಯೋಗದಿಂದ ಬೇರೆಯಾಗಿ ಉಳಿದರೆ ಆಗ ಅದ್ಭುತ ಯೋಗವು ಉಂಟಾಗುತ್ತದೆ। ಚಂದ್ರನು ಈ ಗುಂಪಿನಲ್ಲಿ ಸೇರದಿದ್ದರೂ ಜಗತ್ತಿನ ನಾಶ ನಿಶ್ಚಿತ ॥

ತದೃಕ್ಷ ಜಾತ ಜಂತೂನಾಂ ಮಹಾರೋಗೋ ಮಹಾಭಯಂ।
ಅರ್ಥನಾಶಃ ಸ್ಥಾನನಾಶೋ ಮಾನಹಾನಿರ್ನೃಪೀಡನಮ್ ॥

ಹಾಗೂ ಈ ನಕ್ಷತ್ರ ರಾಶಿಗಳಲ್ಲಿ ಹುಟ್ಟಿದವರಿಗೆ ಮಹಾರೋಗ, ಭಯ ಉಂಟಾಗುತ್ತದೆ। ಮತ್ತೂ ಐಶ್ವರ್ಯ, ಅಧಿಕಾರ, ಮಾನ, ರಾಜಪೀಡೆ, ಇವುಗಳು ಉಂಟಾಗುತ್ತವೆ ॥

ಷಣ್ಮಾಸಾಭ್ಯಂತರೇ ವಾಪಿ ಆಯುರ್ಹಾನಿಃ ಶ್ರಿಯಸ್ತಥಾ।
ಜನ್ಮಾಷ್ಟದ್ವಾದಶೇ ರಾಶೌ ಚತುರ್ಥೇ ಪಂಚಮೇಪಿ ವಾ ॥

6 ತಿಂಗಳ ಒಳಗೆ ಈ ರಾಶಿ ನಕ್ಷತ್ರಗಳ ಮನುಷ್ಯರು ನಾಶಹೊಂದುತ್ತಾರೆ, ಅವರ ಐಶ್ವರ್ಯವೂ ನಾಶವಾಗುತ್ತದೆ। ಜಾತಕದಲ್ಲಿ ಗ್ರಹಯೋಗವು ಲಗ್ನದಿಂದ 8, 12, 4 ಅಥವ 5 ॥

ಪೂರ್ವೋಕ್ತ ಫಲಗೇವಾತಸ್ತಸ್ಯಾಃ ಶಾಂತಿಂಪ್ರಯತ್ನತಃ।
ಕುರ್ಯಾದ್ದೋಷಾನುಸಾರೇಣ ವಿತ್ತಶಾಠ್ಯಂ ನ ಕಾರಯೇತ್ ॥

ಈ ಸ್ಥಾನಗಳಲ್ಲಿ ಉಂಟಾದರೂ ಪೂರ್ವೋಕ್ತ ಫಲವು ಆಗಿಯೇ ಆಗುತ್ತದೆ। ಹಾಗಾಗಿ ದೋಷದ ಪರಿಹಾರಕ್ಕೆ ಶಾಂತಿಯನ್ನು ಮಾಡಲೇಬೇಕು ॥

ಲಿಖೇದ್ಗ್ರಹಾಕೃತಿಂ ತತ್ರ ಸ್ಥಾಪಯೇತ್ಪ್ರತಿಮಾಂ ತತಃ ।
ಅಧಿಪ್ರತ್ಯಧಿ ದೇವಾದೀನ್ ದಕ್ಷಿಣೋತ್ತರತಃ ಕ್ಷಿಪೇತ್ ॥

ಆ ಶಾಂತಿಕರ್ಮದಲ್ಲಿ ಆಯಾ ಗ್ರಹದ ಆಕೃತಿಗಳನ್ನು ಬರೆದು, ಅದರ ಮೇಲೆ ಗ್ರಹಗಳ ಪ್ರತಿಮೆಯನ್ನಿಟ್ಟು ಪೂಜಿಸಬೇಕು । ಅದರ ದಕ್ಷಿಣ – ಉತ್ತರ ಪಕ್ಕಗಳಲ್ಲಿ ಅಧಿ, ಪ್ರತ್ಯಧಿದೇವತೆಗಳ ಆಕೃತಿಗಳನ್ನೂ ಇಡಬೇಕು ॥

ಗ್ರಹಪೂಜಾದಿಕಂ ಕೃತ್ವಾ ನೈವೇದ್ಯಾಂತ ಸಮರ್ಪಯೇತ್ ।
ತತೋ ಹೋಮಂ ಪ್ರಕುರ್ವೀತ ಸ್ವಗೃಹ್ಯೋಕ್ತ ವಿಧಾನತಃ ॥

ಪೂಜೆಯನ್ನು ನೈವೇದ್ಯಾಂತವಾಗಿ ಮಾಡಬೇಕು । ನಂತರ ಆಯಾಗ್ರಹಗಳ ಹೋಮವನ್ನು ಗೃಹ್ಯಸೂತ್ರ ವಿಧಾನದಿಂದ ಆದ ಅಗ್ನಿಯಲ್ಲಿ ಮಾಡಬೇಕು ॥

ತತ್ತದ್ಗ್ರಹೋಕ್ತ ವಿಧಿನಾ ತತ್ತನ್ಮಂತ್ರೈರ್ಹುನೇದಥ ।
ಚರ್ವಾಜ್ಯೇ ಜುಹುಯಾತ್ಪಶ್ಚಾತ್ ತಿಲಾಹುತಿಮಥಾಚರೇತ್ ॥

ಆಯಾಯಾ ಗ್ರಹಗಳಿಗೆ ವಿಧಿಸಿದಂತೆ, ಆಯಾ ಮಂತ್ರಗಳಿಂದ ಹೋಮಿಸಬೇಕು । ಚರು, ಆಜ್ಯಗಳಿಂದ ಹೋಮಿಸಿ, ನಂತರ ತಿಲದಿಂದಲೂ ಹೋಮಿಸಬೇಕು ॥

ಅಥ ಸ್ವಿಷ್ಟಕೃತಂ ಹುತ್ವಾ ಹೋಮಶೇಷಂ ಸಮಾಪಯೇತ್ ।
ಬ್ರಾಹ್ಮಣಾನ್ಭೋಜಯೇತ್ ಪಶ್ಚಾತ್ ಯಥಾ ವಿಭವಸಾರತಃ ॥

ಸ್ವಿಷ್ಟಕೃತ್ ಮಾಡಿ, ಉತ್ತರತಂತ್ರದ ಮೂಲಕ ಹೋಮವನ್ನು ಮುಗಿಸಬೇಕು । ಬ್ರಾಹ್ಮಣರಿಗೆ ಭೋಜನ, ದಾನಾದಿಗಳನ್ನು ಮಾಡಬೇಕು ॥

॥ ಇತಿ ಗ್ರಹಯೋಗ ಶಾಂತಿಃ ॥

*****

9. ಗ್ರಹಣ ಜನನಶಾಂತಿಃ

ಅಥ ಶೌನಕಃ

ಗ್ರಹೇ ಚಂದ್ರಸ್ಯ ಸೂರ್ಯಸ್ಯ ಪ್ರಸೂತಿರ್ಯದಿ ಜಾಯತೇ ।
ವ್ಯಾಧಿಪೀಡಾ ತಥಾ ಸ್ತ್ರೀಣಾಂ ಆದೌ ತು ಋತುದರ್ಶನಾತ್ ॥

ಚಂದ್ರ + ಸೂರ್ಯಗ್ರಹಣಗಳಲ್ಲಿ ಮಗುವು ಹುಟ್ಟಿದರೆ । ಹಾಗೂ ಗ್ರಹಣದಲ್ಲಿ ಸ್ತ್ರೀಯರು ಋತುಮತಿಗಳಾದರೆ, ವ್ಯಾಧಿ ಮುಂತಾದವುಗಳಿಂದ ಪೀಡೆಗೆ ಒಳಗಾಗುವರು ॥

ಇತ್ಥಂ ಸಂಜಾಯತೇ ಯಸ್ಯ ತಸ್ಯ ಮೃತ್ಯುರ್ನಸಂಶಯಃ ।
ವ್ಯಾಧಿಪೀಡಾ ಚ ದಾರಿದ್ಯಂ ಶೋಕಶ್ಚ ಕಲಹೋ ಭವೇತ್ ॥

ಹಾಗೂ ಈ ರೀತಿಯಾಗಿ ಮಗುವು ಹುಟ್ಟಿದರೆ ಅದರ ಮರಣವು ನಿಶ್ಚಯ । ಹಾಗೂ ರೋಗ, ದಾರಿದ್ರ್ಯ, ಶೋಕ, ದುಃಖ ಮತ್ತು ಕಲಹಗಳು ಉಂಟಾಗುತ್ತವೆ ॥

ಸೂರ್ಯಗ್ರಹೇ ಸೂರ್ಯರೂಪಂ ಸುವರ್ಣೇನ ಸ್ವಶಕ್ತಿತಃ ।
ಚಂದ್ರಂ ಚಂದ್ರಗ್ರಹೇ ಧೀಮಾನ್ ರಾಜತೇನ ವಿಶೇಷತಃ ॥

ಆದ್ದರಿಂದ ಸೂರ್ಯಗ್ರಹಣದಲ್ಲಿ ಹುಟ್ಟಿದರೆ ಮತ್ತು ಋತುಮತಿಯಾದರೆ ಸೂರ್ಯಾಕಾರದ ಚಿನ್ನವನ್ನು ಪೂಜಿಸಿ ದಾನ ಕೊಡಬೇಕು । ಹೀಗೆಯೇ ಚಂದ್ರಗ್ರಹಣದಲ್ಲಿ ಜನನ – ಋತುಮತಿ ಗಳಾದರೆ, ಚಂದ್ರಾಕಾರದ ರಜತ(ಬೆಳ್ಳಿಯನ್ನು) ಪೂಜಿಸಿ, ದಾನಕೊಡಬೇಕು ॥

ಗ್ರಹರೂಪಂ ಪ್ರಕುರ್ವೀತ ನಾಗೇನೈವ ವಿಚಕ್ಷಣಃ ।
ಶುಚೌದೇಶೇ ಪ್ರಯತ್ನೇನ ಗೋಮಯೇನ ಪ್ರಕಲ್ಪಯೇತ್ ॥
(ನಾಗೇನ ಸೀಸೇನ)

ಹೇಗೆಂದರೆ, ಆಯಾಗ್ರಹಗಳ ಆಕೃತಿಯನ್ನು ವಿವೇಕಿಯಾದವನು ಸೀಸಲೋಹದಿಂದ ಮಾಡಿ । ಶುಚಿಯಾದ ಜಾಗದಲ್ಲಿ ಗೋಮಯದಿಂದ ಸಾರಿಸಿ ॥

ರಕ್ತಾಕ್ಷತಂ ರಕ್ತಗಂಧಂ ರಕ್ತಪುಷ್ಪಾಂಬರಾದಿಕಂ ।
ಸೂರ್ಯಗ್ರಹೇ ಪ್ರದಾತವ್ಯಂ ಸೂರ್ಯಪ್ರೀತಿಕರಾಯ ಚ ॥

ಕೆಂಪುಬಣ್ಣದ ಅಕ್ಷತೆ – ಗಂಧ – ಹೂ – ವಸ್ತ್ರಗಳಿಂದ । ಆ ಸೂರ್ಯ ಆಕೃತಿಯ ಚಿನ್ನವನ್ನು ಪೂಜಿಸಿ ಇವೆಲ್ಲವುಗಳನ್ನೂ ಸೂರ್ಯಗ್ರಹಣ ಜನನ ದೋಷಕ್ಕೆ ಪರಿಹಾರವಾಗಿ, ಸೂರ್ಯನ ಅನುಗ್ರಹಕ್ಕಾಗಿಯೂ ಸಹಾ ದಾನ ಕೊಡಬೇಕು ॥

ಶ್ವೇತವಸ್ತ್ರಂ ಶ್ವೇತಮಾಲ್ಯಂ ಶ್ವೇತಗಂಧಾಕ್ಷತಾದಿಕಂ ।
ಚಂದ್ರಗ್ರಹೇ ಪ್ರದಾತವ್ಯಂ ಚಂದ್ರಪ್ರೀತಿಕರಾಯ ಚ ॥

ಹೀಗೆಯೇ ಚಂದ್ರಗ್ರಹಣದಲ್ಲಿ ಹುಟ್ಟಿದವರಿಗೆ ಮತ್ತು ಋತುಮತಿಯಾದವರಿಗೆ, ಬಿಳಿಬಣ್ಣದ ವಸ್ತ್ರ – ಹೂ – ಗಂಧ – ಅಕ್ಷತೆಗಳಿಂದ ಪೂಜಿಸಿ । ಆ ಚಂದ್ರಾಕೃತಿಯ ಬೆಳ್ಳಿಯನ್ನು ಚಂದ್ರಗ್ರಹಣ ಜನನ ದೋಷಕ್ಕಾಗಿ ಹಾಗೂ ಚಂದ್ರನ ಅನುಗ್ರಹಕ್ಕಾಗಿ ಇವುಗಳೆಲ್ಲವನ್ನೂ ದಾನ ಮಾಡಬೇಕು ॥

ರಾಹವೇ ಚೈವ ದಾತವ್ಯಂ ಕೃಷ್ಣಪುಷ್ಪಾಂಬರಾದಿಕಂ ।
ದದ್ಯಾನ್ನಕ್ಷತ್ರ ನಾಥಾಯ ಶ್ವೇತಗಂಧಾನುಲೇಪನಮ್ ॥

ಹಾಗೂ ರಾಹುವಿನ ದೋಷಪರಿಹಾರಕ್ಕಾಗಿ ಕಪ್ಪುಬಣ್ಣದ ಹೂ – ಬಟ್ಟೆಗಳನ್ನು । ಮತ್ತು ಯಾವ ನಕ್ಷತ್ರದಲ್ಲಿ ಗ್ರಹಣವಾಗಿದೆಯೋ ಆ ನಕ್ಷತ್ರದ ದೇವತೆಗೂ ಬಿಳಿಬಣ್ಣದ ಗಂಧಾದಿಗಳನ್ನು ಅರ್ಪಿಸಬೇಕು ॥

ಸೂರ್ಯಂ ಸಂಪೂಜಯೇದ್ಧೀಮಾನ್ ಆಕೃಷ್ಣೇನೇತಿ ಮಂತ್ರತಃ ।
ಚಂದ್ರಗ್ರಹೇ ತಥಾ ಸಮ್ಯಕ್ ಆಪ್ಯಾಯಸ್ವೇತಿ ಮಂತ್ರತಃ ॥

ಸೂರ್ಯನನ್ನು ಆಕೃಷ್ಣೇನ ಮಂತ್ರದಿಂದಲೂ । ಹಾಗೂ ಚಂದ್ರನನ್ನು ಆಪ್ಯಾಯಸ್ವ ಮಂತ್ರಗಳಿಂದಲೂ ಪೂಜಿಸಬೇಕು ॥

ಸ್ವರ್ಭಾನೋರಿತ ಮಂತ್ರೇಣ ರಾಹುಂ ಯತ್ನೇನ ಪೂಜಯೇತ್ ।
ಏವಂ ಸಂಪೂಜಯೇದ್ಧೀಮಾನ್ ಸಮಿದ್ಭಿಶ್ಚಾರ್ಕಂ ಸಂಭವೈಃ ॥

ರಾಹುಮಂತ್ರದಿಂದ ರಾಹುವಿಗೂ ಪೂಜಿಸಬೇಕು । ಈ ರೀತಿ ಪೂಜಿಸಿದ ನಂತರ ಅರ್ಕ ಸಮಿತ್ತುಗಳಿಂದ ಸೂರ್ಯನಿಗೆ ಹೋಮಿಸಬೇಕು ॥

ಚಂದ್ರಗ್ರಹೇ ಚ ಪಾಲಾಶೈಃ ಸಮಿದ್ಭಿರ್ಜುಹುಯಾನ್ನರಃ ।
ದೂರ್ವಾಭಿರ್ಜುಹುಯಾದ್ಧೀಮಾನ್ ರಾಹೋಸ್ಸಂಪ್ರೀಣನಾಯ ಚ ॥

ಚಂದ್ರನಿಗೆ ಪಾಲಾಶಸಮಿತ್ತಿನಿಂದ ಹೋಮಿಸಬೇಕು । ಹಾಗೂ ದೂರ್ವೆಯಿಂದ ರಾಹುವಿಗೆ ಹೋಮಿಸಬೇಕು ॥

ಸಮಿದ್ಭಿರ್ಬ್ರಹ್ಮ ವೃಕ್ಷೋತ್ಥೈರ್ದೋಷಾಯ ಜುಹುಯಾದ್ಬುಧಃ ।
ಆಜ್ಯೇನ ಚರುಣಾ ಚೈವ ತಿಲೈಶ್ಚ ಜುಹುಯಾತ್ತತಃ ॥

ವಿವೇಕಿಯಾದವನು ವೇದೋಕ್ತ ಯಜ್ಞಿಯ ವೃಕ್ಷಗಳ ಸಮಿತ್ತುಗಳಿಂದ । ಈ ದೋಷಗಳ ಪರಿಹಾರಕ್ಕಾಗಿ ಹೋಮಿಸಬೇಕು ಅಲ್ಲದೇ ಆಜ್ಯ, ಚರು, ತಿಲಗಳಿಂದಲೂ ಹೋಮಿಸಬೇಕು ॥

ಇಮಂ ಮೇ ಗಂಗೇ ಪರತಃ ತತ್ವಾಯಾಮೀತಿ ಮಂತ್ರತಃ ।
ಅಭಿಷೇಕೇ ನಿವೃತ್ತೇತು ಯಜಮಾನಸ್ಸಮಾಹಿತಃ ॥

ಮೇಲಿನ ಮಂತ್ರಗಳಿಂದ, ಯಜಮಾನನ ಸಹಿತ ಗ್ರಹಣಕಾಲದಲ್ಲಿ ಜನಿಸಿದ ಮಗು ಹಾಗೂ ಈ ಕಾಲದಲ್ಲಿ ಋತುಮತಿಯಾದವರಿಗೆ ಕಲಶಗಳ ತೀರ್ಥದಿಂದ ಸ್ನಾನ ಮಾಡಿಸಬೇಕು ॥

ಆಚಾರ್ಯಂ ಪೂಜಯೇತ್ಪಶ್ಚಾತ್ ಸುಶಾಂತೋ ವಿಜಿತೇಂದ್ರಿಯಃ ।
ತಸ್ಮೈ ದದ್ಯಾತ್ ಪ್ರಯತ್ನೇನ ಭಕ್ತ್ಯಾ ಪ್ರತಿಕೃತಿ ತ್ರಯಮ್ ॥

ನಂತರ ಆಚಾರ್ಯನಿಗೆ ಗೌರವದಿಂದ ಪೂಜಿಸಬೇಕು । ಹಾಗೂ ಈ ಮೂರೂ ದೇವತೆಗಳ ಆಕೃತಿಯನ್ನು ದಾನಕೊಡಬೇಕು ॥

ತೇಭ್ಯೋಽಪಿ ದಕ್ಷಿಣಾಂ ದದ್ಯಾದ್ಯಜಮಾನಸ್ಸಮಾಹಿತಃ ।
ಅನೇನ ವಿಧಿನಾ ಶಾಂತಿಂ ಕೃತ್ವಾ ಸಮ್ಯಗ್ವಿಶೇಷತಃ ॥

ಋತ್ವಿಜರಿಗೂ ಸಹಾ ದಕ್ಷಿಣಾದಿಗಳನ್ನು ಕೊಡಬೇಕು । ಈ ರೀತಿ ವಿಧಿಯಂತೆ ಶಾಂತಿಯನ್ನು ಮಾಡಬೇಕು ॥

ಅಕಾಲಮೃತ್ಯುಂ ಶೋಕಂ ಚ ವ್ಯಾಧಿಪೀಡಾಂ ಚ ನಾಪ್ನುಯಾತ್ ।
ಸೌಖ್ಯಂ ಸೌಮನಸಂ ನಿತ್ಯಂ ಸೌಭಾಗ್ಯಂ ಚ ಲಭೇನ್ನರಃ ॥

ಇದರಿಂದ ಅಕಾಲಮೃತ್ಯು – ಶೋಕ – ರೋಗಗಳಿಂದ ಇವನು ಪಾರಾಗುತ್ತಾನೆ । ಸುಖ, ಸೌಭಾಗ್ಯಗಳನ್ನು ಪಡೆಯುತ್ತಾನೆ ॥

ಇತ್ಥಂ ಗ್ರಹಣಜಾತಾನಾಂ ಸರ್ವಾರಿಷ್ಟ ವಿನಾಶನಂ ।
ಕಥಿತಂ ಭಾರ್ಗವೇಣೇದಂ ಶೌನಕಾಯ ಮಹಾತ್ಮನೇ ॥

ಈರೀತಿಯಾಗಿ ಗ್ರಹಣದಲ್ಲಿ ಹುಟ್ಟಿದವರಿಗೆ ಮತ್ತು ಋತುಮತಿಯಾದವರಿಗೆ, ಎಲ್ಲಾ ದೋಷಗಳನ್ನೂ ಕಳೆಯುವ ಈ ಶಾಂತಿಯು ಭಾರ್ಗವಮುನಿಯಿಂದ ಶೌನಕರಿಗೆ ಹೇಳಲ್ಪಟ್ಟಿದೆ ॥

॥ ಇತಿ ಶೌನಕೀಯೇ ಗ್ರಹಣಜನನ ಶಾಂತಿಃ ॥

******

10. ಸೂರ್ಯ ಚಂದ್ರ ಗ್ರಹಣ ಶಾಂತಿಃ

ಸೂರ್ಯ, ಚಂದ್ರ ಗ್ರಹಣಗಳಲ್ಲಿ,, ಈ ಕೆಳಗಿನ ಶ್ಲೋಕಗಳನ್ನು ಜಪಿಸಬೇಕು ॥

ಯೋ ಸೌ ವಜ್ರಧರೋ ದೇವ ಆದಿತ್ಯಾನಾಂ ಪ್ರಭುರ್ಮತಃ ।
ಸಹಸ್ರನಯನ(ಸ್ಸೂರ್ಯಃ / ಶ್ಚಂದ್ರಃ) ಗ್ರಹಪೀಡಾಂ ವ್ಯಪೋಹತು ॥

ಮುಖಂ ಯಸ್ಸರ್ವ ದೇವಾನಾಂ ಸಪ್ತಾರ್ಚಿರಮಿತ ದ್ಯುತಿಃ ।
(ಸೂರ್ಯೋ / ಚಂದ್ರೋ) ಪರಾಗ ಸಂಭೂತ ಗ್ರಹಪೀಡಾಂ ವ್ಯಪೋಹತು ॥

ಯಃ ಕರ್ಮಸಾಕ್ಷೀ ಲೋಕಾನಾಂ ಧರ್ಮೋ ಮಹಿಷವಾಹನಃ ।
ಯಮಃ (ಸೂರ್ಯೋ / ಶ್ಚಂದ್ರೋ) ಪರಾಗೋತ್ಥ ಗ್ರಹಪೀಡಾಂ ವ್ಯಪೋಹತು ॥

ರಕ್ಷೋ ಗಣಾಧಿಪಸ್ಸಾಕ್ಷಾತ್ ನೀಲಾಂಜನ ಚ ಯ ಪ್ರಭಃ ।
ಖಡ್ಗ ಹಸ್ತೋತಿ ಭೀಮಶ್ಚ ಗ್ರಹಪೀಡಾಂ ವ್ಯಪೋಹತು ॥

ನಾಗಪಾಶಧರೋ ದೇವಸ್ಸದಾ ಮಕರವಾಹನಃ ।
ಸಜಲಾಧಿಪತಿ(ಸ್ಸೂರ್ಯೋ / ಶ್ಚಂದ್ರೋ) ಗ್ರಹಪೀಡಾಂ ವ್ಯಪೋಹತು ॥

ಪ್ರಾಣರೂಪೋ ಹಿ ದೇವಾನಾಂ ಸದಾ ಕೃಷ್ಣಮೃಗ ಪ್ರಿಯಃ ।
ವಾಯು(ಸ್ಸೂರ್ಯೋ / ಶ್ಚಂದ್ರೋ) ಪರಾಗೋತ್ಥ ಗ್ರಹಪೀಡಾಂ ವ್ಯಪೋಹತು ॥

ಯೋ ಸೌ ನಿಧಿಪತಿರ್ದೇವಃ ಖಡ್ಗಶೂಲ ಗದಾಧರಃ ।
(ಸೂರ್ಯೋ / ಚಂದ್ರೋ) ಪರಾಗಕಲುಷಂ ಧನಧೋತ್ರ ವ್ಯಪೋಹತು ॥

ಯೋಸಾವಿಂದುಧರೋ ದೇವಃ ಪಿನಾಕೀ ವೃಷವಾಹನಃ ।
ಸೂರ್ಯೋ ಪರಾಗ ಪಾಪಾನಿ ವಿನಾಶಯತು ಶಂಕರಃ ॥

ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಹರಂತು ಮಮ ಪಾತಕಮ್ ॥

ಸರ್ವೇ ಸಮುದ್ರಾಸ್ಸರಿತಃ ತೀರ್ಥಾನಿ ಜಲದಾನದಾಃ ।
ಆಯಾಂತು ಯಜಮಾನಸ್ಯ ದುರಿತಕ್ಷಯ ಕಾರಕಾಃ ॥

11. ಶಿಶು ರಕ್ಷಾವಿಧಿಃ

ಅಥ ನೃಸಿಂಹೀಯೇ ಪ್ರಯೋಗಪಾರಿಜಾತೇ ಷೋಡಶಕರ್ಮಕಾಂಡೇ

ಜಗದ್ರಕ್ಷಾ ದೃಢಪ್ರಜ್ಞ ರಕ್ಷಾಮುಂ ವಿಜನಂ ಜನಂ ।
ಲಕ್ಷ್ಮೀನೃಸಿಂಹ ಸತ್ಪಕ್ಷವೀಕ್ಷಾ ವಿಕ್ಷಿಪ್ತ ಕಂಟಕಂ ॥

ಕಪಿಲಸಂಹಿತಾಯಾಂ

ಶಿಶು ಸಂರಕ್ಷಣಾರ್ಥಾಯ ಭೂತಗ್ರಹ ನಿವಾರಿಣೇಂ ।
ರಕ್ಷಾಂ ಸಂಧ್ಯಾಸು ಕುರ್ವೀತ ನಿಂಬ ಸರ್ಷಫ ಗೃಂಜನೈಃ ॥

ಶಿಶುವಿನ ಸಂರಕ್ಷಣೆಗಾಗಿ ಹಾಗೂ ಭೂತ ಗ್ರಹ ಮುಂತಾದ ದೋಷಗಳ ನಿವಾರಣೆಗೆ । ಸಂಧ್ಯಾಕಾಲಗಳಲ್ಲಿ ನಿಂಬೆಹಣ್ಣು – ಸರ್ಷಫ(ಸಾಸುವೆ) – ಈರುಳ್ಳಿ, ಬೆಳ್ಳುಳ್ಳಿಗಳಿಂದ ರಕ್ಷಣೆಯನ್ನು ಮಾಡಬೇಕು ॥

ಫಲೀಕರಣ ಮಿಶ್ರೈಶ್ಚ ಕರಂಜೈರನಲೇ ಕೃತಾಂ ।
ವಾಚಾದ್ವಾರ ಪ್ರವೇಶೇಷು ಬಾಲಗ್ರಹ ವಿಮುಕ್ತಯೇ ॥

ಭತ್ತದಹೊಟ್ಟು ಮತ್ತು ಚಿರಬಿಲ್ವ ಮರದ ತೊಗಟೆಗಳನ್ನು ಅಗ್ನಿಯಲ್ಲಿ ಸುಟ್ಟು ಅದರ ಭಸ್ಮದಿಂದ । ಪ್ರವೇಶದ್ವಾರಗಳಲ್ಲಿ ಮಗುವನ್ನು ನಿಲ್ಲಿಸಿ, ಬಾಲಗ್ರಹದೋಷ ಪರಿಹಾರಕ್ಕೆ, ಈ ಕೆಳಗಿನ ಶ್ಲೋಕಗಳನ್ನು ಹೇಳಿ ॥

ವಾಸುದೇವೋ ಜಗನ್ನಾಥಃ ಪೂತನಾಭಂಜನೋ ಹರಿಃ ।
ರಕ್ಷತು ತ್ವರಿತೋ ಬಾಲಂ ಮುಂಚಮುಂಚ ಕುಮಾರಕಂ ॥

ಕೃಷ್ಣರಕ್ಷ ಶಿಶುಂ ಶಶ್ವತ್ ಮಧುಕೈಟಭಮರ್ದನ ।
ಪ್ರಾತಸ್ಸಂಗವ ಮಧ್ಯಾಹ್ನ ಸಾಯಾಹ್ನೇಷು ಚ ಸಂಧ್ಯಯೋಃ ॥

ಮಹಾನಿಶಿ ಸದಾ ರಕ್ಷ ಕಂಸಾರಿಷ್ಟನಿಷೂದನ ।
ಯಕ್ಷರಕ್ಷಃ ಪಿಶಾಚಾಂಶ್ಚ ಗ್ರಹಾನ್ಮಾತೃಗ್ರಹಾನಪಿ ॥

ಬಾಲಗ್ರಹಾನ್ ವಿಶೇಷೇಣ ಛಿಂದಿಛಿಂದಿ ಮಹಾಭಯಾತ್ ।
ತ್ರಾಹಿತ್ರಾಹಿ ಹರೇನಿತ್ಯಂ ತ್ವದ್ರಕ್ಷಾಭೂಷಿತಂ ಶಿಶುಂ ॥

ಇತಿ ಭಸ್ಮಾಭಿಮಂತ್ರ್ಯೈವ ಭೂಷಯೇತ್ತೇನ ಭಸ್ಮನಾ ।
ಶಿಶೋರ್ಲಲಾಟಾದ್ಯಂಗೇಷು ರಕ್ಷಾಂ ಕುರ್ಯಾದ್ಯಥಾ ವಿಧಿ ॥
ಮಂತ್ರಸಂರಕ್ಷಣಾದೇವ ಶಿಶುಃ ಸಂವರ್ಧತೇಽನ್ವಹಮಿತಿ ।

ಆ ಭಸ್ಮವನ್ನು ಶಿಶುವಿಗೆ ಲೇಪನ ಮಾಡಿ, ದೃಷ್ಟಿ ತೆಗೆಯಬೇಕು । ಶಿಶುವಿನ ಹಣೆ ಮುಂತಾದ ಅಂಗಗಳಲ್ಲಿ ಆ ರಕ್ಷಾ ಭಸ್ಮವನ್ನು ಹಚ್ಚಬೇಕು ॥ ಈ ಮಂತ್ರರಕ್ಷಣೆಯಿಂದಲೇ ಶಿಶುವು ದಿನೇದಿನೇ ಬಾಲಗ್ರಹದಿಂದ ಮುಕ್ತನಾಗಿ ಒಳ್ಳೆಯರೀತಿಯಲ್ಲಿ ಬೆಳೆಯುತ್ತದೆ ॥

ಅಥ ಯದಿ ಬಾಲಕಸ್ಯ ಪ್ರಮಾದಾದ್ಭುವಿ ಪತನಾದಿ ಭೀತಿರುಪಜಾಯತೇ । ತದಾ ಪಾರ್ಥಿವಂ ರಜಃ ಪರಿಗೃಹ್ಯ ಶಿಶೋಶ್ಶಿರಃ ಪ್ರದಕ್ಷಿಣಮಾವರ್ತ್ಯ, 'ವಿಷ್ಣುಸ್ತೇ ಪೂರ್ವತಃ ಪಾತು' ಇತ್ಯಾದಿ ಮಂತ್ರೈಃ ರಕ್ಷಾಂ ಕುರ್ಯಾತ್ । ಏಷ ರಕ್ಷಾವಿಧಿಃ ಶಕಟಭಂಜನೇ ನಂದಗೋಪೇನ ಭೀತೋಽಯಂ ಶಿಶುರಿತಿ ಬುದ್ಧ್ಯಾ ಯದುನಂದನಸ್ಯ ಕೃಷ್ಣಸ್ಯ ಕೃತಃ ॥
ಒಂದುವೇಳೆ ಶಿಶುವು, ಪ್ರಮಾದದಿಂದ ಕೈಯಿಂದ ಭೂಮಿಗೆ ಬೀಳುವ ಸನ್ನಿವೇಶ ಬಂದರೆ। ಆಗ ಭೂಮಿಯ ಧೂಳನ್ನು ತೆಗೆದುಕೊಂಡು ಈ ಕೆಳಗಿನ ಮಂತ್ರದಿಂದ ಶಿಶುವಿನ ತಲೆಯ ಸುತ್ತಲೂ ಪ್ರದಕ್ಷಿಣೆಯಾಗಿ ತಿರುಗಿಸಿ, ರಕ್ಷೆಯನ್ನು ಮಾಡಬೇಕು, ಮೇಲಿನ ವಿಷ್ಣು ಮಂತ್ರದಿಂದ। ಈ ರಕ್ಷಾವಿಧಿಯನ್ನು ಶಕಟಭಂಜನದಲ್ಲಿ, ನಂದಗೋಪನು ಭಯಗೊಂಡು ಕೃಷ್ಣನನ್ನು ಶಿಶು ಎಂದು ತಿಳಿದು ಕೃಷ್ಣನಿಗೆ ಮಾಡಿದ್ದನೆಂದು ಹರಿವಂಶದಲ್ಲಿದೆ ॥

ತಥಾ ಚ ಹರಿವಂಶೇ

ನಂದೋಽಂಕ ಮೇನಮಾರೋಪ್ಯ ಭೂರೇಣುಂ ಪರಿಗೃಹ್ಯ ಚ ।
ಶಿರಃ ಪ್ರದಕ್ಷಿಣಂ ಕುರ್ವನ್ ಮಂತ್ರಮೇವಂ ಜಜಾಪಹ ॥

ವಿಷ್ಣುಸ್ತೇ ಪೂರ್ವತಃಪಾತು ರುದ್ರೋರಕ್ಷತು ದಕ್ಷಿಣಂ ।
ಬ್ರಹ್ಮಾ ತು ಪಶ್ಚಿಮಂ ಪಾಯಾಚ್ಚಂದ್ರೋ ರಕ್ಷತ್ವಥೋತ್ತರಂ ॥

ಉಪವಿಷ್ಟಂ ತಥಾ ಸೂರ್ಯಃ ಪಾಯಾಚ್ಚಾಧಶ್ಚ ವಾಸುಕಿಃ ।
ಪಾಯಾದೂರ್ಧ್ವಮಧೋ ವತ್ಸಂ ಶಿಷ್ಟಾಃ ಕಾಷ್ಠಾಸ್ಸಮೀರಣಃ ॥

ಸ್ವಸ್ತಿಂ ಕರೋತು ಭಗವಾನ್ ಪಿನಾಕೀ ವೃಷಭಧ್ವಜಃ ।
ಗಾವೋ ರಕ್ಷಂತು ಸರ್ವತ್ರ ಭೂಮೌಪಾತು ಸದಾಶಿವಃ ॥

ಏವಮುಚ್ಚಾರ್ಯ ನಂದಸ್ತು ಕೃಚ್ಛ್ರಂ ಪಸ್ಪರ್ಶ ಸರ್ವತಃ ।
ಏಷ ಮಂತ್ರೋ ಹಿ ಬಾಲಾನಾಂ ರಕ್ಷಾಯೈ ಪರಿಕಲ್ಪಿತಃ ಇತಿ ॥

॥ ಇತಿ ಶ್ರೀನೃಸಿಂಹೀಯೇ ಪ್ರಯೋಗಪಾರಿಜಾತೇ ಷೋಡಶಕರ್ಮಕಾಂಡೇ
ಶಿಶುರಕ್ಷಾ ಪರಿಹಾರ ಪ್ರಕರಣಂ ॥

******

12. ಯಮಳ ಜನನಶಾಂತಿಃ

ಅಥ ಕಾರಿಕಾ / ಬ್ರಾಹ್ಮಣಮಂತ್ರಃ

ಅಥ ಯಸ್ಯ ವಧೂರ್ಗೌರ್ವಾ ಜನಯೇಚ್ಚೇದ್ಯಮೌ ತತಃ ।
ಸ ಮರುದ್ಭ್ಯಶ್ಚರುಂ ಕುರ್ಯಾತ್ ಪೂರ್ಣಾಹುತಿಂ ಅಥಾಪಿ ವಾ ॥

ಒಂದುವೇಳೆ ವಧೂ ಅಥವ ಮನೆಯ ಹಸು ಅವಳಿಜವಳಿ ಮಕ್ಕಳನ್ನು ಹಡೆದರೆ । ಆ ಯಜಮಾನನು ಮರುತ್ ದೇವತೆಗೆ ಚರುಹವಿಸ್ಸನ್ನು ಸ್ಥಾಲೀಪಾಕದ ಮೂಲಕ ಅಥವ ಇಷ್ಟಿಯ ಮೂಲಕ ಕೊಡಬೇಕು ಅಥವ ಪೂರ್ಣಾಹುತಿಯನ್ನಾದರೂ ಮಾಡಬೇಕು ॥

ಅತ್ರ ಬ್ರಾಹ್ಮಣಂ

ತದಾಹುರಾಹಿತಾಗ್ನಿರ್ಯಸ್ಯ ಭಾರ್ಯಾ ಗೌರ್ವಾ ಯಮೌ ಜನಯೇತ್ಕಾತತ್ರ ಪ್ರಾಯಶ್ಚಿತ್ತಿರಿತಿ । ಸೋಽಗ್ನಯೇ ಮರುತ್ವತೇ ತ್ರಯೋದಶ ಕಪಾಲಂ ಪುರೋಡಾಶಂ ನಿರ್ವಪೇತ್ । ತಸ್ಯ ಯಾಜ್ಯಾನುವಾಕ್ಯೇ ಮರುತೋ ಯಸ್ಯ ಹಿ ಕ್ಷಯೇಽರಾ ಇವೇದಚರಮಾ ಅಹೇವೇತ್ಯಾಹುತಿಂ ವಾಽssಹವನೀಯೇ ಜುಹುಯಾದಗ್ನಯೇ ಮರುತ್ವತೇ ಸ್ವಾಹೇತಿ ಸಾ ತತ್ರ ಪ್ರಾಯಶ್ಚಿತ್ತಿರಿತಿ ॥

ಬ್ರಾಹ್ಮಣದಲ್ಲಿ, ಆಹಿತಾಗ್ನಿಯ ಯಜಮಾನನ ಹೆಂಡತಿ ಅಥವಾ ಅವರ ಮನೆಯ ಹಸುವು ಅವಳಿಜವಳಿ ಮಕ್ಕಳನ್ನು ಹಡೆದರೆ ಪ್ರಾಯಶ್ಚಿತ್ತವೇನೆಂದರೆ । ಮರುದ್ದೇವತೆಗೆ ತ್ರಯೋದಶಕಪಾಲ ಪುರೋಡಾಶವನ್ನು ಮಾಡಬೇಕು । ಈ ಇಷ್ಟಿಯಲ್ಲಿ, ಯಾಜ್ಯಾ ಮತ್ತು ಪುರೋನುವಾಕ್ಯೆಯು, ಕ್ರಮವಾಗಿ ಮರುತೋ ಯಸ್ಯ ಹಿ ಕ್ಷಯೇ ಹಾಗೂ ಅರಾ ಇವೇದ ಚರಮಾ ಅಹೇವ ಎಂಬುವುಗಳು ಅಥವ ಅಗ್ನಯೇ ಮರುತ್ವತೇ ಸ್ವಾಹಾ ಎಂಬ ಮಂತ್ರದಿಂದ ಆಹವನೀಯದಲ್ಲಿ ಹೋಮಿಸಬೇಕು ॥

ಅಥಾತೋ ಯಮಳ ಜನನವಿಧಿಂ ವ್ಯಾಖ್ಯಾಸ್ಯಾಮೋ ಯಸ್ಯ ಭಾರ್ಯಾ ಗೌರ್ದಾಸೀ ಬಡಬಾ ಯಮಳಂ ಜನಯೇತ್ತದಾ ಶಾಂತಿಂ ಕುರ್ಯಾತ್ । ಪೂರ್ಣೇ ದಶಾಹೇ ಸ್ವಸ್ತಿವಾಚನಂ ಕೃತ್ವಾ । ಪುಣ್ಯೋದಕೈಶ್ಚಾಷ್ಟೌ ಕಲಶಾನ್ ಸಂಪೂಜ್ಯ ॥

ಈಗ ಯಮಳಜನನ ಪ್ರಾಯಶ್ಚಿತ್ತ ವಿಧಿಯನ್ನು ಹೇಳುತ್ತೇವೆ । ಯಾವನ ಹೆಂಡತಿ ಅಥವ ಹಸು ಅಥವ ದಾಸಿ ಮತ್ತು ಯಾವಾಗಲಾದರೂ ಒಂದುಸಲ ಹೆತ್ತಂತಹ ಕರುವನ್ನು ಕಳೆದು(ಸತ್ತು)ಕೊಂಡಿರುವ ಹಸು ಇವುಗಳಿಗೆ ಯಮಳಜನನ (ಅವಳಿ–ಜವಳಿ) ಉಂಟಾದರೆ ಮುಂದೆ ಹೇಳುವ ರೀತಿ ಶಾಂತಿಯನ್ನು ಮಾಡಬೇಕು । 10 ದಿನಗಳು ಕಳೆದಮೇಲೆ, ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ, 8 ಕಲಶಗಳಿಂದ ಪುಣ್ಯಾಹವಾಚನ ಮಾಡಿ ॥

ತತಃ ಆಚಾರ್ಯೋ ಮರತಸ್ಥಾಲೀಪಾಕಂ ಶ್ರಪಯಿತ್ವಾ । ಇಧ್ಮಾಧಾನಾದಿ ಮುಖಾಂತಂ ಕೃತ್ವಾ । ಅಗ್ನಯೇ ಸ್ವಾಹಾ, ಪವಮಾನಾಯ ಸ್ವಾಹಾ, ಮರುದ್ಭ್ಯಸ್ಸ್ವಾಹಾ, ಮೃತ್ಯವೇಸ್ವಾಹಾ, ಬ್ರಹ್ಮಣೇಸ್ವಾಹಾ, ಮೃತ್ಯುಂಜಯಾಯ ಸ್ವಾಹಾ, ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ ಇತ್ಯಾದಿಭಿಃ ಹುತ್ವಾ । ಸ್ವಿಷ್ಟಕೃದಾದಿ ಹೋಮಶೇಷಂ ಸಮಾಪಯೇತ್ । ದಂಪತೀ ಸ್ನಾಪಯೇತ್ ।

ಯಜಮಾನನು ಮರುತ್ ದೇವತೆಗೆ ಸ್ಥಾಲೀಪಾಕವನ್ನು ಮಾಡಲು, ಚರುವನ್ನು ಬೇಯಿಸಿ । ಇಧ್ಮಾಧಾನ ಮೊದಲಾದ ಮುಖಾಂತದವರೆಗೆ ಮಾಡಿ । ಕೆಳಗೆ ಹೇಳಿರುವ ಮಂತ್ರಗಳಿಂದ ಪ್ರಧಾನಹೋಮಮಾಡಿ, ಸ್ವಿಷ್ಟಕೃತ್ ಮೊದಲಾದ ಉತ್ತರತಂತ್ರಗಳನ್ನು ಮಾಡಿ ಮುಗಿಸಬೇಕು । ನಂತರ, ಮೊದಲು ಪೂಜಿಸಿರುವ ಕಲಶಗಳ ತೀರ್ಥದಿಂದ ದಂಪತಿಗಳಿಗೆ ಸ್ನಾನಮಾಡಿಸಬೇಕು ॥

॥ ಇತಿ ಯಮಳಜನನ ಶಾಂತಿಃ ॥

******

13. ಪ್ರತಿಕೂಲಾದಿ ಶಾಂತಿಃ

ಭೃಗುಃ

ವಾಗ್ದಾನಾನಂತರಂ ಯತ್ರ ಕುಲಯೋಃ ಕಸ್ಯಚಿನ್ಮೃತಿಃ ತದೋದ್ವಾಹೋ ನೈವ ಕಾರ್ಯಃ ಕೃತೋ ವೈಧವ್ಯಮಾಪ್ನುಯಾತ್ । ಕುಲಯೋರ್ವಧೂವರ ಕುಲಯೋರಿತ್ಯರ್ಥಃ ॥

ವಿವಾಹದಲ್ಲಿ ವಾಗ್ದಾನಾನಂತರ, ವಧೂವರರ ಕುಲಗಳಲ್ಲಿ ಯಾರಾದರೂ ಮರಣಹೊಂದಿದರೆ, ಆಗ ಆ ವಿವಾಹವನ್ನು ಒಂದುವರ್ಷದ ಕಾಲ ಮಾಡಬಾರದು, ಒಂದುವೇಳೆ ಮಾಡಿದರೆ ಆ ವಧುವು ವೈಧವ್ಯವನ್ನು ಹೊಂದುತ್ತಾಳೆ । ಇದು ವಧೂವರರ ಕುಲದಲ್ಲಿ ಮರಣವಾದರೆ ಮಾತ್ರ ಎಂದು ಅರ್ಥ ॥

ಶೌನಕಃ

ಪಿತಾಪಿತಾಮಹಶ್ಚೈವ ಮಾತಾಚೈವ ಪಿತಾಮಹೀ ।
ಪಿತೃವ್ಯಸ್ತ್ರೀ ಸುತಾಭ್ರಾತಾ ಭಗಿನೀ ಚ ವಿವಾಹಿತಾ ॥

ವಧೂವರರ ಕುಲದವರು ಯಾರೆಂದರೆ – ಅವರ ತಂದೆ ತಾಯಿ, ಅಜ್ಜ ಅಜ್ಜಿ । ಚಿಕ್ಕಪ್ಪ ದೊಡ್ಡಪ್ಪ, ಅವರ ಹೆಂಡತಿಯರು, ವಧೂವರರ ಅಕ್ಕ ತಂಗಿಯರು, ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳು ಹಾಗೂ ವಧೂವರರ ಸೋದರರು, ವಧೂವರರ ವಿವಾಹಿತ ಸೋದರಿಯರು ॥

ಏಭಿರತ್ರ ವಿಪನ್ನೈಶ್ಚ ಪ್ರತಿಕೂಲಂ ಬುಧೈಃ ಸ್ಮೃತಂ ।
ಅನ್ಯೈರಪಿ ವಿಪನ್ನೈಸ್ತು ಕೇಚಿದೂಚುರ್ನತದ್ಭವೇತ್ ॥

ಇವರಲ್ಲಿ ಯಾರಾದರೂ ಮರಣಹೊಂದಿದರೆ, ಆಗ ಒಂದುವರ್ಷಕಾಲ ವಿವಾಹ ಮಾಡಬಾರದು । ಮಾಡಿದರೆ ಕೆಟ್ಟಸಂದರ್ಭಗಳು ಒದಗುತ್ತವೆ । ಇನ್ನು ಕೆಲವರು ವಧೂವರರ ಸಂಬಂಧಿಗಳು ಯಾರೇ ಮರಣಹೊಂದಿದರೂ ಸಹಾ ವಿವಾಹ ಮಾಡಬಾರದೆನ್ನುವ ಅಭಿಪ್ರಾಯವನ್ನೂ ಹೇಳುತ್ತಾರೆ ॥

ಏತಚ್ಚ ತ್ರಿಪುರುಷೋಪ ಲಕ್ಷಣಂ ।
ಪುರುಷತ್ರಯ ಪರ್ಯಂತಂ ಪ್ರತಿಕೂಲಂ ಸ್ವಗೋತ್ರಿಣಾಂ ॥

ಇದರ ಅರ್ಥ, ವಧೂವರರ ತ್ರಿಪೌರುಷೇಯದಲ್ಲಿರುವವರು ಎಂದರ್ಥ । ಅಂದರೆ ತಮ್ಮ ತಮ್ಮ ಗೋತ್ರದ ತ್ರಿಪೌರುಷೇಯದಲ್ಲಿ ಮರಣವಾದರೆ ವಿವಾಹವನ್ನು ಮಾಡಬಾರದು, ಒಂದುವೇಳೆ ಮಾಡಿದರೆ ತೊಂದರೆಯಾಗುತ್ತದೆ ॥

ಪ್ರವೇಶ ನಿರ್ಗಮಸ್ತದ್ವತ್ತಥಾ ಮಂಡನಮುಂಡನೇ ।
ಪ್ರೇತಕರ್ಮಾಣ್ಯನಿರ್ವರ್ತ್ಯ ಚರೇನ್ನಾಭ್ಯುದಯ ಕ್ರಿಯಾಂ ॥

ಹಾಗೆಯೇ ಗೃಹಪ್ರವೇಶಾದಿಗಳನ್ನು, ಸನ್ಯಾಸ, ಸ್ನಾತಕವ್ರತ(ಸಮಾವರ್ತನೆ) ಮತ್ತು ಚೌಲೋಪನಯನಗಳನ್ನೂ ಮಾಡಬಾರದು । ಮೃತನ ಔರ್ಧ್ವದೈಹಿಕ ಕರ್ಮಗಳನ್ನು(ಸಪಿಂಡೀಕರಣಾಂತ) ಮಾಡದೇ, ಉಳಿದ ಶುಭಸಂಸ್ಕಾರ ಕರ್ಮಗಳನ್ನು ಮಾಡಬಾರದು ॥

ಆಚತುರ್ಥಂ ತತಃ ಪುಂಸಪಂಚಮೇ ಶುಭದಂ ಭವೇದಿತಿ ಮೇಧಾತಿಥಿವಾಕ್ಯೇನೋಪಸಂಹಾರಾತ್ ವಧೂವರಯೋಃ ಪಿತರಮಾದಾಯ ಪುರುಷತ್ರಯ ಪರ್ಯಂತಮಿತ್ಯರ್ಥಃ । ಅನ್ಯಥಾ ಆಚತುರ್ಥಾದಿತ್ಯಸ್ಯ ಪಂಚಮ ಇತ್ಯಸ್ಯಚಾಸಂಗತ್ಯಾಪತ್ತೇಃ । ಪ್ರತಿಕೂಲ ಕೃತಶ್ಚ ದೋಷೋವರ್ಷಾವಧಿರೇವ ।

ವಧೂವರನ 4 ಪೌರುಷದವರೆಗೆ ವಿವಾಹಾದಿಗಳನ್ನು ಮಾಡಬಾರದು, ಅಲ್ಲಿಂದ ಮುಂದಿನ ತಲೆಗಳಲ್ಲಿ ಮಾಡಬಹುದು ಎಂದು, ಮೇಧಾತಿಥಿಗ್ರಂಥದಲ್ಲಿ ಹೇಳಿರುವುದರಿಂದ, ವಧೂವರರ ತಂದೆಯಿಂದ 3 ತಲೆಗಳಲ್ಲಿ ಮಾಡಬಾರದೆಂದು ಅರ್ಥ । ಬೇರೇ ರೀತಿ ಅರ್ಥ ಮಾಡಿದರೆ, ಆಚತುರ್ಥ ಹಾಗೂ ಪಂಚಮ ಎಂಬ 2 ಪದಗಳ ಅರ್ಥವು ಹೊಂದಲಾರದೇ ಹೋಗುತ್ತದೆ । ಒಂದುವೇಳೆ ಮಾಡಿದರೆ, ದೋಷವು ಒಂದು ವರ್ಷಕಾಲ ಮಾತ್ರ ಇರುತ್ತದೆ ।

ತಥಾ ಚ ಮೇಧಾತಿಥಿಃ –

ವಾಗ್ದಾನಾನಂತರಂ ಯತ್ರ ಕುಲಯೋಃ ಕಸ್ಯಚಿನ್ಮೃತಿಃ ।
ತದಾ ಸಂವತ್ಸರಾದೂರ್ಧ್ವಂ ವಿವಾಹಃ ಶುಭದೋಭವೇತ್ ।

ಮೇಧಾತಿಥಿಗ್ರಂಥದಲ್ಲಿ, ವಾಗ್ದಾನಾನಂತರ ವಧೂವರರ ಕುಲಗಳಲ್ಲಿ ಮರಣವಾದರೆ। ಆಗ 1 ವರ್ಷಕಳೆದು ವಿವಾಹ ಮಾಡುವುದು ಶುಭವು ।

ಸಂಕಟೇ ತು ಮಾಸೋತ್ತರಂ ಶಾಂತಿಂ ಕೃತ್ವಾ ವಿವಾಹಃ ಕಾರ್ಯಃ।
ಪ್ರತಿಕೂಲೇಪಿ ಕರ್ತವ್ಯೋ ವಿವಾಹೋ ಮಾಸತಃ ಪರಂ ।

ಆಪತ್ಕಾಲದಲ್ಲಿ ಮಾತ್ರ , 1 ತಿಂಗಳ ನಂತರ ಶಾಂತಿ ಮಾಡಿ ವಿವಾಹವನ್ನು ಮಾಡಬಹುದು। ಪ್ರತಿಕೂಲದೋಷವು ಬಂದರೂ ಕೂಡ ಆಪತ್ಕಾಲದಲ್ಲಿ ವಿವಾಹವನ್ನು ಮಾಸಾನಂತರ ಮಾಡಬಹುದು ।

ಶಾಂತಿಂ ವಿಧಾಯ ಗಾಂ ದತ್ವಾ ವಾಗ್ದಾನಾದಿ ಚರೇತ್ ಪುನರಿತಿ ಜ್ಯೋತಿಃಪ್ರಕಾಶ ವಚನಾತ್, ವಾಗ್ದಾನಾದೀತ್ಯತದ್ಗುಣಸಂವಿಜ್ಞಾನೋಬಹುವ್ರೀಹಿಃ ವಾಗ್ದಾನಸ್ಯ ಪೂರ್ವಂ ಕೃತತ್ವೇನಾವೃತ್ಯಯೋಗಾತ್ ಇತಿ ಕೇಚಿತ್ ।

ಶಾಂತಿಯನ್ನು ಮಾಡಿ, ಗೋವನ್ನು ದಕ್ಷಿಣೆಯಾಗಿ ಕೊಟ್ಟು, ಮತ್ತೆ ವಾಗ್ದಾನಾದಿಗಳನ್ನು ಮಾಡಬೇಕೆಂದು ಜ್ಯೋತಿಪ್ರಕಾಶರ ವಚನವಿರುವುದರಿಂದ, ವಾಗ್ದಾನಾದಿ ಎಂಬ ಪದವು, ಅತದ್ಗುಣ ಸಂವಿಜ್ಞಾನ ಬಹುವ್ರೀಹಿ ಸಮಾಸವಾಗಿದೆ । ಏಕೆಂದರೆ ವಾಗ್ದಾನವನ್ನು ಮೊದಲು ಮಾಡಿರುವುದರಿಂದ ಅದರ ಆವೃತ್ತಿಯು ಹೊಂದುವುದಿಲ್ಲವೆಂದು ಕೆಲವರು ಹೇಳುತ್ತಾರೆ ।

ಪುನಃ ಪದೇನಾವೃತ್ಯುಕ್ತೇರದೃಷ್ಟಾರ್ಥ ಪುನರ್ವಾಗ್ದಾನಮಿತಿ ಗಾಗಾಭಟ್ಟೀಯಃ ಪಂಥಾಃ । ಶಾಂತಿಂ ವಿನಾಯಕಶಾಂತಿಂ। ಸಂಕಟೇ ಸಮನುಪ್ರಾಪ್ತೇ ಯಾಜ್ಞವಲ್ಕ್ಯೇನ ಯೋಗಿನಾ। ಶಾಂತಿರುಕ್ತಾಗಣೇಶಸ್ಯ ಕೃತ್ವಾ ತಾಂ ಶುಭಮಾಚರೇದಿತಿ ಮೇಧಾತಿಥ್ಯುಕ್ತೇಃ ।

ಆದಕಾರಣ, ಪುನಃ ಎಂಬ ಪದದಿಂದ ಆವೃತ್ತಿಯನ್ನು ಹೇಳಿದೆಯಾದ್ದರಿಂದ, ಮತ್ತೆ ವಾಗ್ದಾನವನ್ನು ಆವೃತ್ತಿ ಮಾಡುವುದು ಅದೃಷ್ಟ ಪ್ರಯೋಜನಾಕ್ಕಾಗಿ ಎಂದು ಗಾಗಾಭಟ್ಟೀಯ ಪಂಥದವರು ಹೇಳುತ್ತಾರೆ । ಇಲ್ಲಿ ಶಾಂತಿಯೆಂದರೆ, ಗಣಪತಿಯ ಶಾಂತಿ ಎಂದು ಅರ್ಥ । ಆಪತ್ತು ಬಂದೊದಗಿದಾಗ, ಯಾಜ್ಞವಲ್ಕ್ಯ ಮುನಿಗಳಿಂದ । ಗಣೇಶನಿಗೆ ಶಾಂತಿಯು ಹೇಳಲ್ಪಟ್ಟಿದೆ, ಆ ಶಾಂತಿಯನ್ನು ಮಾಡಿ ಶುಭ ದೇವತಾಕಾರ್ಯಗಳನ್ನು ಮಾಡಬೇಕೆಂದು ಮೇಧಾತಿಥಿಯು ಹೇಳಿದ್ದಾರಾದ್ದರಿಂದ ।

ಅಥ ನಾಂದೀಶ್ರಾದ್ಧೋತ್ತರಂ ಸಂಸ್ಕಾರ್ಯಮಾತೂರಜೋದರ್ಶನೇ ಶಾಂತಿಃ – ಮಾಧವೀಯೇ –

ಪ್ರಾರಂಭಾತ್ ಪ್ರಾಗ್ವಿವಾಹಸ್ಯ ಮಾತಾಯದಿ ರಜಸ್ವಲಾ ನಿವೃತ್ತಿಸ್ತೇನ ಕರ್ತವ್ಯಾಸಹತ್ವ ಶ್ರುತಿಚೋದನಾತ್ । ಪ್ರಾರಂಭೋತ್ತರಂ ರಜೋದರ್ಶನೇನ ಕರ್ಮನಿಷೇಧ ಇತ್ಯರ್ಥಃ । ಪ್ರಾರಂಭಶ್ಚ ನಾಂದೀಶ್ರಾದ್ಧಂ ।

ಈಗ ನಾಂದೀಶ್ರಾದ್ಧದ ನಂತರ ಸಂಸ್ಕಾರ ಮಾಡುವಂತಹ ತಾಯಿಯು ರಜಸ್ವಲೆಯಾದರೆ, ಅದಕ್ಕೆ ಶಾಂತಿಯನ್ನು ಹೇಳಿದೆ । ಮಾಧವೀಯ ಸ್ಮೃತಿಯಲ್ಲಿ ವಿವಾಹದ ಮೊದಲು ತಾಯಿಯು ರಜಸ್ವಲೆಯಾದರೆ, ಆ ತಾಯಿಯನ್ನು ಬಿಟ್ಟು, ಆ ವಿವಾಹಾದಿ ಕಾರ್ಯಗಳನ್ನು ಮಾಡಬೇಕೆಂದು ಅಥವಾ ಆ ಸಂಸ್ಕಾರ ಕಾರ್ಯವನ್ನೇ ಮುಂದೂಡಬೇಕೆಂದು ಶ್ರುತಿಯಲ್ಲಿ ಹೇಳಿದೆ । ಒಂದುವೇಳೆ ವಿವಾಹಾದಿ ಸಂಸ್ಕಾರಗಳು ಆರಂಭವಾಗಿದ್ದು, ತಾಯಿಯು ರಜಸ್ವಲೆಯಾದರೆ, ಆಗ ಕರ್ಮದ ನಿಷೇಧವಿಲ್ಲ । ವಿವಾಹಾದಿ ಸಂಸ್ಕಾರಗಳಿಗೆ ನಾಂದೀಶ್ರಾದ್ಧವೇ ಪ್ರಾರಂಭವು ।

ಪ್ರಾರಂಭೋ ವರಣಂ ಯಜ್ಞೇ ಸಂಕಲ್ಪೋ ವ್ರತಸತ್ರಯೋಃ ।
ನಾಂದೀಶ್ರಾದ್ಧಂ ವಿವಾಹಾದೌ ಶ್ರಾದ್ಧೇ ಪಾಕಪರಿಕ್ರಿಯಾ ॥
ಇತಿ ವಚನಾತ್ ।

ಯಜ್ಞದ ಆರಂಭವು ಋತ್ವಿಗ್ವರಣೆಯಿಂದ ಆಗುತ್ತದೆ, ವ್ರತ ಮತ್ತು ಸತ್ರ(12 ಅಥವ ಅದಕ್ಕಿಂತ ಹೆಚ್ಚಿನ ಸೋಮಯಾಗ)ಗಳಲ್ಲಿ ಸಂಕಲ್ಪದಿಂದಲೇ ಆರಂಭವು । ವಿವಾಹದಲ್ಲಿ ನಾಂದೀಯೇ ಆರಂಭವು, ಶ್ರಾದ್ಧದ ಆರಂಭವು ಅಡುಗೆಯ ಆರಂಭದಿಂದಲೇ ॥

ಮೇಧಾತಿಥಿಃ –

ಚೌಲೇ ಚ ವ್ರತಬಂಧೇ ಚ ವಿವಾಹೇ ಯಜ್ಞಕರ್ಮಣಿ ।
ಭಾರ್ಯಾ ರಜಸ್ವಲಾ ಯಸ್ಯ ಪ್ರಾಯಸ್ತಸ್ಯ ನ ಶೋಭನಮ್ ॥

ಚೌಲ, ವ್ರತಚತುಷ್ಟಯ, ಉಪನಯನ, ವಿವಾಹ ಮತ್ತು ಯಜ್ಞಕರ್ಮಗಳಲ್ಲಿ । ಹೆಂಡತಿಯು ರಜಸ್ವಲೆಯಾದರೆ, ಅದು ಸಂಸ್ಕಾರವಾಗುವವನಿಗೆ ಶೋಭನವಲ್ಲ ॥

ವಧೂವರಾನ್ಯತಮಯೋರ್ಜನನೀ ಚೇದ್ರಜಸ್ವಲಾ ।
ತಸ್ಯಾಃ ಶುದ್ಧೇಃ ಪರಂಕಾರ್ಯಂ ಮಾಂಗಲ್ಯಂ ಮನುರಬ್ರವೀತ್ ॥

ವಧೂವರರಲ್ಲಿ ಯಾರೊಬ್ಬರ ತಾಯಿಯೂ ರಜಸ್ವಲೆಯಾದರೆ, ಅವಳ ಶುದ್ಧಿಯ ನಂತರವೇ ಆ ವಿವಾಹಕಾರ್ಯವನ್ನು ಮಾಡಬೇಕು ಎಂದು ಮನುಮಹರ್ಷಿಗಳು ಹೇಳಿದ್ದಾರೆ ॥

ಸಂಕಟೇ ತು ಶುದ್ಧೇಃ ಪೂರ್ವಮಪಿ ಶ್ರಿಯಂ ಸಂಪೂಜ್ಯಮಂಗಲಂಕಾರ್ಯಂ ।
ಅಲಾಭೇಷು ಮುಹೂರ್ತಸ್ಯ ರಜೋದರ್ಶೇಽಹ್ನ್ಯುಪಸ್ಥಿತೇ ।
ಶ್ರಿಯಂ ಸಂಪೂಜ್ಯ ವಿಧಿವತ್ತತೋ ಮಂಗಲಮಾಚರೇತ್ ।

ಆಪತ್ಕಾಲದಲ್ಲಿ, ಆ ವಧೂವರರ ತಾಯಿಯ ಶುದ್ಧಿಗೆ ಮೊದಲೇ ಶ್ರೀಸೂಕ್ತದಿಂದ ಲಕ್ಷ್ಮಿಯನ್ನು ಪೂಜಿಸಿ, ಮಂಗಳಕಾರ್ಯವಾದ ವಿವಾಹವನ್ನು ಮಾಡಬೇಕು । ಬೇರೇ ಮುಹೂರ್ತವು ಸಿಗದೇ ತಾಯಿಯ ರಜಸ್ವಲಾ ದಿನದಲ್ಲಿಯೇ ವಿವಾಹಾದಿ ಕಾರ್ಯಗಳನ್ನು ಮಾಡುವ ಸಂದರ್ಭವು ಇದ್ದಾಗ । ಶ್ರೀಸೂಕ್ತದಿಂದ ಪೂಜಿಸಿ ನಂತರ ಸಂಸ್ಕಾರವನ್ನು ಮಾಡಬೇಕು ।

ಹೈಮೀಂ ಪದ್ಮಾಂ ಮಾಷಮಿತಾಂ ಶ್ರೀಸೂಕ್ತ ವಿಧಿನಾರ್ಚಯೇತ್ ।
ಪ್ರತ್ಯೃಚಂ ಪಾಯಸಂ ಹುತ್ವಾ ಗಾಂ ಚ ದದ್ಯಾತ್ ಪಯಸ್ವಿನೀಮ್ ।

ಚೂಡೋಪನಯನೋದ್ವಾಹ ಪ್ರತಿಷ್ಠಾದಿಕಮಾಚರೇದಿತಿ ವಾಕ್ಯಸಾರವಚನಾತ್ । ಸಂಗ್ರಹೇತು ಪ್ರಕಾರಾಂತರಮುಕ್ತಂ । ಸಂಕಟೇ ಸಮನುಪ್ರಾಪ್ತೇ ಸೂತಕೇ ಸಮುಪಗತೇ ಕೂಷ್ಮಾಂಡೀಭಿರ್ಘೃತಂ ಹುತ್ವಾ ಗಾಂ ಚ ದದ್ಯಾತ್ ಪಯಸ್ವಿನೀವಮ್ । ಚೌಲೋಪನಯನೋದ್ವಾಹ ಪ್ರತಿಷ್ಠಾದಿಕಮಾಚರೇತ್ । ಸಂಕಟೇ ಸೂತಕೇ ಇತ್ಯರ್ಥಃ ॥

ಉದ್ದಿನಕಾಳು ಗಾತ್ರದ ದೇವಿಯ ಪ್ರತಿಮೆಗೆ ಗೌರಿಯನ್ನು ಮತ್ತು ಪದ್ಮಾವತಿಯನ್ನು ಆವಾಹಿಸಿ, ಶ್ರೀಸೂಕ್ತವಿಧಿಯಿಂದ ಪೂಜಿಸಬೇಕು । ನಂತರ ಪ್ರತೀಶ್ರೀಸೂಕ್ತ ಋಕ್ಕಿಗೆ ಪಾಯಸವನ್ನು ಹೋಮಿಸಿ, ಹಾಲುಕೊಡುವಂತಹ ಹಸುವನ್ನು ದಾನಮಾಡಬೇಕು । ಏಕೆಂದರೆ, ಚೂಡಾಕರ್ಮ, ಉಪನಯನ, ಪ್ರತಿಷ್ಠೆ ಮುಂತಾದ ಕರ್ಮಗಳನ್ನು ಈ ರೀತಿಯಾಗಿ ಆಚರಿಸಬೇಕೆಂದು ವಾಕ್ಯಸಾರದಲ್ಲಿರುವುದರಿಂದ । ಆದರೆ ಸಂಗ್ರಹಕಾರನು

ಬೇರೇ ಪ್ರಕಾರದಿಂದ ಈ ಸಂಸ್ಕಾರಗಳನ್ನು ಹೇಳಿದ್ದಾರೆ । ಹೇಗೆಂದರೆ, ಕಷ್ಟ, ಆಪತ್ತುಗಳ ಸಮಯದಲ್ಲಿ ಹಾಗೂ ಸೂತಕಾದಿಗಳು ಒದಗಿದಾಗ, ಕೂಷ್ಮಾಂಡ ಮಂತ್ರಗಳಿಂದ ಆಜ್ಯದಲ್ಲಿ ಹೋಮಿಸಿ, ಕರುಸಹಿತ ಹಸುವನ್ನು ದಾನಮಾಡಬೇಕು । ನಂತರ ಚೌಲ, ಉಪನಯನಾದಿ ಕರ್ಮಗಳನ್ನು ಮಾಡಬೇಕು । ಸಂಕಟವೆಂದರೆ ಸೂತಕವೆಂದು ಇಲ್ಲಿ ಅರ್ಥ ॥

॥ ಇತಿ ಪ್ರತಿಕೂಲಾದಿ ಶಾಂತಿಃ ॥

******

14. ತಟಾಕಾದೌ ಮೃತದೋಷ ಶಾಂತಿಃ

ನದೀನದಸಮುದ್ರೇಷು ಮೃತದೋಷೋ ನ ವಿದ್ಯತೇ ।
ವಾಪೀಕೂಪತಟಾಕೇಷು ಮೃತಸ್ಯ ಶುದ್ಧಿರಿಷ್ಯತೇ ।

ಸ್ತ್ರೀನದೀ, ಪುಂನದೀ, ಸಮುದ್ರ ಇವುಗಳಲ್ಲಿ ಮರಣಹೊಂದಿದರೆ ದೋಷವಿಲ್ಲ । ಕೆರೆ, ಬಾವಿ, ಹೊಂಡ, ಇವುಗಳಲ್ಲಿ ಮರಣವಾದರೆ ಅವುಗಳನ್ನು ಹಾಗೂ ಮೃತನಿಗೂ ಶುದ್ಧಿ ಹೇಳಿದೆ ।

ಸೂತಕಾನಂತರಂ ಶುದ್ಧಿಃ ಶೌನಕೇನ ಹ್ಯುದೀರಿತಾ ।
ಉದ್ಧರೇಚ್ಛತಸಾಹಸ್ರಂ ತದರ್ಧಾರ್ಧಮಥಾಪಿ ವಾ ।

ಶೌನಕರು, ಆಶೌಚ ಕಳೆದನಂತರ ಈ ಶುದ್ಧಿಯನ್ನು ಹೇಳಿದ್ದಾರೆ । ಹೇಗೆಂದರೆ – ಆ ಕೆರೆ, ಬಾವಿ, ಹೊಂಡಗಳಿಂದ ಒಂದು ಲಕ್ಷ ಅಥವಾ ಅದರ ಅರ್ಧ ಅಥವ ಅದರ ಅರ್ಧ ಬಿಂದಿಗೆ ಸಂಖ್ಯೆಯಲ್ಲಿ ನೀರನ್ನು ತೆಗೆಯಬೇಕು ॥

ಅಷ್ಟೋತ್ತರ ಸಹಸ್ರಂ ವಾ ಕಲಶೈರ್ಜಲಮುದ್ಧರೇತ್ ।
ಮೃತ ತಾರತಮ್ಯೇನ, ಬ್ರಾಹ್ಮಣಾದಿ ವರ್ಣಭೇದೇನ, ಗವಾದಿ ಪಶುಭೇದೇನ ಕಲಶೋದ್ಧಾರಣಂ ।

ಅಥವಾ 1008 ಅಥವ 108 ಕಲಶಗಳಲ್ಲಿ ನೀರನ್ನು ತೆಗೆಯಬೇಕು । ಮೃತನ ವರ್ಣಕ್ಕೆ ಅನುಸಾರವಾಗಿ ಬ್ರಾಹ್ಮಣಾದಿ ವರ್ಣಭೇದಗಳಿಂದ ಗವಾದಿ ಪಶುಭೇದಗಳಿಂದಲೂ ನೀರನ್ನು ತೆಗೆಯಬೇಕು ।

ಪ್ರಯೋಗಂ ವಿಧಿವತ್ ಕೃತ್ವಾ ಜಾತದೋಷ ಪುರಸ್ಸರಂ ।
ಜಲದೇವಾರ್ಚನಂ ಕಾರ್ಯಂ ಮಂಡಲೇ ಭದ್ರಸಂಜ್ಞಕೇ ।

ದೋಷಕ್ಕನುಸಾರವಾಗಿ ಪ್ರಯೋಗವನ್ನು ವಿಧಿವತ್ತಾಗಿ ಮಾಡಿ । ಜಲದೇವತೆಯ ಅರ್ಚನೆಯನ್ನು ಭದ್ರಾಸನದಲ್ಲಿ ಮಾಡಬೇಕು ॥

ಜಲದೇವತಾ ವರುಣಃ ।

ಜಲದೇವತೆಯೆಂದರೆ, ವರುಣ ।

ಸದೀಪಂ ಚ ಬಲಿಂ ದದ್ಯಾತ್ ದೇವತಾಭ್ಯೋ ಯಥಾವಿಧಿ ।
ಏವಂ ಪೂಜಾವಿಧಾತವ್ಯಾ ತತೋ ಹೋಮಂ ಸಮಾರಭೇತ್ ।

ದೀಪಸಹಿತವಾಗಿ ಪಂಚಬಲಿಗಳನ್ನು ದೇವತೆಗಳಿಗೆ ಯಥಾವಿಧಿಯಾಗಿ ಕೊಡಬೇಕು। ಹೀಗೆ ಪೂಜಿಸಿ, ನಂತರ ಹೋಮಮಾಡಬೇಕು ।

ಲೋಕಪಾಲಗ್ರಹಾದಿಭ್ಯೋ ಜಲಾಧಿಪತಯೇ ತಥಾ ।
ಅಷ್ಟೋತ್ತರಶತಂ ಚೈವ ಪ್ರತ್ಯೇಕಂ ತಿಲಸರ್ಪಿಷಾ ।

ಲೋಕಪಾಲ, ನವಗ್ರಹ, ಜಲದೇವತೆ । ಇವುಗಳಿಗೆ ಪ್ರತ್ಯೇಕವಾಗಿ 108 ಸಂಖ್ಯೆಯಿಂದ ತಿಲ, ಆಜ್ಯಗಳಿಂದ ಹೋಮಿಸಬೇಕು ॥

ಜಲಶುದ್ಧಿಂ ತತಃಕುರ್ಯಾತ್ ಬ್ರಹ್ಮಕೂರ್ಚ ಪುರಸ್ಸರಂ ।
ಮೃತ್ತಿಕಾಭಿಶ್ಚ ತೋಯೈಶ್ಚ ತಿಲಾಮಲಕ ಭಸ್ಮಭಿಃ ।

ನಂತರ ಜಲಶುದ್ಧಿಯನ್ನು ಬ್ರಹ್ಮಕೂರ್ಚಪುರಸ್ಸರವಾಗಿ ಮಾಡಬೇಕು। ಹೇಗೆಂದರೆ – ನಾನಾಪವಿತ್ರಕ್ಷೇತ್ರಗಳ ಮಣ್ಣಿನಿಂದ ಹಾಗೂ ಪವಿತ್ರತೀರ್ಥಗಳಿಂದ ಹಾಗೂ ನೆಲ್ಲಿಕಾಯಿ ಮತ್ತು ಭಸ್ಮ ॥

ಅಶ್ವಸ್ಥಾನಾದ್ಗಜಸ್ಥಾನಾತ್ ವಲ್ಮೀಕಾತ್ಸಂಗಮಾದ್ಹ್ರದಾತ್ ।
ರಾಜದ್ವಾರಾಚ್ಚತುಷ್ಪಥಾದಿತಿ ಮೃದಃ ।

ಕುದುರೆ ಮತ್ತು ಆನೆಗಳನ್ನು ಕಟ್ಟಿಹಾಕುವ ಜಾಗದ ಹಾಗೂ ಹುತ್ತದ ಮಣ್ಣು ಹಾಗೂ ನದೀಸಂಗಮದ ಮಣ್ಣು ಹಾಗೂ ಸರೋವರದ ಮಣ್ಣು । ರಾಜದ್ವಾರದ ಮಣ್ಣು ಹಾಗೂ 4 ರಸ್ತೆ ಕೂಡುವ ಜಾಗದ ಮಣ್ಣು ಇವುಗಳನ್ನು ಮೃತನಾದ ಬಾವಿ, ಕೆರೆ ಇವುಗಳಲ್ಲಿ ಹಾಕಬೇಕು ।

ಜಲಾನಿ ನದೀನದ ಸಮುದ್ರ ಗಂಗಾದಿ ಜೀರ್ಣಕೂಪಪ್ರಸ್ರವಣೋದಕೈಃ ।

ಹಾಗೂ ಪುಂ ಮತ್ತು ಸ್ತ್ರೀ ನದಿಗಳ ನೀರಿನಿಂದ ಹಾಗೂ ಸಮುದ್ರದ ನೀರಿನಿಂದ ಹಾಗೂ ಗಂಗಾದಿ ಸಮಸ್ತ ನದಿಗಳಿಂದ ಹಾಗೂ ಹಳೇ ಬಾವಿಯ ನೀರಿನಿಂದ ಹಾಗೂ ಝರಿಯ ನೀರಿನಿಂದ ಆ ಬಾವಿ, ಕೆರೆಗಳನ್ನು ಶುದ್ಧಿಗೊಳಿಸಬೇಕು ।

ಯಜ್ಞಕುಂಡ ಭಸ್ಮತಿಲಾಮಲಕ ಶಂಖೋದಕ ವಿಷ್ಣುಪಾದೋದಕೈರ್ಜಲಾವಗಾಹನಮ್ । ಪಾವಮಾನೀಭಿಃ ಪ್ರಾಯಶ್ಚಿತ್ತ ಸೂಕ್ತೈಃ । ಪೌರುಷಂ ಪಾವಮಾನಂ ಚ ನತಮಂಹ ಇತೀತಿ ಚ । ಹ್ರಸ್ವಸೂಕ್ತಂ ಜಪೇತ್ । ಅನ್ಯಾನ್ಯಪಿ ವಾರುಣಾನಿ ಜಪ್ತ್ವಾ ಜಲಮವಗಾಹ್ಯ ಶಾಂತಿಂ ಪಠೇತ್ । ಕಸ್ಯಾನೂನಮಿತ್ಯಾದೀನಿ ।

ಯಜ್ಞದ ಭಸ್ಮ, ತಿಲ, ನೆಲ್ಲಿಕಾಯಿ, ಶಂಖೋದಕ, ವಿಷ್ಣುಪಾದೋದಕ, ನೀರಿನಲ್ಲಿ ಮುಳುಗುಸ್ನಾನ । ಹಾಗೂ ಪವಮಾನಾದಿ ಮಂತ್ರ, ಪ್ರಾಯಶ್ಚಿತ್ತ ಮಂತ್ರ, ಪುರುಷಸೂಕ್ತ ಮುಂತಾದ ಮಂತ್ರಗಳನ್ನು ಹೇಳಬೇಕು । ಉಳಿದ ವರುಣ ಮಂತ್ರಗಳನ್ನೂ ಹೇಳಬೇಕು ಆಮೇಲೆ ಶಾಂತಿಮಂತ್ರಗಳನ್ನೂ ಹೇಳಬೇಕು ।

ಸ್ವಸ್ತಿವಾಚನ ಪೂರ್ವಂತು ಹೋಮಶೇಷಂ ಸಮಾಪಯೇತ್ ।
ಅಭಿಷೇಕಂ ತತಃ ಕೃತ್ವಾ ಬ್ರಾಹ್ಮಣಾನ್ ಭೋಜಯೇದಥ ।
ದಕ್ಷಿಣಾಭಿಶ್ಚ ಸಂತೋಷ್ಯ ತೇಭ್ಯ ಆಶಿಷೋಗೃಹೀತ್ವಾ ಜಲಶುದ್ಧಿರ್ಭವೇದ್ಧ್ರುವಮ್ ॥

ನಂತರ ಸ್ವಸ್ತಿವಾಚನವನ್ನು ಮಾಡಿ, ಹೋಮವನ್ನು ಮುಗಿಸಬೇಕು । ನಂತರ ಸಂಬಂಧಿಗಳಿಗೆ ಆ ಶುದ್ಧಿಗೊಳಿಸಿರುವ ಕೆರೆ, ಬಾವಿಗಳ ನೀರಿನಿಂದ ಸ್ನಾನ ಮಾಡಿಸಬೇಕು ನಂತರ ಬ್ರಾಹ್ಮಣರಿಗೆ ಭೋಜನ ದಾನಾದಿಗಳನ್ನು ಕೊಟ್ಟು, ಆಶೀರ್ವಾದವನ್ನು ಪಡೆಯಬೇಕು । ಹೀಗೆ ಮಾಡಿದರೆ ಜಲಶುದ್ಧಿಯು ಆಗುತ್ತದೆ ।

******

15. ಅಥ ಆಕಸ್ಮಿಕ ಪ್ರಾಸಾದ ಪತನಶಾಂತಿಃ

ಗರ್ಗಃ

ಪ್ರಾಸಾದತೋರಣಾಟ್ಟಾಲ ದ್ವಾರಪ್ರಾಕಾರವೇಶ್ಮನಾಮ್ ।
ಅನಿಮಿತ್ತಂತು ಪತನಂ ದೃಢಾನಾಂ ರಾಜಮೃತ್ಯವೇ ।

ಮಹಡಿ, ತೋರಣ, ಅಟ್ಟ, ದ್ವಾರದ ಮೇಲ್ಭಾಗ, ಉಪ್ಪರಿಗೆ । ಇವುಗಳಿಂದ ಅಕಸ್ಮಾತ್ತಾಗಿ ದೃಢನಾದಂತಹ ಮನುಷ್ಯನು ಬಿದ್ದುಸತ್ತರೆ ಅದು ರಾಜಮೃತ್ಯು ಎನಿಸಿಕೊಳ್ಳುತ್ತದೆ ॥

ರಜಸಾವಾಥಧೂಮೇನ ದಿಶೋ ಯತ್ರಸಮಾಕುಲಾಃ ।
ಆದಿತ್ಯಚಂದ್ರ ತಾರಾಶ್ಚ ವಿವರ್ಣಾಭಯವೃದ್ಧಯೇ ।

(ಸಾಹಸದಲ್ಲಿ) ರಜೋಸ್ವಭಾವದಿಂದ ಅಥವ ತುಂಬಾ ಹೊಗೆಯು ಆವರಿಸಿರುವುದರಿಂದ ದಿಕ್ಕುಗಳ ಜ್ಞಾನವು ಯಾವಾಗ ಆಗುವುದಿಲ್ಲವೋ । ಸೂರ್ಯ, ಚಂದ್ರ, ನಕ್ಷತ್ರಾದಿಗಳು ವಿಚಿತ್ರವರ್ಣದಿಂದ ಕಂಡುಬಂದರೆ, ಅದು ಆಕಸ್ಮಿಕ ಮೃತ್ಯುಭಯಕ್ಕೆ ಲಕ್ಷಣವು ॥

ರಾಕ್ಷಸಾಯತ್ರದೃಶ್ಯಂತೇ ಬ್ರಾಹ್ಮಣಾಶ್ಚ ವಿಧರ್ಮಿಣಃ ।
ಋತವಶ್ಚ ವಿಪರ್ಯಸ್ತಾ ಅಪೂಜ್ಯಂ ಪೂಜಯೇಜ್ಜನಃ ।

ಎಲ್ಲಿ ರಾಕ್ಷಸರು ಕಂಡುಬರುತ್ತಾರೋ ಹಾಗೂ ಧರ್ಮವನ್ನು ಬಿಟ್ಟು ಅಧರ್ಮದಲ್ಲಿರುವ ಬ್ರಾಹ್ಮಣರು ಎಲ್ಲಿ ಕಂಡುಬರುತ್ತಾರೋ । ಹಾಗೂ ಋತುಗಳು ತನ್ನ ಗುಣಸ್ವಭಾವಕ್ಕೆ ವಿರುದ್ಧವಾಗಿ ಯಾವಾಗ ಕಾಣುತ್ತವೆಯೋ ಹಾಗೂ ಪೂಜೆಗೆ ಅನರ್ಹನಾದವನನ್ನು ಜನರು ಯಾವಾಗ ಗೌರವಿಸುತ್ತಾರೋ ॥

ನಕ್ಷತ್ರಾಣಿ ವಿಯೋಗಾನಿ ತನ್ಮಹದ್ಭಯಲಕ್ಷಣಮ್ ।
ಕೇತೂದಯೋಪರಾಗೌ ಚ ಛಿದ್ರಂ ವಾ ಶಶಿಸೂರ್ಯಯೋಃ ।

ಹಾಗೂ ನಕ್ಷತ್ರಗಳು ಪರಸ್ಪರ ವಿಯೋಗವಾಗುತ್ತವೆಯೋ, ಇಂತಹ ಲಕ್ಷಣಗಳು ದೊಡ್ಡ ಆಪತ್ತುಗಳ ಸೂಚನೆಯಾಗುತ್ತವೆ । ಹಾಗೂ ಕೇತೂಪರಗ ಗ್ರಹಣವಾದಾಗ ಹಾಗೂ ಸೂರ್ಯ, ಚಂದ್ರರಲ್ಲಿ ಛಿದ್ರವು ಕಂಡುಬಂದರೆ ॥

ಗ್ರಹರ್ಕ್ಷ ವಿಕೃತಿರ್ಯತ್ರ ತತ್ರಾಪಿ ಭಯಮಾದಿಶೇತ್ ।
ಸ್ತ್ರಿಯಶ್ಚ ಕಲಹಾಯಂತೇ ಬಾಲಾನಿಘ್ನಂತಿ ಬಾಲಕಾನ್ ।

ಗ್ರಹ, ನಕ್ಷತ್ರಗಳು ವಿಕಾರವಾಗುತ್ತವೆಯೋ ಆಗಲೂ ದೊಡ್ಡ ಅಪತ್ತಿನ ಸೂಚನೆಯು। ಈ ರೀತಿಯಾದಾಗ ಸ್ತ್ರೀಯರು ಪರಸ್ಪರ ಕಲಹ ಮಾಡುತ್ತಾರೆ, ಹುಡುಗರು ಇನ್ನೊಬ್ಬರನ್ನು ಸಾಯಿಸುತ್ತಾರೆ ॥

ಕ್ರಿಯಾಣಾಮುಚಿತಾನಾಂ ಚ ವಿಚ್ಛಿತ್ತಿರ್ಯತ್ರ ದೃಶ್ಯತೇ।
ಅಗ್ನಿರ್ಯತ್ರ ನ ದೃಶ್ಯೇತ ಧೂಮಯಾನೋಥ ಶಾಮ್ಯತಿ।

ಯೋಗ್ಯವಾದ ಕ್ರಿಯೆಯಲ್ಲಿ, ವಿಘ್ನ – ವಿಚ್ಛೇದವು ಕಂಡುಬರುವುದು। ಅಗ್ನಿಯು ಕಾಣದೇ ಕೇವಲ ಹೊಗೆಯೇ ಇರುವುದು ॥

ಕ್ರವ್ಯಾದಾವಾಯಸಾವಾಹಾಯಾಂತಿ ಚೋತ್ತರತಸ್ತಥಾ।
ಪೂರ್ಣಕುಂಭಾಃ ಸ್ರವಂತೇ ಚ ವಹ್ನಿರ್ವಾ ವಿಪ್ರಲುಪ್ಯತೇ।

ನರೀ, ತೋಳ, ಕಾಗೆ, ಹೋರಿ, ಎತ್ತು ಮುಂತಾದವುಗಳು ಉತ್ತರದ ಕಡೆಗೆ ಹೋಗುವುದು। ಹಾಗೂ ಪೂರ್ಣಕುಂಭವು ಒಡೆದು, ನೀರು ಸೋರುವುದು ಮತ್ತು ಹೋಮಮಧ್ಯದಲ್ಲಿ ಅಗ್ನಿಯು ಆರಿಹೋಗುವುದು ॥

ಮಂಗಲ್ಯಧ್ವನಯೋ ಯತ್ರ ನ ಶ್ರೂಯಂತೇ ಸಮಂತತಃ।
ಶವಥುರ್ಬಾಧತೇ ವಾಥ ಪ್ರೋತ್ಸಾಹೇಸತಿ ನರ್ದಿತಃ।

ಸುತ್ತಲೂ ಮಂಗಳಧ್ವನಿಯಿಲ್ಲದೇ, ಕೆಟ್ಟ – ವಿಕಾರ ಧ್ವನಿಗಳು ಕೇಳಿಬರುವುದು। ಕರ್ಮದ ಮಧ್ಯದಲ್ಲಿ ನಿರಂತರ ಕೆಮ್ಮು, ವಾಂತಿಗಳಾಗುವುದು, ಇಂತಹ ಬಾಧೆ ಉಂಟಾಗಲಾಗಿ ಇದರಿಂದ ಬೇರೆಯವರು ವ್ಯಂಗ್ಯ, ಅಪಹಾಸ್ಯ ಮಾಡುವುದು ॥

ನ ದೈವ ತೇಷು ವರ್ತಂತೇ ಯಥಾವದ್ಬ್ರಾಹ್ಮಣೇಷು ಚ।
ಮಂದಘೋಷಾಣಿ ವಾದ್ಯಾನಿ ವಾದ್ಯಂತೇ ವಿಸ್ವರಾಣಿ ಚ।

ಹಾಗೂ ಲೋಕದ ಜನರು, ದೇವರಬಗ್ಗೆ ಹಾಗೂ ಬ್ರಾಹ್ಮಣರ ಬಗ್ಗೆ ಗೌರವ – ಆದರಗಳಿಲ್ಲದೇ, ಕೀಳಾದ ಭಾವನೆಯಿಂದ ನೋಡುವುದು। ಹಾಗೂ ವಾದ್ಯಗಳ ಧ್ವನಿಯು ಮಂದವಾಗಿ ಸ್ವರವಿಲ್ಲದೇ ವಿಚಿತ್ರವಾಗಿ ಕರ್ಕಶವಾಗುವುದು ॥

ಗುರು ಮಿತ್ರ ದ್ವಿಷೋಯತ್ರ ಶತ್ರುಪೂಜಾರತಾ ಜನಾಃ।
ಬ್ರಾಹ್ಮಣಾನ್ ಸುಹೃದೋ ಮಾನ್ಯಾನ್ ಜನೋಯತ್ರಾವ ಮನ್ಯತೇ।

ಗುರು, ಮಿತ್ರ ಇವರಲ್ಲಿ ದ್ವೇಷವುಳ್ಳವರಾಗಿ ಜನರು, ಶತ್ರುಗಳ ಒಡನಾಟ – ಹಾಗೂ ಆಭಿಚಾರಿಕಾದಿ ಮುಂತಾದ ತಾಮಸೀ ಕ್ರಿಯೆಗಳಲ್ಲಿ ನಿರತರಾಗುವುದು। ಹಾಗೂ

ಬ್ರಾಹ್ಮಣರನ್ನು ಸ್ನೇಹಿತರನ್ನು, ಪೂಜ್ಯರನ್ನು ಅಗೌರವದಿಂದ ನೋಡುವುದು ॥

ಶಾಂತಿಮಂಗಲ ಹೋಮೇಷು ನಾಸ್ತಿಕ್ಯಂ ಯತ್ರಮನ್ಯತೇ ।
ರಾಜಾ ವಾ ಮ್ರಿಯತೇ ತತ್ರಾಥವಾ ದೇಶೋವಿನಶ್ಯತಿ ।

ಶಾಂತಿಗಳಲ್ಲಿ, ಶುಭಕರ್ಮಗಳಲ್ಲಿ ನಾಸ್ತಿಕತೆಯಿಂದ ವರ್ತಿಸುವುದು । ಹಾಗೂ ಅಕಸ್ಮಾತ್ತಾಗಿ ರಾಜನ ಮರಣವುಂಟಾಗುವುದು ಹಾಗೂ ಆಕಸ್ಮಿಕವಾಗಿ ಬೆಂಕಿ, ಪ್ರವಾಹ, ಭೂಕಂಪಗಳಿಂದ ಪ್ರದೇಶವು ನಾಶವಾಗುವುದು ॥

ರಾಜ್ಞೋ ವಿನಾಶೇ ಸಂಪ್ರಾಪ್ತೇ ನಿಮಿತ್ತಾನಿ ನಿಬೋಧಮೇ ।
ಬ್ರಾಹ್ಮಣಾನ್ ಪ್ರಥಮಂ ದ್ವೇಷ್ಟಿ ಬ್ರಾಹ್ಮಣಾಂಶ್ಚ ವಿನಿಂದತಿ ।

ರಾಜನ ನಾಶವು ಬಂದೊದಗಲಾಗಿ ಅದಕ್ಕೆ ಕಾರಣವನ್ನು ತಿಳಿಸಿಕೊಡಿ ಎಂದು ಗರ್ಗರನ್ನು ಪ್ರಾರ್ಥಿಸಲಾಗಿ । ಅದಕ್ಕೆ ಮೊದಲ ಕಾರಣವು, ಬ್ರಾಹ್ಮಣರನ್ನು ದ್ವೇಷ ಮತ್ತು ನಿಂದೆ ಮಾಡುವುದಾಗಿದೆ ॥

ಬ್ರಾಹ್ಮಣಸ್ವಾನಿವಾದತ್ತೇ ಬ್ರಾಹ್ಮಣಾಶ್ಚ ಜಿಘಾಂಸತಿ ।
ನತಾನ್ ಸ್ಮರತಿ ಕೃತ್ಯೇಷು ಯಾಚಿತಶ್ಚಾನ್ವಸೂಯತಿ ।

ಬ್ರಾಹ್ಮಣರ ಸ್ವತ್ತನ್ನು ಕಬಳಿಸುವುದು ಹಾಗೂ ಬ್ರಾಹ್ಮಣರನ್ನು ಕೊಲ್ಲುವುದು ಅಥವ ಪ್ರಯತ್ನಿಸುವುದು । ಉಪಕಾರದ ಸ್ಮರಣೆಯನ್ನು ಮಾಡದಿರುವುದು ಹಾಗೂ ಬೇಡಿದರೆ ಅಪಹಾಸ್ಯ ಮಾಡುವುದು ॥

ರಮತೇನಿಂದಾಯಾವೈಷಾಂ ಪ್ರಶಂಸಾಂ ನಾಭಿನಂದತಿ ।
ಅಪೂರ್ವಂ ತು ಕರಂ ಲೋಭಾತ್ ತಥಾ ಪಾತಯತೇಜನೇ ।

ಸಜ್ಜನರ ನಿಂದೆಯಾದಾಗ ಸಂತೋಷಿಸುವುದು ಹಾಗೂ ಗೌರವಿಸುವ ಸಮಯದಲ್ಲಿ ಗೌರವಿಸದಿರುವುದು । ಲೋಭದಿಂದ ಹಿಂದೆ ಯಾರೂ ಮಾಡದಿರುವಂತಹ ಕೆಟ್ಟಕೆಲಸ ಮಾಡುವುದು । ಹೀಗೆ ಜನರು ಇಂತಹ ನಡವಳಿಕೆಗಳಿಂದ ಪತಿತರಾಗಿ ಇನ್ನೊಬ್ಬರನ್ನೂ ಪತಿತರನ್ನಾಗಿಸುತ್ತಾರೆ (ಹಿಂದೆ ಮಾಡಿದ ಪಾಪಕರ್ಮವೇ ಅವನಿಗೆ ಆ ಕೆಟ್ಟಕೆಲಸಕ್ಕೆ ಪ್ರಚೋದಿಸುತ್ತದೆ, ಅದೇ ಅವನನ್ನು ಪತಿತನನ್ನಾಗಿಸುತ್ತದೆ ಎಂದೂ ಕೆಲವರು ಹೇಳುತ್ತಾರೆ) ।

ಏತೇಷ್ವಭ್ಯರ್ಚಯೇತ್ ಸಮ್ಯಕ್ ಸಪತ್ನೀಕಾನ್ ದ್ವಿಜೋತ್ತಮಾನ್ ।
ಭೋಜ್ಯಾನಿ ಚೈವ ಕಾರ್ಯಾಣಿ ಸುರಾಣಾಂ ಬಲಯಸ್ತಥಾ ।

ಈ ಮೇಲಿನ ಅಷ್ಟು ಆಪತ್ಸೂಚಕ ಸಂದರ್ಭಗಳು ಬರಲಾಗಿ, ಆಗ ಯಜಮಾನನು ಪತ್ನೀಸಹಿತನಾಗಿ ಬ್ರಾಹ್ಮಣಶ್ರೇಷ್ಠರಿಗೆ ಪೂಜೆಯನ್ನು ಸರಿಯಾಗಿ ವಿಧಿಯಂತೆ ಮಾಡಬೇಕು । ಹಾಗೂ ಭೋಜನವನ್ನು ಮಾಡಿಸಿ, ದೇವತೆಗಳಿಗೆ ಬಲಿಯನ್ನು ಕೊಟ್ಟು ॥

ಗಾವಶ್ಚ ದೇಯಾದ್ವಿಜಪುಂಗವೇಭ್ಯೋ ಭುವಂ ತಥಾ ಕಾಂಚನಮಂಬರಾಣಿ ।
ಹೋಮಶ್ಚಕಾರ್ಯೋ ದ್ವಿಜಪೂಜನಂ ಚ ಏವಂ ಕೃತೇ ಶಾಂತಿಮುಪೈತಿ ಪಾಪಂ ।

ಬ್ರಾಹ್ಮಣರಿಗೆ, ಗೋವುಗಳನ್ನು ಹಾಗೂ ಭೂಮಿಯನ್ನೂ ಹಾಗೂ ಚಿನ್ನ, ವಸ್ತ್ರಗಳನ್ನು ದಕ್ಷಿಣಾರೂಪವಾಗಿ ಕೊಡಬೇಕು । ಹಾಗೂ ಹೋಮಾದಿಗಳನ್ನು ಮಾಡಿಸಬೇಕು ಹಾಗೂ ಬ್ರಾಹ್ಮಣರಿಗೆ ಪೂಜೆಯನ್ನೂ ಮಾಡಬೇಕು, ಹೀಗೆ ಮಾಡುವುದರಿಂದ, ಮೇಲೆ ತಿಳಿಸಿದ ಎಲ್ಲಾ ಆಪತ್ತು, ಅಶುಭಗಳೂ ಪರಿಹಾರವಾಗಿ ಇವನ ಪಾಪವೂ ಪರಿಹಾರವಾಗುತ್ತದೆ ।

ಮಯೂರಚಿತ್ರೇ –

ಯದಾ ಕಟಕಟಾಯಂ ತೇ ಭವನಾನ್ಯಾಯುಧಾನಿ ಚ ।
ಮಾಸಾಭ್ಯಂತರ ಮಾತ್ರೇಣ ತದಾ ಸಂಗ್ರಾಮಮಾದಿಶೇತ್ ।

ಯಾವಾಗ ಆಯುಧಗಳಲ್ಲಿ ಹಾಗೂ ಮನೆಗಳಲ್ಲಿ ಅತ್ಯಂತ ದೊಡ್ಡಶಬ್ದ ಅಸಹಜವಾಗಿ ಉಂಟಾಗುತ್ತದೆಯೋ । ಆಗ ಮುಂದಿನ 1 ತಿಂಗಳ ಒಳಗೆ ಯುದ್ಧ – ಗಲಾಟೆಗಳು ನಡೆಯುತ್ತವೆ ॥

ದಿವ್ಯಾವೈಕಾದಶೀಶಾಂತಿಃ ಕರಣೀಯಾವಿಪಶ್ಚಿತಾ ॥

ಇಂತಹ ಸಂದರ್ಭಗಳಲ್ಲಿ ಉತ್ತಮವಾದ ಏಕಾದಶೀವ್ರತ ಶಾಂತಿಯನ್ನೂ ಸಹಾ ಮಾಡಬಹುದು ॥

******

16. ನಾನೋತ್ಪಾತ ಶಾಂತಿಃ

ಗರ್ಗಃ

ಔತ್ಪಾತಿಕೀಂ ಮಹಾಶಾಂತಿಂ ತತ್ವತಃ ಶೃಣುಮೇಧುನಾ ।
ಯತ್ರ ವ್ಯಾಧಿರನಾವೃಷ್ಟಿಃ ಪರಚಕ್ರಮುಪಸ್ಥಿತಂ ॥

ಉತ್ಪಾತ ಮುಂತಾದ ಅವಗಢಗಳಿಂದ ಉಂಟಾಗುವ ಆಪತ್ತಿಗೆ ಮಹಾಶಾಂತಿಯನ್ನು ಹೇಳುತ್ತೇನೆ, ಈಗ ಅದನ್ನು ಗಮನವಿಟ್ಟು ಕೇಳು । ಯಾವ ಪ್ರದೇಶದಲ್ಲಿ ರೋಗ, ಅನಾವೃಷ್ಟಿ, ಇತ್ಯಾದಿ ಆಪತ್ತುಗಳು ಬಂದಾಗ ॥

ದುರ್ಭಿಕ್ಷಂ ಜನಮಾರೋ ವಾ ರಾಜ್ಞೋಮರಣಮೇವ ವಾ ।
ತತ್ರ ಶಾಂತಿಕ್ರಮಃ ಪ್ರೋಕ್ತೋ ಮಹಾಕ್ರತುಮಿಹಾರಭೇತ್ ॥

ದುರ್ಭಿಕ್ಷ, ಜನನಾಶ, ರಾಜನ ಮರಣ ಇವುಗಳ ಸಂದರ್ಭಗಳಿದ್ದಾಗ । ಮಹಾಯಜ್ಞವನ್ನು ಈ ಶಾಂತಿಗಾಗಿ ಆರಂಭಿಸಬೇಕು ॥

ಔದುಂಬರೀಣಾಂ ವಿಧಿವತ್ ಸಮಿಧಾಂ ಚ ಶತಂ ದಹೇತ್ ।
ಸಾವಿತ್ರ್ಯಾಕಾರಯೇತ್ ಕರ್ಮ ತತಃ ಪಾಪಂ ಪ್ರಶಾಮ್ಯತಿ ॥

ಔದುಂಬರ ಸಮಿತ್ತಿನಿಂದ 100 ಹೋಮವನ್ನು ಮಾಡಬೇಕು । ಸಾವಿತ್ರೀಮಂತ್ರದಿಂದ ಹೋಮವನ್ನು ಮಾಡಬೇಕು, ಇದರಿಂದ ದೋಷವು ನಾಶವಾಗುತ್ತದೆ ॥

ಅತ್ಯುಷ್ಣಮತಿಶೀತಂ ಚ ಅತಿವರ್ಷಮನೂದಕಂ ।
ಅನರ್ತ್ತವಂ ಪುಷ್ಪಫಲಮತಿಮಾತ್ರಂ ಚ ಮಾರುತಃ ॥

ಅತಿಬಿಸಿಯಾದ, ಅತಿಶೀತವಾದ, ಅತಿವೃಷ್ಟಿ ಹಾಗೂ ಅನಾವೃಷ್ಟಿ ಇಂತಹ ಲಕ್ಷಣಗಳು ಕಂಡುಬಂದಾಗ ಹಾಗೂ । ಅಕಾಲದಲ್ಲಿ ಪುಷ್ಪ, ಫಲಗಳು ಉಂಟಾದರೆ ಹಾಗೂ ಅತಿಯಾದ ಚಂಡಮಾರುತಗಳು ಬಂದರೆ ॥

ಭೈರವಂ ಚಾತಿಮಾತ್ರಂ ಚ ರುದಂತಿ ಮೃಗಪಕ್ಷಿಣಃ ।
ವಿದ್ಯುತ್ ಸನಿತನಿರ್ಘೋಷಮನಭ್ರೇವಾತಿ ವರ್ಷಣಂ ॥

ಮರಣಕ್ಕೆ ಹೆದರಿದವುಗಳಾಗಿ, ಎಲ್ಲಾ ಜೀವಿಗಳೂ ರೋದಿಸುತ್ತವೆ । ಹಾಗೂ ಮೋಡವಿಲ್ಲದೇ ಮಿಂಚು, ಗುಡುಗು, ಆರ್ಭಟಗಳುಂಟಾದಾಗ ॥

ಸಿಂಹವ್ಯಾಘ್ರಸ್ಯೇತರಾಣಾಂ ದರ್ಶನಂ ಚ ಚತುಷ್ಪಥೇ ।
ಈದೃಶೈರ್ಲಕ್ಷಣೋಪಾತೈರ್ವಿನಾಶಮಭಿಲಕ್ಷಯೇತ್ ॥

ಸಿಂಹ, ಹುಲಿ, ಮುಂತಾದ ಕಾಡುಪ್ರಾಣಿಗಳು ರಾಜಮಾರ್ಗದಲ್ಲಿ ಕಂಡುಬಂದರೆ । ಈ ರೀತಿಯಾದಂತಹ ಲಕ್ಷಣಗಳಿಂದ, ಉತ್ಪಾತ ಮುಂತಾದವುಗಳುಂಟಾಗಿ ವಿನಾಶವು ಒದಗುತ್ತದೆ ಎಂದು ತಿಳಿಯಬೇಕು ॥

ಅನ್ಯೋತ್ರಜಾಯತೇ ರಾಜಾ ತಥಾಚಾನ್ಯಃ ಪುರೋಹಿತಃ ।
ತತ್ರ ಶಾಂತಿಂ ಪ್ರವಕ್ಷ್ಯಾಮಿ ಪಾಪಪ್ರಶಮನೀಂ ಶುಭಾಂ ॥

ಇಲ್ಲಿ, ಬೇರೇ ರಾಜನು ಹುಟ್ಟಿಕೊಳ್ಳುತ್ತಾನೆ ಹಾಗೂ ಬೇರೇಯ ಪುರೋಹಿತರುಗಳೂ ಹುಟ್ಟಿಕೊಳ್ಳಬೇಕಾಗುತ್ತದೆ । ಹಾಗಾಗಿ ಈ ದೋಷಗಳನ್ನು ಪರಿಹರಿಸುವ ಶಾಂತಿಯನ್ನು ಹೇಳುತ್ತೇನೆ ॥

ಔದುಂಬರೀಣಾಂ ಸಮಿಧಾಂ ಶತಮಷ್ಟೋತ್ತರಂ ದಹೇತ್ ।
ಸಹಕ್ಷೀರ ಘೃತಾಕ್ತಾನಾಂ ಮಹತ್ ಸೂತ್ರಗಣೈಃ ಶುಭೈಃ ॥

ಹಾಲು, ತುಪ್ಪಗಳಿಂದ ಅದ್ದಿದ ಔದುಂಬರ ಸಮಿತ್ತಿನಿಂದ 108 ಹೋಮ ಮಾಡಬೇಕು ।

ಹುತ್ವಾ ಶತಸಹಸ್ರಂ ತು ಪರಾಂ ಶಾಂತಿಂ ಅವಾಪ್ನುಯಾತ್ ।
ಯಮಲಾನಿ ಚ ಜಾಯಂತೇ ಶುಭಾನಿ ನೀಚವಾಹನಾಃ ॥

100 ಅಥವ 1000 ಹೋಮಗಳನ್ನು ಮಾಡಿ ಶಾಂತಿಕರ್ಮವನ್ನು ಆಚರಿಸಬೇಕು । ಹೆಚ್ಚು ಹೆಚ್ಚು ಅವಳಿಜವಳಿ ಮಕ್ಕಳು ಉಂಟಾಗುವುದು, ಕತ್ತೆ ಮುಂತಾದವುಗಳ ಮೇಲೆ ಸಂಚಾರ ಮಾಡುವುದು ಹಾಗೂ ॥

ಮುಂಡವಕ್ರಮುಖ್ಯಶ್ಚೈವ ಕುಟಾಶ್ಚ ಕುಣಪಾಸ್ತಥಾ ।
ಅಮಾನುಷಾ ಮಾನುಷಾಣಾಂ ಗಜಾನಾಂ ಮೃಗಪಕ್ಷಿಣಾಂ ॥

ಬೋಳುತಲೆ, ವಕ್ರಮುಖ, ಮೃತರಾಗಿಯೇ,,,, ಈ ರೀತಿ ಲಕ್ಷಣಗಳಿಂದ ಹುಟ್ಟುವುದು । ಹಾಗೆಯೇ ಆನೆ, ಪಕ್ಷಿ, ಪ್ರಾಣಿಗಳಿಗೆ ॥

ಜಾಯಂತೇ ಉಪರಿ ದಂತಾ ವೈ ಅಶ್ವಾಶ್ಚ ವಿಕೃತಾನನಾಃ ।
ಬಹುಶೀರ್ಷಮಶೀರ್ಷಂ ವಾ ಬಹುವರ್ಣಮವರ್ಣಕಂ ॥

ಮುಖದಮೇಲೆ ದಂತಗಳು ಹುಟ್ಟುವುದು ಹಾಗೂ ಸೊಟ್ಟುಮುಖದ ಕುದುರೆ ಹುಟ್ಟುವುದು । ತುಂಬಾ ತಲೆ ಹೊಂದಿ ಹುಟ್ಟುವುದು / ತಲೆಯೇ ಇಲ್ಲದೇ ಹುಟ್ಟುವುದು / ಅನೇಕ ಬಣ್ಣಗಳಿಂದ ಕೂಡಿದ ಮಗುವು ಹುಟ್ಟುವುದು / ಬಣ್ಣವೇ ಇಲ್ಲದೇ ಹುಟ್ಟುವುದು ॥

ಏಕಶೃಂಗಮಶೃಂಗಂ ವಾ ಚತುರ್ಭುಜಮಥಾಭುಜಂ ।
ದೀರ್ಘಕರ್ಣಮಕರ್ಣಂ ವಾ ಗಜಕರ್ಣಮುಖಂ ತಥಾ ॥

ಒಂದೇ ಕೋಡು ಇರುವ / ಕೋಡೇ ಇಲ್ಲದಿರುವ ಪಶು ಹುಟ್ಟುವುದು ಅಥವ 4 ಕೈ ಇರುವ / ಕೈಯೇ ಇಲ್ಲದಿರುವ ಮಗು ಹುಟ್ಟುವುದು । ಉದ್ದವಾದ ಕಿವಿ ಇರುವ / ಕಿವಿಯೇ ಇಲ್ಲದಿರುವ / ಆನೆಯ ಕಿವಿಯಂತೆ ಮುಖವಿರುವಂತೆ ಹುಟ್ಟುವುದು ॥

ವ್ಯಾಲವ್ಯಾಘ್ರ ಮುಖಾಕಾರಂ ಬಿಡಾಲಮುಖಮುನ್ನತಂ ।
ಈದೃಶಾನಿ ಸ್ವರೂಪಾಣಿ ದೃಶ್ಯಂತೇ ಯತ್ರ ಗೌತಮ ॥

ತೋಳ, ಹುಲಿ,,, ಇವುಗಳ ಮುಖಗಳಂತೆ ಇರುವ ಮಗು ಹಾಗೂ ಬೆಕ್ಕಿನ ಮುಖದಂತೆ ಇರುವ ಮಗು ಹುಟ್ಟುವುದು । ಈ ರೀತಿಯಾದಂತಹ ಸ್ವರೂಪಗಳು ಲೋಕದಲ್ಲಿ ಕಂಡುಬಂದರೆ, ಅಲ್ಲಿ ಯುದ್ಧದಿಂದ ಜನಕ್ಷಯವಾಗುವ ಭಯದ ಸೂಚನೆಯೆಂದು ತಿಳಿಯಬೇಕು ॥

ತತ್ರ ಸಂಗ್ರಾಮತೋ ಬ್ರೂಯಾದ್ಭಯಂ ಕ್ಷಯಕರಂ ಮಹತ್ ।
ಜನಕ್ಷಯಂ ಚ ಪೌರಾಣಾಂ ರಾಜ್ಞಃ ಶ್ರೇಣಿವಧಂ ತಥಾ ॥

ಸಮಾಜದಲ್ಲಿ ಜನರ ನಾಶ, ರಾಜವಂಶಗಳ ನಾಶ ಇವೆಲ್ಲದರ ಸೂಚನೆ ಮೇಲೆ ಹೇಳಿದಂತಹ ವಿಕೃತಿಗಳು ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ಸರ್ವಪಾಪ ಪ್ರಣಾಶಿನೀಂ ।
ಖದಿರಾಶ್ವತ್ಥ ಸಮಿಧಾಂ ಸಹಸ್ರಾಷ್ಟೋತ್ತರಂ ದಹೇತ್ ॥

ಈ ಎಲ್ಲಾ ದೋಷಗಳನ್ನು ಪರಿಹರಿಸುವ ಶಾಂತಿಯನ್ನು ಹೇಳುತ್ತೇವೆ । ಕಗ್ಗಲಿ, ಅರಳಿ, ಇವುಗಳ ಸಮಿತ್ತಿನಿಂದ 100, 1000 ಹೋಮಗಳನ್ನು ಮಾಡಬೇಕು ॥

ವಿರೂಪಾಕ್ಷೇಣ ಮಂತ್ರೇಣ ವಿಧಿವತ್ಸು ಸಮಾಹಿತಃ ।
(ವಿರೂಪಾಕ್ಷೇಣ ಅಗ್ನಿರ್ಮೂರ್ಧೇತ್ಯಾದಿನಾ । ತತ್ರ ಹಿ ವಿರೂಪಾಕ್ಷ ಋಷಿಃ) ।
ದದ್ಯಾಚ್ಚ ಕಪಿಲಾಂ ಧೇನುಂ ಹುತಾಂತೇ ಶಾಂತಿಮಿಚ್ಛತಾ ॥

ವಿರೂಪಾಕ್ಷಋಷಿಯ ಅಗ್ನಿರ್ಮೂರ್ಧಾ ಮಂತ್ರದಿಂದ, ವಿಧಿಯಂತೆ ಹೋಮಿಸಬೇಕು । ಕೇಸರಿಬಣ್ಣದ ಹಸುವನ್ನು ಕರುಸಹಿತವಾಗಿ ಹೋಮದ ಕೊನೆಯಲ್ಲಿ ದಾನಮಾಡಬೇಕು ॥

ತತಸ್ತಚ್ಛಾಮ್ಯತೇ ಪಾಪಂ ಜಾತವೇದೋ ವಚೋಯಥಾ ।
ಯತ್ರಾಕಾರ್ಯಾಣಿ ಕಾರ್ಯಂತೇ ಅದಂಡ್ಯೇದಂಡಪಾತನಂ ॥

ಹೀಗೆ ಮಾಡುವುದರಿಂದ ಪಾಪಗಳೆಲ್ಲವೂ ನಾಶವಾಗಿ, ಅಗ್ನಿಯು ಸುಪ್ರೀತನಾಗುತ್ತಾನೆ । ಎಲ್ಲಿ ಅಕಾರ್ಯಗಳು, ದುಷ್ಕರ್ಮಗಳು ಮಾಡಲ್ಪಡುತ್ತವೆಯೋ ಹಾಗೂ ನಿರಪರಾಧಿಗೆ ಶಿಕ್ಷೆಯಾಗುತ್ತದೆಯೋ ॥

ಅಪೂಜ್ಯಾಶ್ಚೈವ ಪೂಜ್ಯಂತೇ ಅಮಾನ್ಯಾಂಶ್ಚೈವ ಮನ್ಯತೇ ।
ಅನಡ್ವಾಂಶ್ಚ ಪಿಬೇದ್ಧೇನುಂ ಚಾನಡ್ವಾಹಂ ಪಿಬೇದ್ಯದಿ ॥

ನೀಚರಿಗೆ ಗೌರವ, ಆದರ ಕೊಡಲ್ಪಡುತ್ತವೆಯೋ ಹಾಗೂ ಸಜ್ಜನರಿಗೆ, ಶ್ರೇಷ್ಠರಿಗೆ ಅವಮಾನ ಮಾಡಲ್ಪಡುತ್ತವೆಯೋ । ಎತ್ತುಗಳು ಹಸುವಿನ ಹಾಲನ್ನು ಕುಡಿಯುತ್ತವೆಯೋ ಹಾಗೂ ಹಸು ಎತ್ತಿನ ಮೂತ್ರವನ್ನು ಯಾವಾಗ ಕುಡಿಯುತ್ತವೆಯೋ ॥

ವಿಧಿನೋತಿ ಚ ಗೌರ್ವತ್ಸಂ ಪ್ರಜಾತಂ ನಾಭಿನಂದನಿ ।
(ಪ್ರಜಾತಂ ವತ್ಸಂ ಗೌರಿತಿ ಶೇಷಃ) ॥

ಹಾಗೂ ಹಸುವು ತನ್ನ ಕರುವನ್ನು ಕೋಪದಿಂದ ಸಾಯಿಸುತ್ತದೆಯೋ ಹಾಗೂ ತನ್ನ ಕರುವನ್ನು ಹಸುವು ಇಷ್ಟಪಡುವುದಿಲ್ಲವೋ ॥

ಮೈಥುನಂ ವಿಪರೀತಂ ಚ ಅಕಾಲೇ ಮೃಗಪಕ್ಷಿಣಾಂ ।
ಬ್ರಾಹ್ಮಣಾಭಿನ್ನ ಮರ್ಯಾದಾ ನ ತಿಷ್ಠಂತಿ ಸ್ವಕರ್ಮಸು ॥

ವಿಪರೀತ ವಿಜಾತಿಗಳಲ್ಲಿ ಅಕಾಲದಲ್ಲಿ ಮೃಗಪಕ್ಷಿಗಳ ಮೈಥುನವಾಗುತ್ತದೆಯೋ । ಬ್ರಾಹ್ಮಣರು ಗೌರವ, ಆದರಗಳನ್ನು ಕಳೆದುಕೊಳ್ಳುತ್ತಾರೋ ಹಾಗೂ ಬ್ರಾಹ್ಮಣರು ಯಾವಾಗ ತಮ್ಮ ಧರ್ಮಾಚರಣೆಗಳನ್ನು ಬಿಡುತ್ತಾರೋ ॥

ಈದೃಶೈರ್ಲಕ್ಷಣೋತ್ಪಾತೈಃ ವಿದ್ಯಾದ್ದೇಶಸ್ಯ ವಿಶ್ರಮಂ ।
ಕಲಹಂ ಜಾಯತೇ ಘೋರಂ ದುರ್ಭಿಕ್ಷಂ ಜನಮಾರಕಮ್ ॥

ಈ ರೀತಿಯಾದ ಮೇಲ್ಕಂಡ ಲಕ್ಷಣಗಳು ಉಂಟಾದಾಗ, ಹಾಗೂ ಧೂಮಕೇತು ಉಲ್ಕಾಪಾತಗಳು ಉಂಟಾದಾಗ, ಆಗ ದೇಶವು ನಾಶವಾಗುತ್ತದೆ । ಹೇಗೆಂದರೆ – ಪರಸ್ಪರ ಯುದ್ಧ, ಘೋರವಾದ ದುರ್ಭಿಕ್ಷ, ಕ್ಷಾಮ, ನಾಶ ॥

ರಾಜಾಮಾತ್ಯ ವಿನಾಶಂ ಚ ಪೌರಾಣಾಂ ಚ ಮಹದ್ಭಯಂ ।
ತತ್ರ ಶಾಂತಿಂ ಪ್ರವಕ್ಷ್ಯಾಮಿ ಸರ್ವಪಾಪ ಪ್ರಣಾಶಿನೀಮ್ ॥

ರಾಜ, ಮಂತ್ರಿಗಳ ಮರಣ, ಪುರಜನರಿಗೆ ಘೋರ ಆಪತ್ತು ಉಂಟಾಗುತ್ತವೆ । ಈ ರೀತಿಯ ಆಪತ್ತಿಗೆ ಶಾಂತಿಯನ್ನು ಹೇಳುತ್ತವೆ ॥

ಪ್ರಜ್ವಾಲ್ಯಾಶ್ವತ್ಥ ಸಮಿಧಃ ಕೃತ್ವಾ ಸಸ್ತರಣಂ ಮಹತ್ ।
ಔದುಂಬರೀಣಾಂ ಸಮಿಧಾಂ ಸಹಸ್ರಾಷ್ಟೋತ್ತರಂ ಬುಧಃ ॥

ಅಗ್ನಿಯನ್ನು ಪ್ರಜ್ವಲಿಸಿ, ಪರಿಸ್ತರಣಾದಿಗಳನ್ನು ಹಾಕಿ, ಅರಳಿಸಮಿತ್ತಿನಿಂದ । ಹಾಗೂ ಅತ್ತಿಸಮಿತ್ತುಗಳಿಂದ 100 ಅಥವ 1000 ಸಂಖ್ಯೆಯಲ್ಲಿ ಹೋಮಿಸಬೇಕು ॥

ಜುಹುಯಾದ್ವಿಧಿವತ್ ವಹ್ನೌ ಪರಾಂಶಾಂತಿಂ ಅಭೀಪ್ಸತಾ ।
ದಾಸೀದಾಸಸಮಾಯುಕ್ತಂ ಗೃಹಂ ದದ್ಯಾತ್ ದ್ವಿಜಾತಯೇ ॥

ಶಾಸ್ತ್ರವಿಧಿಯಂತೆ ಎಲ್ಲ ದೋಷಗಳ ಶಾಂತಿಗೆ ಅಗ್ನಿಯಲ್ಲಿ ಹೋಮಿಸಬೇಕು । ಸೇವಕರಿಂದ ಕೂಡಿದ ಮನೆಯನ್ನು ದಾನವಾಗಿ ಬ್ರಾಹ್ಮಣರಿಗೆ ಕೊಡಬೇಕು ॥

ತತಃ ಪ್ರಶಾಮ್ಯತೇ ಪಾಪಂ ವಸಿಷ್ಠಸ್ಯ ವಚೋಯಥಾ ।
ಕೃಷ್ಣಾಪಿಪೀಲಿಕಾ ಯತ್ರ ಗ್ರಾಮೇಷು ನಗರೇಷು ಚ ॥

ವಸಿಷ್ಠರ ಈ ಮಾತಿನಂತೆ ಶಾಂತಿಯನ್ನು ಮಾಡಿದರೆ ದೋಷಗಳು ಪರಿಹಾರವಾಗುತ್ತವೆ । ಕಪ್ಪು ಇರುವೆಗಳು ಯಾವ ಗ್ರಾಮ ಅಥವ ನಗರದಲ್ಲಿ ಅತ್ಯಂತ ಹೆಚ್ಚಾಗಿ ಕಂಡುಬರುತ್ತವೆಯೋ ॥

ದೃಶ್ಯಂತೇಹ್ಯತಿಮಾತ್ರಂ ಚೇದೂರ್ಧ್ವಂ ವಂಶಕೃತಾಲಯಾಃ ।
ಶಾಂತಿಗೃಹೇ ದೇವಗೃಹೇ ತಥಾ ಚ ನೃಪತೇರ್ಗೃಹೇ ॥

ತಮ್ಮ ಗೂಡುಗಳನ್ನು ಕಟ್ಟಿಕೊಂಡು ಅಲ್ಲೇ ವಾಸಮಾಡುತ್ತವೆಯೋ । ಹಾಗೂ ಶಾಂತಿ ಮಾಡುವಂತಹ ಮನೆಯಲ್ಲಿ, ದೇವಗೃಹದಲ್ಲಿ ಹಾಗೂ ರಾಜನ ಮನೆಯಲ್ಲಿ ॥

ಉಪರ್ಯುಪರಿಮಾತ್ರಂ ತು ದೃಶ್ಯಂತೇ ವೇಶ್ಮನಸ್ತದಾ ।
ಮಕ್ಷಿಕಾ ಮಶಕಾ ದಂಶಾ ಅತಿಮಾತ್ರ ಭಯಾವಹಾಃ ॥

ಹಾಗೂ ಮನೆಯ ಮೇಲ್ಭಾಗದಲ್ಲಿ ಜೇನುನೊಣ, ಸೊಳ್ಳೆ, ಇನ್ನೂ ಬೇರೇರೀತಿಯ ಕಚ್ಚುವಕೀಟಗಳು, ಅತಿಯಾಗಿ ಕಂಡುಬಂದರೆ ॥

ಈದೃಶೈರ್ಲಕ್ಷಣೋತ್ಪಾತೈಃ ಮಹಾಚೋರಭಯಂ ಭವೇತ್ ।
ದ್ರವ್ಯಾಣಾಂ ಹರಣಂ ಬ್ರೂಯಾತ್ ಪರಚಕ್ರಸ್ಯ ಚಾಗಮಮ್ ॥

ಈ ರೀತಿಯ ಲಕ್ಷಣಗಳಿಂದ, ಭೂಕಂಪ – ಉಲ್ಕಾಪಾತಗಳಾಗುವ ಹಾಗೂ ದೊಡ್ಡಚೋರರ ಭಯವೂ ಸಹ ಉಂಟಾಗುತ್ತದೆ । ಎಲ್ಲ ದ್ರವ್ಯ ಸಂಪತ್ತೂ ನಾಶವಾಗುವ ಸಾಧ್ಯತೆ ಇರುತ್ತದೆ ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ವಿಶ್ವಾಮಿತ್ರೋಪದರ್ಶಿತಾಮ್ ।
ಅಶ್ವತ್ಥಸಮಿಧಶ್ಚೈವ ಹುತ್ವಾಚಾಷ್ಟೋತ್ತರಂ ಶತಮ್ ॥

ಇದಕ್ಕೆ ಶಾಂತಿಯನ್ನು ವಿಶ್ವಾಮಿತ್ರರು ಹೇಳಿದಂತೆ ತಿಳಿಸಿಕೊಡುತ್ತೇವೆ । ಅರಳಿಸಮಿತ್ತಿನಿಂದ 108 ಹೋಮವನ್ನು ಮಾಡಬೇಕು ॥

ಪೂರ್ಣಪಾತ್ರಾಣಿ ವೈ ದದ್ಯಾದ್ಧುತಾಂ ತೇ ಭೂರಿದಕ್ಷಿಣಾಂ ।
ದಾಸೀದಾಸಸಮಾಯುಕ್ತಂ ಗೃಹಂ ದದ್ಯಾತ್ ದ್ವಿಜಾತಯೇ ॥

ಹೋಮದಕೊನೆಯಲ್ಲಿ, ಪೂರ್ಣಪಾತ್ರೆಯನ್ನು ಮತ್ತು ಭೂರಿದಕ್ಷಿಣೆಯನ್ನು ಕೊಡಬೇಕು । ದಾಸೀದಾಸ ಸಹಿತವಾದ ಮನೆಯನ್ನು ದಾನಮಾಡಬೇಕು ॥

ತಿಲಪಾತ್ರಂ ಪ್ರದಾತವ್ಯಂ ತಿಲಾನ್ ಜುಹ್ವೀತ ಸಂಯತಃ ।
ಅನಗ್ನಿರ್ಜ್ವಲತೇ ಯತ್ರ ವಿಧೂಮೇ ಧೂಮದರ್ಶನಂ ।

ತಿಲಪಾತ್ರವನ್ನು ದಾನ ಮಾಡಬೇಕು ಹಾಗೂ ತಿಲಹೋಮವನ್ನೂ ಮಾಡಬೇಕು । ಅಗ್ನಿಯಿಲ್ಲದೇ ಹೊಗೆಬರಲು ಕಾರಣವಿಲ್ಲದೇ, ಹೊಗೆಯು ಕಂಡರೆ ॥

ಅಲಯುಕ್ತಮಯುಕ್ತಂ ವಾ ಪುರಂ ಪ್ರವಿಶತೇ ತದಾ ।
ಬಾಲೈಃ ಸಹ ಕುಮಾರಶ್ಚ ಕಲಹಂ ಯತ್ರ ಕುರ್ವತೇ ।

ಆಗ ಆ ಪಟ್ಟಣಕ್ಕೆ ಯೋಗ್ಯವಲ್ಲದ ಮಹಾಆಪತ್ತು ಮುಂತಾದವುಗಳು ಉಂಟಾಗುತ್ತವೆ ಎಂದು ಊಹಿಸಬೇಕು । ಮಕ್ಕಳಜೊತೆ, ಬಾಲಕರು ಜಗಳವನ್ನು ಮಾಡಿದರೆ ॥

ಕಲಹಂ ಬ್ರಾಹ್ಮಣಾನಾಂ ಚ ಸೇನಾಪತಿ ಪರಿಗ್ರಹಂ ।
ಗವಾದ್ಯಾನಾಂ ಭವೇನ್ನಿತ್ಯಂ ಯಥಾಘೋಷನಿವಾಸಿನಾಂ ।

ಹಾಗೂ ಬ್ರಾಹ್ಮಣರ ಒಳಗೆ ಪರಸ್ಪರ ಜಗಳ, ವೈಮನಸ್ಸು ಉಂಟಾದರೆ ಹಾಗೂ ಆ ಜಗಳವು ಸೇನಾಪತಿಯ ಬಳಿಗೆ ಹೋದರೆ ಅಥವ ಸೇನಾಪತಿಯು ಬಂಧನಕ್ಕೆ ಒಳಗಾದರೆ । ಹಸುವನ್ನು ಪ್ರತಿನಿತ್ಯ ತಿನ್ನುವವರ ವಿಜೃಂಭಣೆಯು ಹಾಗೂ ಅವರ ಕೈಮೇಲಾಗುವಿಕೆಯು ಉಂಟಾದರೆ ॥

ಶ್ರೇಷ್ಠಿನಾಂ ಸಾರ್ಥವಾಹಾನಾಂ ಚ ಕಲಹೋ ಯತ್ರಜಾಯತೇ ।
ರಾಜಾಮಾತ್ಯ ವಿನಾಶಂ ಚ ಪೌರಾಣಾಂ ಚ ಮಹದ್ಭಯಂ ।

ಹಾಗೂ ವ್ಯಾಪಾರಿಗಳಿಗೂ, ಧನಿಕರಿಗೂ ಕಲಹ ಉಂಟಾದರೆ । ರಾಜ, ಮಂತ್ರಿಗಳ ನಾಶ ಹಾಗೂ ನಾಗರಿಕರಿಗೆ ತೊಂದರೆಗಳು ಉಂಟಾಗುತ್ತವೆ ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ಪಿತಾಮಹ ವಚೋಯಥಾ ।
ಪಾಲಾಶ ಸಮಿಧಶ್ಚಾಗ್ನೌ ಸಹಸ್ರಾಷ್ಟೋತ್ತರಂ ದಹೇತ್ ।

ಇದರ ಪರಿಹಾರಕ್ಕೆ ಬ್ರಹ್ಮನು ಹೇಳಿರುವ ಶಾಂತಿಯನ್ನು ಹೇಳುವೆನು । ಮುತ್ತಗದ ಸಮಿತ್ತಿನಿಂದ ಅಗ್ನಿಯಲ್ಲಿ 1000 ಅಥವ 100 ಹೋಮವನ್ನು ಮಾಡಬೇಕು ॥

ಬ್ರಾಹ್ಮಣಾನ್ ಭೋಜಯೇತ್ತತ್ರ ಪರಮಾನ್ನೇನ ಶಾಂತಯೇ ।
ಪ್ರಾಕಾರೇ ನಗರದ್ವಾರ ಗೋಪುರಾಟ್ಟಲಕೇಷು ಚ ।

ಬ್ರಾಹ್ಮಣರಿಗೆ ಪರಮಾನ್ನ ಮುಂತಾದ ಭಕ್ಷ್ಯಗಳಿಂದ ಭೋಜನ ಮಾಡಿಸಬೇಕು । ಹಾಗೂ ನಗರದ ದ್ವಾರ, ಗೋಪುರ, ಆಯಕಟ್ಟಿನ ಸ್ಥಳ ॥

ರಥ್ಯಾ ಚತುಷ್ಪಥೇ ಚೈವ ದೇವತಾಯತನೇಷು ಚ ।
ನಿವಾಸಂ ಯತ್ರಕುರ್ವಂತಿ ಬಕಾಃ ಕಾಕಾಶ್ಚ ಕೌಶಿಕಾಃ ।

ರಥಬೀದಿ, ಚತುಷ್ಪಥ, ದೇವಮಂದಿರಗಳಲ್ಲಿ । ಹಾಗೂ ಬಕಪಕ್ಷಿ, ಕಾಗೆ, ಗುಬ್ಬಚ್ಚಿ ॥

ಗೃದ್ಧಾಃ ಪರಭೃತಶ್ಚೈವ ಆರಣ್ಯಾಮೃಗಪಕ್ಷಿಣಃ ।
ನಿರೂಹೇತ್ಕಲಹಮ್ ಘೋರಂ ಸಿದ್ಧಾನಾಂ ವಚನಂ ಯಥಾ ।

ಹದ್ದು, ಕೋಗಿಲೆ ಹಾಗೂ ಕಾಡಿನ ಜೀವಿಗಳು । ಇವುಗಳು ವಾಸಿಸುವ ಸ್ಥಾನದಲ್ಲಿ ಪರಸ್ಪರ ಘೋರವಾದ ಕಲಹವು ಉಂಟಾದರೆ, ಸತ್ಪುರುಷರ ಅನುಭವದಂತೆ ॥

(ನಿರೂಹೇತ್ತರ್ಕಯೇತ್) ॥

ಇಂತಹ ಸನ್ನಿವೇಶಗಳು ಬರುವ ಆಪತ್ತುಗಳ ಸೂಚನೆಯೆಂದು ತಿಳಿಯಬೇಕು ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ನಾರದೇನೋಪಲಕ್ಷಿತಾಮ್ ।
ಅಶ್ವತ್ಥಸಮಿಧಾನಾಂ ತು ಘೃತಾಕ್ತಾನಾಂ ವಿಭಾವಸೌ ।

ಅದಕ್ಕೆ ಶಾಂತಿಯನ್ನು ನಾರದರು ಹೇಳಿದಂತೆ ಹೇಳುತ್ತೇನೆ । ಅರಳಿ ಸಮಿತ್ತನ್ನು ತುಪ್ಪದಲ್ಲಿ ಅದ್ದಿ ಸೂರ್ಯನಿಗೆ ॥

ವಾಯವ್ಯೇನೇಹ ಮಂತ್ರೇಣ ನಿವೇದ್ಯಂ ಚರುಶೋಭಿತಮ್ ।
ತತಃ ಶಾಮ್ಯತೇ ಪಾಪಂ ನಾರದಸ್ಯ ವಚೋಯಥಾ ।

ಹಾಗೂ ವಾಯುದೇವತೆಗೆ ಚರುಹೋಮಗಳನ್ನು ಮಾಡುವುದರಿಂದ ದೋಷಗಳು ನಾಶವಾಗುತ್ತವೆ ॥

ಮೃತಶ್ಮಶಾನಂ ಯೋನೀತ ಉಪಜೀವತಿ ಮಾನವಃ ।
ಗೃಹೇ ಯಸ್ಯಪ್ರವಿಷ್ಟೋಸೌ ತಿಷ್ಠೇದಥ ಕದಾಚನ ।

ಸತ್ತನೆಂದು ತಿಳಿದು, ಸ್ಮಶಾನಕ್ಕೆ ಒಯ್ಯಲ್ಪಟ್ಟವನಾಗಿ ಅಲ್ಲಿ ಮತ್ತೆ ಜೀವಿಸಿದರೆ, ಅಂತಹ ಮನುಷ್ಯನು । ಯಾರ ಮನೆಯನ್ನು ಪ್ರವೇಶಮಾಡುತ್ತಾನೋ ಅಥವ ಎಲ್ಲಿ ವಾಸಿಸುತ್ತಾನೋ ॥

ಅಚಿರಾನ್ಮೃತ್ಯುಮಾಯಾತಿ ಹೃತಮತ್ರ ಪರಿಗ್ರಹಃ ।
ಸಾವಿತ್ರ್ಯಾಷ್ಟಸಹಸ್ರೇಣ ಕ್ಷೀರಶಾಂತಿಂ ಚ ಕಾರಯೇತ್ ।

ಅತಿಶೀಘ್ರವಾಗಿ ಆ ಮನೆಯಲ್ಲಿ ಮರಣವಾಗುತ್ತದೆ । ಹಾಗಾಗಿ ಸಾವಿತ್ರೀಮಂತ್ರದಿಂದ ಅವನನ್ನು ಮತ್ತೆ ಸ್ವೀಕಾರ ಮಾಡಬೇಕು । ಹೇಗೆಂದರೆ – ಸಾವಿತ್ರೀಮಂತ್ರದಿಂದ 8000 ಹೋಮ ಅಥವ ಜಪ ಮಾಡಿ, ಕ್ಷೀರಶಾಂತಿ ಮಾಡಿಸಬೇಕು ॥

(ಕ್ಷೀರಶಾಂತಿಶ್ಚ ರಕ್ತಾನಾಮೇಕವರ್ಣಾನಾಮಿತ್ಯಾದಿನಾ ವಕ್ಷ್ಯಮಾಣಾ) ।

(ಕ್ಷೀರಶಾಂತಿಯೆಂದರೆ – ಮುಂದೆ ರಕ್ತಾನಾಂ ಮುಂತಾದ ಶ್ಲೋಕಗಳಿಂದ ಹೇಳಲ್ಪಡುವುದಾಗಿದೆ) ।

ಕಪಿಲಾಂ ತಿಲಕಾಂಸ್ಯಂ ಚ ಹುತಾಂತೇ ಭೂರಿದಕ್ಷಿಣಾಂ ।
ತತಃ ತಚ್ಛಾಮ್ಯತೇ ಪಾಪಂ ಧರ್ಮರಾಜಮತಂ ಯಥಾ ।

ಕೆಂಬಣ್ಣದ ಹಸುವನ್ನು ಹಾಗೂ ತಿಲವನ್ನು ಹಾಗೂ ಕಂಚಿನ ಪಾತ್ರೆಯನ್ನು ಹೋಮದ ಕೊನೆಯಲ್ಲಿ ಭೂರಿದಕ್ಷಿಣೆಯ ಜೊತೆ ಕೊಡಬೇಕು । ಆಗ ಧರ್ಮರಾಜನಾದ ಯಮನ ಕೃಪೆಯಿಂದ ದೋಷವು ಶಾಂತಿಯಾಗುತ್ತದೆ ॥

ಶ್ವಾಶೃಗಾಲೋಥ ವಾ ಗೃಧ್ರಃ ಕಾಕೋ ವಾ ಯದಿ ಮಾನುಷಃ ।
ಶ್ಮಶಾನಾನ್ಮಾಂಸಮಾದಾಯ ಪುರಮಧ್ಯೇ ಪ್ರವೇಶಯೇತ್ ।

ನಾಯಿ, ನರಿ, ಹದ್ದು, ಕಾಗೆ ಇವುಗಳು, ಮನುಷ್ಯನ । ಮಾಂಸವನ್ನು ಸ್ಮಶಾನದಿಂದ ತಂದು, ಪಟ್ಟಣದಲ್ಲಿ ಹಾಕಿದರೆ, ಅಥವ ಕಚ್ಚಿಕೊಂಡು ಊರಿನೊಳಕ್ಕೆ ಬಂದರೆ ।

ನಗರಂ ಪಟ್ಟನಂ ವಾಪಿ ಗ್ರಾಮಂ ವಾ ಯದಿ ವಾ ಗೃಹಂ ।
ಅಚಿರೇಣೈವ ಕಾಲೇನ ತತ್ ಸ್ಮಶಾನಂ ಭವಿಷ್ಯತಿ ।

ಹಾಗೂ ನಗರ, ಪಟ್ಟಣ, ಗ್ರಾಮ, ಅಥವ ಮನೆ ಇವುಗಳಲ್ಲಿ ಹಾಕಿದರೆ । ಅತಿಶೀಘ್ರದಲ್ಲೇ ಈ ಎಲ್ಲಾ ಜಾಗಗಳಲ್ಲೂ ಮೃತ್ಯುವಿನ ಆರ್ಭಟ ಉಂಟಾಗುತ್ತದೆ ।

ಸಂಗ್ರಾಮಶಸ್ತ್ರಸಂಘಾತಂ ಕ್ಷಿಪ್ರಮೇವ ವಿನಿರ್ದಿಶೇತ್ ।
ತತ್ರ ಶಾಂತಿಂ ಪ್ರವಕ್ಷ್ಯಾಮಿ ಯಥಾಪಾಪಂ ಪ್ರಶಾಮ್ಯತಿ ।

ಯುದ್ಧ, ಶಸ್ತ್ರಗಳಿಂದ ಹೊಡೆದಾಟ ಇವೆಲ್ಲವೂ ಬೇಗನೆ ಉಂಟಾಗುತ್ತದೆ । ಹಾಗಾಗಿ ಇದಕ್ಕೆ ಶಾಂತಿಯನ್ನು ಹೇಳುತ್ತೇವೆ ॥

ಅಶ್ವತ್ಥಸಮಿಧೋಗೃಹ್ಯ ತಿಲಾಂಶ್ಚ ಮಧುಸಂಯುತಾನ್ ।
ವಿರೂಪಾಕ್ಷೇಣ ಮಂತ್ರೇಣ ವಿರೂಪಾಕ್ಷಾನ್ ಸ ಶೋಣಿತಾನ್ ।

ಅರಳಿ ಸಮಿತ್ತು ಹಾಗೂ ಜೇನುಮಿಶ್ರಿತವಾದ ಕರಿ, ಬಿಳಿಎಳ್ಳು ಇವನ್ನು ತೆಗೆದುಕೊಂಡು । ರುದ್ರಮಂತ್ರದಿಂದ ॥

ತಿಲಪಾತ್ರೋಪಹಾರಂ ಚ ಕ್ಷೀರಶಾಂತಿಂ ಚ ಕಾರಯೇತ್ ।
ತತಃ ಚ ಶಾಮ್ಯತೇ ಪಾಪಂ ಪ್ರಜಾಪತಿಮತಂ ಯಥಾ ।

ತಿಲಪಾತ್ರದಾನ ಹಾಗೂ ಕ್ಷೀರಶಾಂತಿಯನ್ನು ಮಾಡಬೇಕು । ಹೀಗೆ ಮಾಡಿದರೆ, ಪ್ರಜಾಪತಿಯ ಅಭಿಪ್ರಾಯದಂತೆ ದೋಷಗಳು ನಾಶವಾಗುತ್ತವೆ ॥

ಸೌತ್ರಾಮಣೀ ಪಾಕಯಜ್ಞಃ ಪಶುಬಂಧಸ್ತಥೈವ ಚ ।
ಕ್ರತವಶ್ಚ ಪ್ರವರ್ತಂತೇ ಅನಧೀತ್ಯ ಕೃತೋದಯಾಃ ।

ಸೌತ್ರಾಮಣೀಯಾಗವನ್ನು, 7 ಪಾಕಯಜ್ಞಗಳನ್ನು ಹಾಗೂ ಪಶುಬಂಧಯಾಗವನ್ನೂ । ಮಹಾಮಹಾಯಜ್ಞಗಳನ್ನೂ ಅದರ ಅಧ್ಯಯನವನ್ನು ಮಾಡದೇ ॥

ಯಸ್ಮಿಂಸ್ತಥಾ ಪ್ರವರ್ತಂ ತೇ ಕ್ರೋಧಲೋಭಭಯಾದಪಿ ।
ಅದತ್ವಾ ದಕ್ಷಿಣಾ ಸಮ್ಯಕ್ ಮಹದುತ್ಪಾತಲಕ್ಷಣಂ ।

ಕೇವಲ ಕ್ರೋಧ, ದ್ವೇಷ, ಲೋಭ ಮತ್ತು ಭಯಗಳಿಂದ ಮಾಡಲ್ಪಡುತ್ತೇವೆಯೋ । ಹಾಗೂ ದಕ್ಷಿಣೆಯನ್ನು ಶಾಸ್ತ್ರೋಕ್ತರೀತಿಯಾಗಿ ಕೊಡದೇ, ಯಜ್ಞವನ್ನು ನಡೆಸುತ್ತಾರೋ ಆಗ ಅದು ದೊಡ್ಡ ಆಪತ್ತಿಗೆ ಲಕ್ಷಣವು ॥

ಅನಾರೋಗ್ಯಮನಾವೃಷ್ಟಿಃ ದುರ್ಭಿಕ್ಷಂ ಜನಮಾರಕಂ ।
ಜ್ವರಃ ಕಾಸಸ್ತಥಾಶ್ವಾಸಃ ಕಚ್ಛೂದದ್ರುವಿಕೋಷ್ಟಿಕಾಃ ।

ಇದರಿಂದ ಅನಾರೋಗ್ಯ, ಕ್ಷಾಮ, ದುರ್ಭಿಕ್ಷ, ಜನನಾಶ, ಜ್ವರ । ಕೆಮ್ಮು ಹಾಗೂ ಉಬ್ಬಸ, ಅಸ್ತಮ, ಸಾಂಕ್ರಾಮಿಕ ರೋಗಗಳು ॥

ಶಿರೋರೋಗಾಕ್ಷಿರೋಗಾಶ್ಚ ಪಾಂಡುರೋಗೋ ಗಲಗ್ರಹಃ ।
ಆಧಯಶ್ಚ ಪ್ರವರ್ತಂ ತೇ ದುರ್ದುಷ್ಟ್ರೇಸ್ವಲ್ಪಲಕ್ಷಣೈಃ ।

ಶಿರೋರೋಗಗಳು, ಕಣ್ಣಿನ ರೋಗಗಳು ಹಾಗೂ ಚರ್ಮರೋಗಗಳು, ಗಂಟಲು ರೋಗ । ಮುಂತಾದ ಮಹಾರೋಗಗಳು ಉಟಾಗುತ್ತವೆ, ಇದಕ್ಕೆ ಕಾರಣ ಆ ಯಜ್ಞಗಳ ಬಗ್ಗೆ ತಪ್ಪಾದಜ್ಞಾನ ಮತ್ತು ದುಷ್ಟಜ್ಞಾನ ಉಳ್ಳದ್ದು ॥

ತತ್ರ ಶಾಂತಿಂ ಪ್ರವಕ್ಷ್ಯಾಮಿ ಬೃಹಸ್ಪತಿಮತಂ ಯಥಾ ।
ತ್ರಿರಾತ್ರೋಪೋಷಿತೋ ಭೂತ್ವಾ ಹವಿಷ್ಯಾಶೀಃ ಪುರೋಹಿತಃ ।

ಇದಕ್ಕೆ ಬೃಹಸ್ಪತಿಯ ಮತದಂತೆ ಶಾಂತಿಯನ್ನು ಹೇಳುತ್ತೇನೆ । 3 ರಾತ್ರಿ ಉಪವಾಸವಿದ್ದು, ಹವಿಸ್ಸಿನಿಂದ ಹೋಮಾದಿಗಳನ್ನು ಮಾಡಿ, ಪುರೋಹಿತನು ಆಶೀರ್ವಾದ ಮಾಡಬೇಕು ॥

ಸಕ್ಷೀರಾಣಾಂ ಘೃತಾಕ್ತಾನಾಂ ಸಮಿಧಾನಾಂ ಶತಂ ದಹೇತ್ ।
(ಪಲಾಶಸ್ಯೇತಿ ವಿಶೇಷಃ)
ತತಸ್ತಚ್ಛಾಮ್ಯತೇ ಪಾಪಂ ಬೃಹಸ್ಪತಿಮತಂ ಯಥಾ ।

ಮುತ್ತುಗದ ಸಮಿತ್ತನ್ನು ಹಾಲು ಮತ್ತು ತುಪ್ಪಕ್ಕೆ ಅದ್ದಿ 100 ಹೋಮಗಳನ್ನು ಮಾಡಬೇಕು । ಆಗ ಈ ದೋಷಕ್ಕೆ ಶಾಂತಿಯು ದೊರೆಯುತ್ತದೆ ॥

*****

17. ಅಥ ಜನಮಾರೀಶಾಂತಿಃ

ಹೇಮಾದ್ರೌ ಗರ್ಗಃ

ರುದ್ರಪ್ರಕೋಪಜೋಯಸ್ಮಾಜ್ಜನಮಾರಃ ಪ್ರವರ್ತತೇ ।
ತಸ್ಮಾತ್ ಪ್ರಸಾದಯೇದ್ಯತ್ನಾತ್ ದೇವದೇವಂ ಮಹೇಶ್ವರಂ ।

ರುದ್ರದೇವನು ಯಾವಾಗ ಯಾವುದರಿಂದ ಕೋಪಗೊಳ್ಳುತ್ತಾನೋ, ಆಗ ಜನರ ಸಾವು ಉಂಟಾಗುತ್ತದೆ । ಆದ್ದರಿಂದ ಪ್ರಯತ್ನಪೂರ್ವಕವಾಗಿ ದೇವತೆಗಳಿಗೂ ದೇವನಾದ ಮಹೇಶ್ವರನನ್ನು ಸಂತೋಷಗೊಳಿಸಬೇಕು ॥

ಗಾಣಪತ್ಯೇನ ವಿಧಿನಾ ಅಥರ್ವಶಿರಸಾ ತಥಾ ।
ಯಾಮಲೇನ ವಿಧಾನೇನ ಕುರ್ಯಾತ್ ದೇವಪ್ರಸಾಧನಮ್ ।

ಹೇಗೆಂದರೆ, ಗಣಪತ್ಯಥರ್ವಶೀರ್ಷದಿಂದ । ಯಾಮಲವಿಧಿಯಿಂದ ಈಶ್ವರನನ್ನು ಪ್ರಸನ್ನಗೊಳಿಸಬೇಕು ॥

ಶಿವಸೂಕ್ತಮುಮಾಸೂಕ್ತಂ ಜಪೇಚ್ಚ ಶತರುದ್ರಿಯಂ ।
ಬಲ್ಯೋಪಹಾರಾನ್ ವಿವಿಧಾನ್ ಚತ್ವರೇಷು ನಿವೇದಯೇತ್ ।

ಶಿವಸೂಕ್ತ, ಉಮಾಸೂಕ್ತ, ಶತರುದ್ರೀಯಗಳನ್ನು ಜಪಿಸಿ । ಬಲಿ, ಸತ್ಕಾರಗಳನ್ನು 4 ದಾರಿಸೇರುವ ಕಡೆ ಹಾಕಬೇಕು ।

ಆವಾಹಯಿತ್ವಾ ಸಗಣಂ ರುದ್ರಂ ರಾತ್ರಾವಹಸ್ಸುಚ ।
ಬ್ರಾಹ್ಮಣಾನ್ ಭಕ್ಷ್ಯಭೋಜ್ಯಶ್ಚ ದಕ್ಷಿಣಾಭಿಶ್ಚ ತೋಷಯೇತ್ ।

ಗಣಸಹಿತನಾದ ರುದ್ರನನ್ನು ಬೆಳಿಗ್ಗೆ ಅಥವ ರಾತ್ರಿ ಅಥವ ಎರಡೂಸಮಯಗಳಲ್ಲೂ ಆವಾಹಿಸಿ । ಬ್ರಾಹ್ಮಣರನ್ನು ದಕ್ಷಿಣೆಗಳಿಂದ ಸಂತೋಷಗೊಳಿಸಬೇಕು ॥

ಪ್ರಸಾದಿತೇ ತತೋರೌದ್ರೇ ಜನಮಾರೋ ನಿವರ್ತತೇ ।
ಉಪೋಷಿತೋ ನೃಪಸ್ನಾತಃ ಶುಕ್ಲವಸ್ತ್ರಃ ಸಮಾಹಿತಃ ।

ಹೀಗೆ ರುದ್ರನನ್ನು ಪ್ರಸನ್ನಗೊಳಿಸಲಾಗಿ, ಜನರ ವಿನಾಶವು ಪರಿಹಾರವಾಗುತ್ತದೆ । ರಾಜನು ಉಪವಾಸದಲ್ಲಿದ್ದು, ಸ್ನಾನಮಾಡಿ ಬಿಳಿವಸ್ತ್ರವನ್ನು ಧರಿಸಿ, ಏಕಾಗ್ರತೆಯಿಂದ ಪೂಜಿಸಿ ॥

ಆತ್ಮರಕ್ಷಾಂ ಸ್ವಯಂ ಕೃತ್ವಾ ತತಶ್ಶಾಂತಿಂ ಪ್ರಯೋಜಯೇತ್ ।

ತನ್ನ ರಕ್ಷಣೆಯನ್ನು ತಾನೇ ಮಾಡಿಕೊಂಡು ಆಮೇಲೆ ಈ ಶಾಂತಿಯನ್ನು ಮಾಡಬೇಕು ॥

*****

18. ಅಥ ಅನಾವೃಷ್ಟಿಶಾಂತಿಃ

ಹೇಮಾದ್ರೌ ಮದನರತ್ನೇ ನೃಸಿಂಹಪುರಾಣೇ –

ಅನಾವೃಷ್ಟಿ ಮಹಾಮಾರೀ ಜ್ವರರೋಗಭಯೇ ತಥಾ ।
ನರಸಿಂಹಂ ಸಮಾರಾಧ್ಯ ಬ್ರಾಹ್ಮಣೈರ್ವೇದಪಾರಗೈಃ ।

ಅನಾವೃಷ್ಟಿ, ಮಹಾಮಾರೀ, ಜ್ವರರೋಗಗಳ ಭಯವುಂಟಾಗಲಾಗಿ । ವೇದಜ್ಞರಾದ ಬ್ರಾಹ್ಮಣರಿಂದ ನರಸಿಂಹನನ್ನು ಆರಾಧಿಸಿ ॥

ಕಾರಯೇಲ್ಲಕ್ಷಹೋಮಂ ತು ಗ್ರಾಮೇ ಯಶ್ಚ ನರಾಧಿಪಃ ।
(ನೃಸಿಂಹ ಮಂತ್ರೇಣ ಹೋಮಃ)
ಸ್ಥಾನತ್ಯಾಗಾಜ್ಜಪಾದ್ಧೋಮಾತ್ ಮಹಾಮಾರೀ ಪ್ರಶಾಮ್ಯತಿ ।

ನರಸಿಂಹದೇವರಿಗೆ ಲಕ್ಷಹೋಮವನ್ನು ನರಸಿಂಹ ದೇವತಾಮಂತ್ರದಿಂದ, ಗ್ರಾಮದ ಯಜಮಾನನು ಮಾಡಿಸಬೇಕು । ಮಹಾಮಾರೀ ಬಂದಿರುವ ಸ್ಥಾನವನ್ನು ಬಿಡುವುದರಿಂದ ಹಾಗೂ ದೇವತಾ ಜಪವನ್ನು ಮತ್ತು ಹೋಮವನ್ನು ಮಾಡುವುದರಿಂದ ಈ ದೋಷಗಳು ಪರಿಹಾರವಾಗುತ್ತವೆ ॥

ಅಥರ್ವಣೇ ತು ರೌದ್ರೀಶಾಂತಿರುಕ್ತಾ ।

ಅಥರ್ವಣವೇದದಲ್ಲಿ ಈ ಅನಾವೃಷ್ಟಿಶಾಂತಿಗೆ ರುದ್ರದೇವತೆಯ ಶಾಂತಿಯನ್ನು ಹೇಳಿದೆ ॥

******

19. ಅಥ ಪರ್ಜನ್ಯಶಾಂತಿಃ

ಅಥಾತಃ ಪರ್ಜನ್ಯಸೂಕ್ತವಿಧಿಂ ವ್ಯಾಖ್ಯಾಸ್ಯಾಮೋ ಬ್ರಾಹ್ಮಣಾನ್ ವೇದಪಾರಗಾನ್ ವರಣಪೂರ್ವಕಮುಭ್ಯರ್ಚ್ಯ । ವರುಣಪ್ರತಿಮಾಂ ಪೂಜಯಿತ್ವಾ । ಉದಕಮಧ್ಯೇ ಸ್ಥಿತ್ವಾ ವರುಣಂ ಧ್ಯಾತ್ವಾ ತತ್ಸವಿತುಃ ಇತಿ ಪಚ್ಛೋರ್ಧರ್ಚಶೋನವಾನಂ ವೇದಾದೀನ್ ಜಪತಿ ।

ಈಗ ಪರ್ಜನ್ಯಸೂಕ್ತ ವಿಧಿಯನ್ನು ಹೇಳುತ್ತೇವೆ. ವೇದಪಾರಂಗತರಾದ ಬ್ರಾಹ್ಮಣರನ್ನು ಋತ್ವಿಜರಾಗಿ ಆಹ್ವಾನಿಸಿ, ಅವರಿಗೆ ಪೂಜಾಸತ್ಕಾರವನ್ನು ಮಾಡಿ । ನಂತರ ವರುಣ ಪ್ರತಿಮೆಗೆ ಪೂಜಿಸಿ । ನೀರಿನಲ್ಲಿ ನಿಂತು ವರುಣನನ್ನು ಧ್ಯಾನಿಸಿ, ಸಾವಿತ್ರಿಯನ್ನೂ ಹಾಗೂ 4 ವೇದಗಳ ಆರಂಭಗಳನ್ನೂ ಜಪಿಸಬೇಕು ।

ಇಮಂ ಮೇ ವರುಣೇತಿ ಪಂಚಋಚಂ ಓಜಸಾ ವಾಚಾಮ್ಯೇಂದ್ರಿಯೇಣ ಯೋ ವೈ ಸಪ್ತದಶ ಮೈತ್ರಾವರುಣೇಮಸೌಸೌರಿಂ ವರುಣಂ ಪ್ರಜಾಪತಿರ್ವರುಣಾಯ ಯಾವಾಮೇತದ್ವೈ ಹಿರಣ್ಯವರ್ಣಾ ಪವಮಾನೋ ವೃಷಾಸೋ ಅಗ್ಂಶಃ ಸಿಗ್ಂ ಹೇ ಸರ್ವೇಷು ಯೋಸೌ ಯೋಪಾಮಾದಿ ಸರ್ವಾನ್ ಅನುವಾಕಾನ್ ಸುವರ್ಣ ಸಹಸ್ರಶೀರ್ಷಾದ್ಭ್ಯ ಆದಿತ್ಯೋ ವೈ ಪೃಥಿವೀ ಸಮಿದಿತ್ಯನುವಾಕಾನ್ ಜಪಿತ್ವಾ ।

ಇಮಂ ಮೇ ವರುಣ ಎಂಬ ಮಂತ್ರವನ್ನು 5 ಋಕ್, ಉದುತ್ಯಂ ಮಂತ್ರವನ್ನು 6 ಋಕ್, ಆಪ ಉಂದಂತು, ಉದಾಯುಷಾ,, ಮಹಾಗ್ಂ ಇಂದ್ರಃ,, ವಾಚಾಮೇಂದ್ರಿಯೇಣ,,, ಯೋ ವೈ ಸಪ್ತದಶ,,, ಮೈತ್ರಾವರುಣ ಮಂತ್ರ,, ಸೂರ್ಯ ಮಂತ್ರ,, ವರುಣನ ಮಂತ್ರ,, ಪ್ರಜಾಪತಿರ್ವರುಣಾಯ,,, ಯಾವಾಮಿಂದ್ರಾವರುಣಾ,, ಏತದ್ವೈ,,, ಹಿರಣ್ಯವರ್ಣಾ,,, ಪವಮಾನಃ,,,, ವೃಷಾಸೋ,,, ಸಿಗ್ಂ ಹೇ,,, ಸರ್ವೇಷು ವಾ,,, ಯೋ ಸೌ,,, ಯೋಪಾಂ,, ಮುಂತಾದ ಈ ಎಲ್ಲಾ ಅನುವಾಕಗಳನ್ನೂ ಹಾಗೂ ಸುವರ್ಣಂ ಘರ್ಮಂ,,, ಸಹಸ್ರಶೀರ್ಷ,,, ಅದ್ಭ್ಯಸ್ಸಂಭೂತಃ,,, ಆದಿತ್ಯೋ ವೈ,,, ಪೃಥಿವೀಸಮಿತ್,,, ಮುಂತಾದ ಅನುವಾಕಗಳನ್ನು ಜಪಿಸಿ ।

ಜಲಾತ್ ಬಹಿರ್ಗತ್ವಾ ಆಚಮ್ಯ ಪಶ್ಚಿಮಾಭಿಮುಖೋ ಭೂತ್ವಾ ಅಪೀವ್ಯೋ ಅನ್ನಾಮಿತ್ಯನುವಾಕಂ ಏಕಾದಶವಾರಂ ಜಪಿತ್ವಾ ।

ನೀರಿನಿಂದ ಹೊರಗೆಬಂದು, ಆಚಮನ ಮಾಡಿ, ಪಶ್ಚಿಮಾಭಿಮುಖನಾಗಿ, ಅಪೀವೋ ಅನ್ನಾಂ,,, ಎಂಬ ಅನುವಾಕವನ್ನು 11 ಬಾರಿ ಜಪಿಸಿ,

ಶುಷ್ಕವಸ್ತ್ರಾಣಿ ಧಾರಯೇತ್ । ತತೋ ಹೋಮಂ ಕರಿಷ್ಯ ಇತಿ ಸಂಕಲ್ಪ್ಯ । ವಿಧಿವದಗ್ನಿಂ ಪ್ರತಿಷ್ಠಾಪ್ಯ, ಮುಖಾಂತೇ ಕ್ಷೀರಾಜ್ಯವೇತಸ ಸಮಿದ್ಭಿಃ ಆಜ್ಯಮಿಶ್ರಚರುಭಿಃ ಪ್ರತ್ಯೇಕಮಷ್ಟೋತ್ತರಶತಂ ಅಷ್ಟಾವಿಂಶತಿರ್ವಾ ಪುರೋವಾತೋವರ್ಷನ್ ಇತಿ ಜುಹುಯಾತ್ ವರ್ಷಾಯ ಪುರೋವಾತಾಯೇತಿ ಉದ್ದೇಶತ್ಯಾಗಃ ।

ಒಣಗಿದ ವಸ್ತ್ರವನ್ನು ಧರಿಸಬೇಕು । ನಂತರ ಹೋಮದ ಸಂಕಲ್ಪ ಮಾಡಿ । ವಿಧಿಯಂತೆ ಅಗ್ನಿಯನ್ನು ಪ್ರತಿಷ್ಠಿಸಿ, ಮುಖಾಂತದವರೆಗೆ ಮಾಡಿ, ಹಾಲು, ತುಪ್ಪ, ವೇತಸ ಸಮಿತ್ತುಗಳಿಂದ ಹಾಗೂ ತುಪ್ಪಮಿಶ್ರಿತ ಚರುವಿನಿಂದ ಈ ಒಂದೊಂದು ದ್ರವ್ಯವನ್ನೂ 108 ಅಥವ 28 ಸಂಖ್ಯೆಗಳಿಂದ ಪುರೋವಾತೋ ವರ್ಷನ್,,, ಎಂಬ ಮಂತ್ರದಿಂದ ಹೋಮಿಸಬೇಕು । ವರ್ಷಾಯ ಪುರೋವಾತಾಯ ಇದಂ ನಮಮ ಎಂದು ಉದ್ದೇಶತ್ಯಾಗವು ।

ತತೋ ಜಯಾದೀನ್ ಪ್ರಾಯಶ್ಚಿತ್ತಾಹುತೀರ್ಜುಹುಯಾತ್ । ಪೂರ್ಣಾಹುತಿಂ ಹುತ್ವಾ ಶಾಂತಿಪಾಠಂ ಕುರ್ಯಾತ್ ಯಾವದ್ದೀಕ್ಷಾದಿನಾನಿ ತಾವತ್ ಬ್ರಹ್ಮಚರ್ಯಂ ಚರೇತ್ । ನಂತರ ಜಯಾದಿಗಳನ್ನು ಮಾಡಿ, ಪ್ರಾಯಶ್ಚಿತ್ತಾಹುತಿಗಳನ್ನೂ ಮಾಡಿ । ಪೂರ್ಣಾಹುತಿಯನ್ನೂ ಮಾಡಿ, ಶಾಂತಿಪಾಠವನ್ನೂ ಹೇಳಬೇಕು । ಎಲ್ಲಿಯವರೆಗೆ ದೀಕ್ಷಾದಿನವೋ, ಅಲ್ಲಿಯವರೆಗೂ ಬ್ರಹ್ಮಚರ್ಯ ಪಾಲನೆಯನ್ನು ಎಲ್ಲರೂ ಮಾಡಬೇಕು ।

ವೇದವಿದೇ ಕುಟುಂಬಿನೇ ಶಾಂತಾಯ ಆಚಾರ್ಯಾಯ ವಸ್ತ್ರಾದಿಭಿಃ ಅಲಂಕೃತ್ಯ ಪ್ರತಿಮಾಂ ದದ್ಯಾತ್ । ಋತ್ವಿಗ್ಭ್ಯೋ ದಕ್ಷಿಣಾಂ ದದ್ಯಾತ್ ಇತ್ಯಾಹ ಭಗವಾನ್ ಬೌಧಾಯನಃ । ವೇದವಿದನಾದ ಗೃಹಸ್ಥನಿಗೆ ಹಾಗೂ ಶಾಂತಚಿತ್ತನಾದ ಆಚಾರ್ಯನಿಗೆ ವಸ್ತ್ರಾದಿಗಳಿಂದ ಪ್ರತಿಮೆಯನ್ನೂ ದಾನ ಮಾಡಬೇಕು । ಋತ್ವಿಜರಿಗೆ ದಕ್ಷಿಣೆಯನ್ನು ಕೊಡಬೇಕೆಂದೂ ಬೋಧಾಯನರು ಹೇಳಿದ್ದಾರೆ ।

ಋಗ್ವಿಧಾನೇ ಅಚ್ಛಾವದೇತಿ ಸೂಕ್ತಂ ತು ವೃಷ್ಟಿಕಾಮಃ ಪ್ರಯೋಜಯೇತ್ ನಿರಾಹಾರಃ ಕ್ಲಿನ್ನವಾಸಾ ಅಚಿರೇಣ ಪ್ರವರ್ಷತಿ ।

ಹುತ್ವಾಯುತಂ ವೈತಸೀನಾಂ ಕ್ಷೀರಾಕ್ತಾನಾಂ ಹುತಾಶನೇ ।
ಮಹದ್ವರ್ಷಮವಾಪ್ನೋತಿ ಸೂಕ್ತೇನಾಚ್ಛಾವದೇನ ಹಿ ॥

ವೃಷ್ಟಿಕಾಮನಾದವನಿಗೆ, ಅಚ್ಛಾವದ,,, ಎಂಬ ಋಕ್ ಸೂಕ್ತವನ್ನು ವಿಧಾನಿಸಿದೆ । ಉಪವಾಸವಿದ್ದು ಒದ್ದೆಬಟ್ಟೆಯಲ್ಲಿ ಶ್ರದ್ಧೆಯಿಂದ ಜಪಿಸಿದರೆ ಬೇಗನೇ ಮಳೆಯಾಗುತ್ತದೆ । ಹಾಲು, ತುಪ್ಪ, ಹಾಗೂ ಹಾಲಿನಲ್ಲಿ ಅದ್ದಿದ ವೇತಸ ಸಮಿತ್ತಿನಿಂದ ಹೋಮಿಸಿದರೆ ಹಾಗೂ ಅಚ್ಛಾವದ,,, ಸೂಕ್ತ ಪಾರಾಯಣದಿಂದ ಮಹತ್ ವೃಷ್ಟಿಯು ಆಗುತ್ತದೆ.

****

20. ರಜಸ್ವಲಾಶಾಂತಿಃ

ಅಥ ರಜೋದರ್ಶನಕಾಲೇ ಪ್ರಭೂತದೋಷ ಪರಿಹಾರಾಯ ಶೌನಕೋಕ್ತಶಾಂತಿಂ ಕೃತ್ವಾ ಪ್ರಶಸ್ತ ತಿಥ್ಯಾದಿಷು ಋತುದರ್ಶನ ಪರ್ಯಂತಂ ಗಮನಂ ವರ್ಜಯೇದಿತ್ಯಾಹ ಜ್ಯೋತಿರ್ವಸಿಷ್ಠಃ

ರಜೋದರ್ಶನ ಕಾಲದಲ್ಲಿ, ತುಂಬಾದೋಷಗಳು ಕಂಡರೆ, ಅದರ ಪರಿಹಾರಕ್ಕಾಗಿ, ಶೌನಕರು ಹೇಳಿದಂತೆ, ಒಳ್ಳೆಯ ತಿಥಿ, ವಾರ, ನಕ್ಷತ್ರಗಳಲ್ಲಿ ಶಾಂತಿಯನ್ನು ಮಾಡಿ, ಮತ್ತೆ ಋತುದರ್ಶನವಾಗುವವರೆಗೆ ಸಂಭೋಗವು ನಿಷೇಧವೆಂದು ಹೇಳಿದೆ ॥

ಪ್ರಭೂತದೋಷೇ ಯದಿ ದೃಶ್ಯತೇ ತತ್ಪುಷ್ಪಂ ತತಶ್ಶಾಂತಿಕಕರ್ಮ ಕಾರ್ಯಂ ।
ವಿಸರ್ಜಯೇದೇವ ತದೇಕಶಯ್ಯಾಂ ಯಾವದ್ರಜೋದರ್ಶನಂ ಇಷ್ಟಋಕ್ಷೇ ।

ಶಾಂತಿಕರ್ಮವಾದ ಮೇಲೆ ಪುನಃಋತುದರ್ಶನವಾಗುವವರೆಗೆ ಒಂದೇಹಾಸಿಗೆಯಲ್ಲಿ ದಂಪತಿಗಳು ಮಲಗಬಾರದು ॥

ಜ್ಯೋತಿಃಕಶ್ಯಪೋಪಿ –

ತಿಥಿವಾಸರಧಿಷ್ಣ್ಯೇಷು ಪುಷ್ಪಂ ದುಷ್ಟೇಷು ದೃಶ್ಯತೇ ।
ಗಮನಂ ವರ್ಜಯೇತ್ತತ್ರ ಪುನಶ್ಶುದ್ಧೇಷು ದರ್ಶನಾತ್ ।

ದೋಷಯುಕ್ತ ತಿಥಿ, ವಾರ, ನಕ್ಷತ್ರಗಳಲ್ಲಿ, ರಜೋದರ್ಶನವಾದರೆ ಪುನಃ ಒಳ್ಳೆಯ ತಿಥ್ಯಾದಿಗಳಲ್ಲಿ ಆಗುವವರೆಗೆ ಏಕಶಯ್ಯೆಯಲ್ಲಿ ಮಲಗಬಾರದು ॥

ಅತ್ರ ರಜೋದರ್ಶನಕಾಲೇ ತಿಥಿವಾರ ನಕ್ಷತ್ರಾದೌ ದುಷ್ಟಶಾಂತಿ ಕರ್ಮಕಾರ್ಯಂ ತದುಕ್ತಂ ಶೌನಕೇನ –

ಸಾರ್ತವಾನಾಂತು ನಾರೀಣಾಂ ಶಾಂತಿಂ ವಕ್ಷ್ಯಾಮಿ ಶೌನಕಃ ।
ತಿಥಿವಾರರ್ಕ್ಷ ಯೋಗೇಭ್ಯೋ ಲಗ್ನಾತ್ ಸಗ್ರಹ ಸಪ್ತಮಾತ್ ।

ಋತುಮತಿಯಾದಂತಹ ನಾರಿಯರಿಗೆ ಶೌನಕರು ಈ ರೀತಿ ಶಾಂತಿಯನ್ನು ಹೇಳಿದ್ದಾರೆ। ದೋಷಯುಕ್ತ ತಿಥಿ, ವಾರ, ನಕ್ಷತ್ರ, ಯೋಗ ಹಾಗೂ ಲಗ್ನಾತ್ ಸಪ್ತಮದಲ್ಲಿ ॥

ಗ್ರಹೇಭ್ಯೋ ದುಸ್ಸ್ಥಿತೇಭ್ಯಶ್ಚ ತತ್ತದ್ದೋಷ ಕ್ಷಯಾಯ ಚ ।
ಅತ್ರ ಪುತ್ರಾದಿ ಲಾಭಾಯ ದಂಪತ್ಯೋರಭಿವೃದ್ಧಯೇ ।

ದುಷ್ಟಗ್ರಹಗಳಿದ್ದು, ಆ ದೋಷಗಳನ್ನು ಪರಿಹರಿಸಲು । ಪುತ್ರ ಪೌತ್ರಾದಿಗಳ ಕ್ಷೇಮಕ್ಕಾಗಿ ಹಾಗೂ ದಂಪತಿಗಳ ಆಯುಷ್ಯಾಭಿವೃದ್ಧಿಗೆ ॥

ಪಂಚಮೇऽಹ್ನಿ ಚತುರ್ಥೇ ವಾ ಗ್ರಹಾತಿಥ್ಯಪುರಸ್ಸರಂ ।
ತಸ್ಮಿನ್ನಹನಿ ಕರ್ತವ್ಯಂ ಋತುಹೋಮಂ ವಿಧಾನತಃ ।

ರಜೋದರ್ಶನವಾದ 4 ನೇ ಅಥವ 5 ನೇ ದಿನದಲ್ಲಿ ಅಥವಾ ಒಳ್ಳೆಯ ದಿನದಲ್ಲಿ । ಋತುಶಾಂತಿ ಹೋಮವನ್ನು ಮಾಡಬೇಕು ॥

ಆಚಾರ್ಯಂ ವರಯೇತ್ ಪ್ರಾಜ್ಞಂ ಭುವನೇಶ್ವರ್ಯನುಷ್ಠಿತಂ ।
ಹೋಮಾರ್ಥಂ ಚ ಜಪಾರ್ಥಂ ಚ ವರಯೇತ್ ಋತ್ವಿಜೋ ಬಹೂನ್ ।

ವೇದವಿದನಾದ ಆಚಾರ್ಯನನ್ನು ಆಹ್ವಾನಿಸಿ, ಭುವನೇಶ್ವರೀಶಾಂತಿಯನ್ನು ಮಾಡಬೇಕು । ಜಪ, ಹೋಮಾದಿಗಳಿಗೆ ಋತ್ವಿಜರನ್ನೂ ಆಹ್ವಾನಿಸಬೇಕು ॥

ಯಜಮಾನೋ ದ್ವಿಜೈಸ್ಸಾರ್ಧಂ ಶಾಂತಿಹೋಮಂ ಸಮಾಚರೇತ್ ।
ಗೃಹಾದೀಶಾನ ದಿಗ್ಭಾಗೇ ದೇವತಾಪೂಜನಾಯ ಚ ।

ಯಜಮಾನನು ಬ್ರಾಹ್ಮಣರ ಜೊತೆ ಶಾಂತಿಹೋಮವನ್ನು ಮಾಡಬೇಕು । ಮನೆಯ ಈಶಾನದಿಕ್ಕಿನಲ್ಲಿ ದೇವತಾಕಾರ್ಯಗಳನ್ನು ಮಾಡಬೇಕು ॥

ಕುಂಭಸ್ಥಾಪನಮಿತ್ಯಾದಿ ತತ್ತನ್ಮಂತ್ರೇಣ ಕಾರಯೇತ್ ।
ಕುಂಭೋಪರಿ ನ್ಯಸೇತ್ಪಾತ್ರಂ ಕಾಂಸ್ಯಂ ವಾ ತಾಮ್ರಮೇವ ವಾ ।

ಕಲಶಸ್ಥಾಪನೆ ಮುಂತಾದ ವಿಧಿಗಳನ್ನು ಆಯಾಯಾಮಂತ್ರಗಳಿಂದ ಮಾಡಿಸಬೇಕು । ಕಲಶದ ಮೇಲೆ ಕಂಚಿನ ಅಥವ ತಾಮ್ರದ ಪಾತ್ರೆಯನ್ನು ಇಡಬೇಕು ॥

ಪಾತ್ರೋಪರಿ ನ್ಯಸೇದ್ವಸ್ತ್ರಂ ಪ್ರತಿಮಾಂ ಭುವನೇಶ್ವರೀಮ್ ।
ತನ್ಮೂಲ್ಯಂ ವಾ ನ್ಯಸೇತ್ ತತ್ರ ಇಂದ್ರಾಣೀಂ ಚ ಪುರಂದರಂ ।

ಆ ಪಾತ್ರೆಯ ಮೇಲೆ ವಸ್ತ್ರಸಹಿತವಾಗಿ ಭುವನೇಶ್ವರೀ ಪ್ರತಿಮೆಯನ್ನು ಇಡಬೇಕು । ಅಥವ ಆ ಪ್ರತಿಮೆಯ ಮೌಲ್ಯಕ್ಕೆ ಸಮನಾದ ಹಣವನ್ನಾದರೂ ಇಡಬೇಕು ಹಾಗೂ ಇಂದ್ರಾಣೀ ಪುರಂದರರ ಪ್ರತಿಮೆಯನ್ನೂ ಇಡಬೇಕು ॥

ಆಚಾರ್ಯಃ ಪೂಜಯೇದ್ದೇವೀಂ ಅಂಗಾದ್ಯಾವರಣಾನಿ ಚ ।
ಅನ್ಯೋ ವಾ ಪೂಜನಂ ಕುರ್ಯಾತ್ ಗಾಯತ್ರ್ಯಾ ಮಂತ್ರಸಾರಯಾ ।

ಆಚಾರ್ಯನು, ಈ ಪ್ರತಿಮೆಗೆ ಅಂಗ, ಆವರಣ ಪೂಜೆಗಳನ್ನು ಮಾಡಬೇಕು । ಅಥವ ಉಳಿದ ಬ್ರಾಹ್ಮಣರು ಗಾಯತ್ರೀಮಂತ್ರದಿಂದಲೂ ಪೂಜಿಸಬಹುದು ॥

ಇಂದ್ರಾಣೀಂ ಪೂಜಯೇದ್ದೇವೀಂ ಇಂದ್ರಾಣೀಮಾಸುನಾರಿಷು ।
ಕ್ರಮೇಣ ಪೂಜಯೇದಿಂದ್ರಂ ಇಂದ್ರತ್ವಾ ವೃಷಭಂ ವಯಂ ।

ಇಂದ್ರಾಣೀ ಮಾಸುನಾರಿಷು ಮಂತ್ರದಿಂದ ದೇವಿಯನ್ನು ಪೂಜಿಸಬೇಕು । ಹೀಗೆ ಕ್ರಮವಾಗಿ ಇಂದ್ರ ತ್ವಾ ಮಂತ್ರದಿಂದ ಇಂದ್ರನನ್ನು ಪೂಜಿಸಬೇಕು ॥

ಅನೇನ ವಿಧಿನಾऽಚಾರ್ಯಃ ಪೂಜಯೇದ್ದೇವತಾತ್ತ್ರಯಂ ।
ಆವಾಹನಾದಿ ಸಕಲೈಃ ಉಪಚಾರೈಃ ಪೃಥಕ್ ಪೃಥಕ್ ।

ಈ ವಿಧಿಯಿಂದಲೇ 3 ದೇವತೆಗಳಿಗೂ ಕ್ರಮವಾಗಿ ಪೂಜಿಸಬೇಕು । ಆವಾಹನ ಮುಂತಾದ ಸಕಲ ಉಪಚಾರಗಳನ್ನು ಪ್ರತ್ಯೇಕವಾಗಿಯೇ ಮಾಡಬೇಕು ॥

ತತ್ತನ್ಮಂತ್ರಂ ಸ್ಪೃಶನ್ ಕುಂಭಂ ಮಂತ್ರೇಣ ಭುವನೇಶ್ವರೀಮ್ ।
ಜಪೇದಾಚಾರ್ಯ ಆಹೋಮಾತ್ ಶ್ರೀಸೂಕ್ತಂ ಚ ಜಪೇತ್ ತತಃ ।

ಆಯಾಯಾ ದೇವತೆಗಳ ಮಂತ್ರಗಳಿಂದ, ಕುಂಭಗಳನ್ನು ಮುಟ್ಟಿಕೊಂಡು । ಆಚಾರ್ಯನು ಶ್ರೀಸೂಕ್ತವನ್ನು ಉಳಿದ ಮಂತ್ರಗಳನ್ನೂ ಜಪಿಸಬೇಕು ॥

ಸ್ಪೃಶನ್ ವೈ ದಕ್ಷಿಣಂ ಕುಂಭಂ ಋತ್ವಿಗೇಕೋ ಜಪೇದಥ ।
ಚತ್ವಾರಿ ರುದ್ರಸೂಕ್ತಾನಿ ಚತುರ್ಮಂತ್ರೋತ್ತರಾಣಿ ಚ ।

ದಕ್ಷಿಣದ ಕಲಶವನ್ನು ಮುಟ್ಟಿಕೊಂಡು ಒಬ್ಬ ಋತ್ವಿಜನು । 4 ರುದ್ರಸೂಕ್ತಗಳನ್ನೂ ಹಾಗೂ ಮುಂದಿನ 4 ಮಂತ್ರಗಳನ್ನೂ ಜಪಿಸಬೇಕು ॥

ಸಂಸ್ಪೃಶನ್ ಉತ್ತರಂ ಕುಂಭಂ ಶ್ರೀರುದ್ರಂ ರುದ್ರಸಂಖ್ಯಯಾ ।
ಶಂ ನ ಇಂದ್ರಾಗ್ನೀಸೂಕ್ತಂ ಚ ತತ್ರ ಚೈವಂ ಸ್ಪೃಶನ್ ಜಪೇತ್ ।

ಉತ್ತರದ ಕಲಶವನ್ನು ಮುಟ್ಟಿಕೊಂಡು, ರುದ್ರವನ್ನು 11 ಬಾರಿ । ಹಾಗೂ ಶನ್ನ ಇಂದ್ರಾಗ್ನೀ ಸೂಕ್ತವನ್ನೂ ಹೇಳಬೇಕು ॥

ಕುಂಭಸ್ಯ ಪಶ್ಚಿಮೇದೇಶೇ ಶಾಂತಿಹೋಮಂ ಸಮಾಚರೇತ್ ।
ಅನ್ವಾಧಾನಂ ತತಃ ಕುರ್ಯಾತ್ ಹೋಮತಂತ್ರಂ ಸಮಾಚರೇತ್ ।

ಕಲಶಗಳ ಪಶ್ಚಿಮದಲ್ಲಿ, ಹೋಮವನ್ನು ಮಾಡಬೇಕು । ಅಗ್ನಿಮುಖಪ್ರಯೋಗದಿಂದ ಹೋಮವನ್ನು ಮಾಡಬೇಕು ॥

ಪೂರ್ಣಪಾತ್ರ ನಿಧಾನಾಂತಂ ಕೃತ್ವಾऽಚಾರ್ಯೋ ದ್ವಿಜೈಃ ಸಹ ।
ದೂರ್ವಾಭಿಸ್ತಿಲ ಗೋಧೂಮೈಃ ಪಾಯಸೇನ ಘೃತೇನ ಚ ।

ಪೂರ್ಣಪಾತ್ರೆಯ ಪ್ರಯೋಗವನ್ನು ಮಾಡಿ, ಆಚಾರ್ಯನು ಬ್ರಾಹ್ಮಣರ ಜೊತೆ । ದೂರ್ವೆ, ಎಳ್ಳು, ಗೋಧಿ, ಪಾಯಸ, ತುಪ್ಪ, ಇವುಗಳಿಂದ ಹೋಮಿಸಬೇಕು ॥

ಪಾಯಸಂ ಶ್ರಪಯೇತ್ತತ್ರ ಸಾವಿತ್ರಂ ಚ ಹವಿಶ್ಚತತ್ ।
ಕೃತ್ವಾऽಜ್ಯಭಾಗ ಪರ್ಯಂತಂ ಹವಿರುದ್ವಾಸನಾದಿಕಂ ।

ಪಾಯಸವನ್ನಾದರೋ, ಆ ಅಗ್ನಿಯಲ್ಲೇ ಮಾಡಿ, ಇದನ್ನು ಸವಿತೃದೇವತೆಗೆ ಹವಿಸ್ಸನ್ನಾಗಿ ಮಾಡಿ । ಆಜ್ಯಭಾಗದವರೆಗೆ ಮಾಡಿ, ಹವಿರುದ್ವಾಸನಗಳನ್ನು ಮಾಡಬೇಕು ॥

ತಿಸೃಭಿಶ್ಚೈವ ದೂರ್ವಾಭಿಃ ಏಕೈಕಾಮಾಹುತಿಂ ಚರೇತ್ ।
ಅಭಿಮಂತ್ರ್ಯ ಪ್ರಯುಕ್ತಾಭಿರ್ಗಾಯತ್ರ್ಯಾ ಜುಹುಯಾತ್ ಕ್ರಮಾತ್ ।

3–3 ದೂರ್ವೆಗಳಿಂದ ಪ್ರತಿ ಆಹುತಿಯನ್ನು ಮಾಡಬೇಕು । ಗಾಯತ್ರಿಯಿಂದ ದ್ರವ್ಯಗಳನ್ನು ಪ್ರೋಕ್ಷಿಸಿ ಹೋಮಕ್ಕೆ ಬಳಸಬೇಕು ।

ಅಷ್ಟೋತ್ತರಸಹಸ್ರಂ ತು ಶತಮಷ್ಟೋತ್ತರಂ ತು ವಾ ।
ತಿಲಮಿಶ್ರೈಶ್ಚ ಗೋಧೂಮೈಃ ದ್ರವ್ಯೇಣ ಆಜ್ಯಾಹುತೀರ್ಹುನೇತ್ ।

1008 ಅಥವ 108 । ಸಂಖ್ಯೆಗಳಿಂದ ತಿಲ, ಗೋಧಿಗಳನ್ನು ಸೇರಿಸಿ ಹಾಗೂ ತುಪ್ಪದಿಂದಲೂ ಹೋಮಿಸಬೇಕು ॥

ಜುಹುಯಾತ್ ಪಾಯಸೇನೈವಂ ಆಜ್ಯೇನ ಚ ಹುನೇತ್ ಕ್ರಮಾತ್ ।
ಹವಿಶ್ಚತುಷ್ಟಯೇ ನೈವ ಪ್ರತ್ಯೇಕಂ ಸಮಸಂಖ್ಯಯಾ ।

ಮತ್ತು ಪಾಯಸ, ತುಪ್ಪಗಳಿಂದಲೂ ಹೋಮಿಸಬೇಕು । 4 ಹವಿಸ್ಸನ್ನು ಪ್ರತ್ಯೇಕವಾಗಿ ಸಮಸಂಖ್ಯೆಯಿಂದ ಹೋಮಿಸಬೇಕು ॥

ಗಾಯತ್ರ್ಯೈವತು ಹೋತವ್ಯಂ ಹವಿರತ್ರ ಚತುಷ್ಟಯಂ ।
ತತಸ್ಸ್ವಿಷ್ಟಕೃತಂ ಹುತ್ವಾ ರಜ್ಜುಪ್ರಹರಣಂ ತಥಾ ।

ಇಲ್ಲಿ 4 ಹವಿಸ್ಸನ್ನೂ ಗಾಯತ್ರೀಮಂತ್ರದಿಂದ ಹೋಮಿಸಬೇಕು । ನಂತರ ಸ್ವಿಷ್ಟಕೃತ್ ನ್ನು ಮಾಡಿ, ಇಧ್ಮಸನ್ನಹನವನ್ನೂ ಹೋಮಿಸಬೇಕು ॥

ಆಯಾಶ್ಚೇತ್ಯಾದಿಭಿರ್ಹುತ್ವಾ ಸಮುದ್ರಾದೂರ್ಮಿ ಸೂಕ್ತತಃ ।
ಸಂತತಾಂ ಆಜ್ಯಧಾರಾಂ ತಾಂ ಪೂರ್ಣಾಹುತಿಮಥಾಚರೇತ್ ।

ಅಯಾಶ್ಚ ಮುಂತಾದ ಹೋಮಗಳನ್ನು ಮಾಡಿ, ನಂತರ ಸಮುದ್ರಾದೂರ್ಮಿಃ ಸೂಕ್ತದಿಂದ ಹೋಮಿಸಿ । ಸಂತತವಾಗಿ ಆಜ್ಯಧಾರೆಯನ್ನು ಮಾಡುತ್ತಾ ಹೋಮಿಸಬೇಕು ॥

ಪರಿಷೇಚನ ಪರ್ಯಂತಂ ಹೋಮಶೇಷಂ ಸಮಾಪಯೇತ್ ।
ಸಮೌಷಧಿ ಸ್ಥಿತೈಸ್ತತ್ರ ಪ್ರತಿಕುಂಭಸ್ಥಿತೋದಕೈಃ ।

ಉತ್ತರ ಪರಿಷೇಚನದವರೆಗೆ ಪ್ರಯೋಗವನ್ನು ಮುಗಿಸಬೇಕು । ಎಲ್ಲಾ ಓಷಧಿಗಳಿಂದ ಕೂಡಿದ ಪ್ರತೀಕಲಶದಲ್ಲೂ ಇರುವ ನೀರಿನಿಂದ ॥

ಋತುಮತ್ಯಾಸ್ತ್ರಿಯಾ ಶಾಂತ್ಯೈ ದಂಪತಿಭ್ಯಾಂ ಸುಖಾಯ ಚ ।
ಅಥಾಭಿಷೇಕ ಮಂತ್ರಾಶ್ಚ ಪ್ರೋಚ್ಯಂತೇ ಶೌನಕಾದಿಭಿಃ ।

ಋತುಮತಿಯಾಗಿರುವ ಸ್ತ್ರೀ ಹಾಗೂ ಅವರ ತಂದೆ, ತಾಯಿಗೆ (ಬಾಲ್ಯ ವಿವಾಹವಾಗಿದ್ದರೆ ಗಂಡನೂ) ಸುಖ ಸಂತೋಷಕ್ಕಾಗಿ ಹಾಗೂ ರಜೋದರ್ಶನಕಾಲದಲ್ಲಿ ಬಂದಂತಹ ದೋಷಗಳ ನಿವಾರಣೆಗಾಗಿ ಅಭಿಷೇಕವನ್ನು ಮಾಡಬೇಕು ॥

ಸಾ ಚ ವಸ್ತ್ರಾಂತರಂ ಧೃತ್ವಾ ಪುನಶ್ಚೋಪವಸೇತ್ ಸತೀ ।
(ಉಪವಾಸೋತ್ರ ಸಮೀಪಾವಸ್ಥಾನಂ)
ವಿಪ್ರಾನಭ್ಯರ್ಚ್ಯ ವಿಧಿವತ್ ಗಂಧಪುಷ್ಪಾಕ್ಷತಾದಿಭಿಃ ।

ಅಭಿಷೇಕವಾದ ನಂತರ ಬೇರೇವಸ್ತ್ರವನ್ನು ಧರಿಸಿ । ನಂತರ ಬ್ರಾಹ್ಮಣರ ಸಮೀಪ ಬಂದು ಅವರುಗಳಿಗೆ ಯಥಾವಿಧಿಯಾಗಿ ಗಂಧಾದಿಗಳಿಂದ ಸತ್ಕರಿಸಿ ॥

ಧೇನುಂ ಪಯಸ್ವಿನೀಂ ದದ್ಯಾತ್ ಆಚಾರ್ಯಾಯ ಚ ಭೂಷಣೈಃ ।
ಸದಕ್ಷಿಣಂ ಅನಡ್ವಾಹಂ ಪ್ರದದ್ಯಾತ್ ರುದ್ರಜಾಪಿನೇ ।

ಹಾಲನ್ನು ಕೊಡುವ, ಕರುಸಹಿತವಾದ ಹಸುವನ್ನು ಅಲಂಕರಿಸಿ ಆಚಾರ್ಯನಿಗೆ ಕೊಡಬೇಕು । ರುದ್ರ ಜಪವನ್ನು ಮಾಡಿದವನಿಗೆ ದಕ್ಷಿಣಾಸಹಿತವಾಗಿ ಹೋರಿಯನ್ನು ಕೊಡಬೇಕು ॥

ಋತ್ವಿಭ್ಯಶ್ಚಾಥ ಸರ್ವೇಭ್ಯೋ ದದ್ಯಾತ್ ವೈ ದಕ್ಷಿಣಾಂ ತತಃ ।
ಮಹಾಶಾಂತಿಂ ಪ್ರಜಾಪ್ಯಾಥ ವಿಪ್ರಾಶೀರ್ವಚನಂ ತತಃ ।

ನಂತರ ಎಲ್ಲಾ ಋತ್ವಿಜರಿಗೂ ದಕ್ಷಿಣೆಯನ್ನು ಕೊಡಬೇಕು । ನಂತರ ಮಹಾಶಾಂತಿ ಮಂತ್ರವನ್ನು ಜಪಿಸಿ ಬ್ರಾಹ್ಮಣರ ಆಶೀರ್ವಾದವನ್ನು ಪಡೆಯಬೇಕು ॥

ಬ್ರಾಹ್ಮಣಾನ್ ಭೋಜಯೇತ್ ಪಶ್ಚಾತ್ ಭುಂಜೀಯಾತ್ ಸ್ವಜನೈಸ್ಸಹ ।
ಏವಂ ಯಃ ಕುರುತೇಶಾಂತಿಂ ಶೌನಕೋಕ್ತ ಪ್ರಕಾರತಃ ।
ತದನಿಷ್ಟಂ ತು ಸಕಲಂ ಸದ್ಯ ಏವ ವಿನಶ್ಯತಿ ॥

ನಂತರ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ನಂತರ ತನ್ನ ಬಂಧುಗಳ ಜೊತೆ ತಾನೂ ಭೋಜಿಸಬೇಕು । ಈ ರೀತಿಯಾಗಿ ಶಾಂತಿಯನ್ನು ಶೌನಕರ ಪ್ರಕಾರದಂತೆ ಮಾಡಿ । ಎಲ್ಲಾ ದೋಷಗಳನ್ನೂ ಪರಿಹರಿಸಿಕೊಳ್ಳುತ್ತಾನೆ, ದೋಷಗಳೆಲ್ಲವೂ ನಾಶವಾಗುತ್ತವೆ ॥

21. ಶ್ವಗ್ರಹ ಗೃಹೀತ ಶಾಂತಿಪ್ರಯೋಗಃ

ಸೂ – ಶ್ವಗ್ರಹ ಗೃಹೀತಂ ಕುಮಾರಂ ತಪೋಯುಕ್ತ ಇತ್ಯಾದಿ ಪ್ರಾತರ್ಮಂಧ್ಯಂದಿನೇ ಸಾಯಮಗದೋ ಭವತೀತ್ಯಂತಮ್ । ಪಿತ್ರಾದಿಃ ಕರ್ತಾ ಯಾವನ್ಮನಸ್ತೋಷಂ ಬ್ರಹ್ಮಚರ್ಯಾದಿ ಅನಶನಾದಿ ಯುಕ್ತಶ್ಚ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ನಕ್ಷತ್ರೇ ರಾಶೌ ಜಾತಸ್ಯಾಸ್ಯ ಕುಮಾರಸ್ಯ ಶ್ವಗ್ರಹ ಗೃಹೀತಶಾಂತಿಂ ಕರಿಷ್ಯಾಮಿ । ಪಿಶಾಚಿ ಶುನಾ ವಾ ದಷ್ಟಸ್ಯ ಶಾಂತಿಂ ಕರಿಷ್ಯಾಮೀತಿ ವಾ ಸಂಕಲ್ಪ್ಯ ।

ಶ್ವಗ್ರಹದಿಂದ ಪೀಡಿತನಾದಂತಹ ಕುಮಾರನನ್ನು ತಪಸ್ಸು ಅನುಷ್ಠಾನವಿರುವ ತಂದೆ ಅಥವ ಇತರರು ಬೆಳಿಗ್ಗೆ ಮಧ್ಯಾಹ್ನ ಸಂಜೆ ಮುಂದೆ ಹೇಳಿದ ರೀತಿಯಲ್ಲಿ ಮಾಡಿದರೆ । ಆ ಕುಮಾರನು ಶ್ವಗ್ರಹದಿಂದ ಮುಕ್ತನಾಗುತ್ತಾನೆ ಇದು ಸೂತ್ರವಾಕ್ಯವು । ತಪೋಯುಕ್ತ ಅಲ್ಲಿಂದ ಆರಂಭಿಸಿ, ಅಗದೋ ಭವತಿ ಎಂಬವರೆಗೆ ಮಾಡಬೇಕು ಎಂದರ್ಥ । ತಂದೆ ಮುಂತಾದ ಕರ್ತೃಗಳು ಮನಸ್ಸಿಗೆ ಸಂತೋಷವಾಗುವವರೆಗೆ ಬ್ರಹ್ಮಚರ್ಯ ಮುಂತಾದ ಅನುಷ್ಠಾನಗಳನ್ನೂ ಹಾಗೂ ಕರ್ಮಗಳನ್ನೂ ಉಪವಾಸ ಮುಂತಾದ ವ್ರತಗಳನ್ನೂ ಮಾಡಿದವರಾಗಿ ನಂತರ ಪ್ರಾಣಾಯಾಮ ಮಾಡಿ ಮುಂದೆ ಹೇಳಿದಂತೆ ಸಂಕಲ್ಪ ಮಾಡಬೇಕು ॥

ಶ್ವವಚ್ಚೇಷ್ಟಾ ಕಾರಿಣಂ ಶ್ವವನ್ನದಂತಂ ವಾ ಕುಮಾರಂ ಜಾಲೇನ (ಮತ್ಸ್ಯ ಗ್ರಹಣ ಸಾಧನೇನ) ಪ್ರಚ್ಛಾದ್ಯ, ಕಂಸಂ ಕಿಂಕಿಣಿಂ ಘಂಟಾ ವಿಶೇಷಂ ವಾ ಪ್ರಾದಯನ್, ಅನ್ಯತರಸ್ಯ ಧ್ವನಿಂ ಅನ್ಯೇನ ಪುರುಷಾಂತರೇಣ ಕಾರಯನ್, ಸ್ವಯಂ ಕುಮಾರಂ ಗೃಹೀತ್ವಾ ಸಭಾಯಾಮಧ್ಯೇsಧಿದೇವನಂ ಯತ್ರಕಿತವಾಃ ದೀವ್ಯಂತಿ ತತ್ಸ್ಥಾನಂ ಅದ್ವಾರೇಣ ಛದೀರಪೋಹ್ಯ (ಕುಡ್ಯಾದ್ಯಪೋಹ್ಯ) ಮಾರ್ಗಂ ಕೃತ್ವಾ ತೇನ ಪ್ರಸಾದ್ಯ ಉದ್ಧತ್ಯಾsದ್ಭಿರವೋಕ್ಷ್ಯ, ತತ್ರ ಅಕ್ಷಾನ್, ಶರಾನ್, (ವಿಭೀತಕಾನ್ವಾ) ನಿವಪತಿ ।

ಯಾವ ಕುಮಾರನು ನಾಯಿಯಂತೆ ಚೇಷ್ಟೆಗಳನ್ನು ಮಾಡುತ್ತಾನೋ ಅಥವಾ ನಾಯಿಯಂತೆ ಅನ್ನವನ್ನು ಪ್ರತಿದಿನ ತಿನ್ನುತ್ತಾನೋ ಅಂತಹ ಕುಮಾರನನ್ನು ಮೀನುಹಿಡಿಯುವ ಬಲೆಯಿಂದ ಮುಚ್ಚಿ ಘಂಟೆ – ಜಾಗಟೆ – ಮುಂತಾದ ವಾದ್ಯಗಳನ್ನು ನುಡಿಸುತ್ತಾ, ಹಾಗೂ ಬೇರೇ ಧ್ವನಿಗಳನ್ನೂ ಬೇರೇಪುರುಷರಿಂದ ಮಾಡಿಸುತ್ತಾ ತಂದೆಯಾದ

ತಾನು ಕುಮಾರನನ್ನು ಹಿಡಿದುಕೊಂಡು ರಾಜನ ಆಸ್ಥಾನದ ಸಭೆಯ ಮಧ್ಯದಲ್ಲಿ, ಎಲ್ಲಿ ಆಟಗಳನ್ನು ಆಡುವ ಜಾಗವೋ ಆ ಜಾಗಕ್ಕೆ ಅಧಿದೇವನ ಎಂದು ಹೆಸರು. ಆ ಅಧಿದೇವನ ಸ್ಥಾನದಲ್ಲಿ ಅದ್ವಾರಮಾರ್ಗದಿಂದ ಅಂದರೆ ಮುಖ್ಯದ್ವಾರದಿಂದ ಬರದೇ ಹೆಂಚು / ಕಿಟಕಿಗಳ ಮೂಲಕ ಬಂದು, ಆ ಅಧಿದೇವನಸ್ಥಾನವನ್ನು ಅಗೆದು, ನೀರನ್ನು ಪ್ರೋಕ್ಷಿಸಿ, ಆ ಜಾಗದಲ್ಲಿ ಪಗಡೆ, ಕವಡೆ, ಕಪ್ಪೆಚಿಪ್ಪು ಮುಂತಾದ ಆಟದ ವಸ್ತುಗಳನ್ನು ಹೂಳಬೇಕು ।

ತಾನ್ ಪೃಥುಪ್ರಥಯಿತ್ವಾ ತೇಷ್ವೇನಂ ಕುಮಾರಂ ಉತ್ತಾನಂ ಶಾಯಯತಿ । ತತೋ ಲವಣಮಿಶ್ರೇಣ ದಧ್ನಾ ಕೂರ್ಕುರಸ್ಸು ಕೂರ್ಕುರಃ ಇತ್ಯಾದಿಭಿಃ ಯಜುರ್ದಶಮೈಃ, ಯದ್ವಾ ಏಕಾದಶಭಿಃ ಅಂಜಲಿನಾ ಸರ್ವೇಷಾಂ ಮಂತ್ರಾಣಾಮಂತೇ, ಸಕೃತ್ ಪ್ರತಿಮಂತ್ರಂ ವಾ ಅವೋಕ್ಷೇತ್ । ಯಾವತ್ಕರ್ಮ ಸಮಾಪ್ಯತೇ ತಾವತ್ ಕಂಸಕಿಂಕಿಣ್ಯೋರನ್ಯತರಸ್ಯ ವಾ ಹ್ರಾದನಂ । ಏವಮೇತತ್ ಕರ್ಮಜಾಲ ಪ್ರಚ್ಛಾದನಾದಿ ಅವೋಕ್ಷಣಾಂತಂ ಪ್ರಾತರಾದಿ ತ್ರಿಸಂಧ್ಯಂ ಕರ್ತವ್ಯಂ । ಸೂಃ ಅಗದೋ ಭವತಿ ಏವಮೇತಸ್ಮಿನ್ ಕರ್ಮಣಿ ತ್ರಿಷುಕಾಲೇಷು ಕೃತೇ ಕುಮಾರಃ ಅಗದೋ ಭವತಿ ।

ಆ ಆಟದ ಸಾಮಗ್ರಿಗಳನ್ನು ಆ ಅಧಿದೇವನದ ಎಲ್ಲ ಕಡೆಯೂ ಹರಡುವಂತೆ ಹೂತು, ಅದರ ಮೇಲೆ ಈ ಕುಮಾರನನ್ನು ಮೇಲ್ಮುಖವಾಗಿ ಮಲಗಿಸಬೇಕು । ನಂತರ ಉಪ್ಪು ಮಿಶ್ರಿತ ಮೊಸರಿನಿಂದ ಕೂರ್ಕುರಸ್ಸು..... ಎಂಬ 10 ಅಥವ 11 ಮಂತ್ರಗಳಿಂದ ಎಲ್ಲ ಮಂತ್ರದ ಕೊನೆಗೆ ಅಥವಾ ಪ್ರತಿಮಂತ್ರಕ್ಕೂ ಪ್ರೋಕ್ಷಣೆಯನ್ನು ಕುಮಾರನಿಗೆ ಮಾಡಬೇಕು । ಎಲ್ಲಿಯವರೆಗೆ ಈ ಕರ್ಮವು ಸಮಾಪ್ತಿಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ಎಲ್ಲಾ ವಾದ್ಯಗಳನ್ನು ನುಡಿಸುತ್ತಿರಬೇಕು । ಈ ರೀತಿಯಾಗಿ ಮೀನಿನಬಲೆಯನ್ನು ಮುಚ್ಚುವುದು ಮುಂತಾದ ಕರ್ಮಗಳನ್ನು ಉಪ್ಪುಮಿಶ್ರಿತ ಮೊಸರಿನ ಪ್ರೋಕ್ಷಣದವರೆಗೆ ಬೆಳಿಗ್ಗೆ ಮಧ್ಯಹ್ನ ಸಂಜೆ ಹೊತ್ತುಗಳು ಮಾಡಬೇಕು । ಈ ರೀತಿ ಮಾಡಿದಾಗ ಕುಮಾರನು ಈ ದೋಷದಿಂದ ಬಿಡುಗಡೆಯಾಗುತ್ತಾನೆ ॥

ಯದಿ ನ ಭವತಿ ಪುನರಪಿ ತಪೋಯುಕ್ತೇನ ಫಲಸಿದ್ಧ್ಯವಗಮ ಪರ್ಯಂತಂ ಕರ್ತವ್ಯಂ ॥

ಒಂದುವೇಳೆ ಈ 3 ಕಾಲಗಳಲ್ಲಿ ಮಾಡಿದರೂ ಕುಮಾರನು ದೋಷಮುಕ್ತನಾಗದಿದ್ದರೆ, ದೋಷವು ಪರಿಹಾರವಾಗುವವರೆಗೂ ಬ್ರಹ್ಮಚರ್ಯಾದಿ ಅನುಷ್ಠಾನಗಳಿಂದ ಈ ವಿಧಿಯನ್ನು ಮಾಡುತ್ತಲೇ ಇರಬೇಕು ॥

ಶ್ವಗ್ರಹಗೃಹೀತ ಶಬ್ದಾರ್ಥಃ –

ಬಹವೋಬಾಲಗ್ರಹಾಃ ದಿವಸ ಮಾಸ ಸಮಾದಿಕಾಃ । ತತ್ರ ಏನಗೃಹೀತಃ ಶ್ವವಚ್ಚೇಷ್ಟತೇ, ಸ ಶ್ವಗ್ರಹಃ । ತೇನ ಗೃಹೀತಃ ಶ್ವಗ್ರಹಗೃಹೀತಃ । ಅಥವಾ ಯೇನ ಗೃಹೀತಃ ಕುಮಾರಃ ಶ್ವೇವನದತಿ । ಪಿಶಾಚಿಶುನಾವಾದಷ್ಟಃ । ಶ್ವಗ್ರಹ ಗೃಹೀತ ಇತಿ ಪುಲ್ಲಿಂಗ ನಿರ್ದೇಶಾತ್, ಕುಮಾರ್ಯಾ ನ ಭವತೀತ್ಯೇಕೇ ತಪೋಯುಕ್ತಃ ಕರ್ತಾ ಪಿತೇತ್ಯೇಕೇ ।
ಯಃ ಕಶ್ಚಿದಿತ್ಯನ್ಯೇ ತಪೋಬ್ರಹ್ಮಚರ್ಯಾದಿ । ಯಾವತಾ ತಪಸ್ಸಿದ್ಧಿಂ ಮನ್ಯತೇ ತಾವತ್ ಕೃತ್ವೇತ್ಯರ್ಥಃ । ಸಭಾಯಾಮಧ್ಯೇ ಕಿತವಾ ಯತ್ರ ದೀವ್ಯಂತಿ, ತಸ್ಯಾಮಧ್ಯೇ ಇತ್ಯರ್ಥಃ । ಅದ್ವಾರೇಣ ಕುಡ್ಯಾದ್ಯಪೋಹ್ಯ ಮಾರ್ಗಂ ಕೃತ್ವಾತೇನೇತ್ಯರ್ಥಃ ।
ಅಕ್ಷಾನ್, ವಿಭೀತಕಫಲಾನಿ ಕೇಚಿತ್ – ಶರಾ ಇತಿ । ಅಧಿದೇವನಂ ಯತ್ರ ಕಿತವಾ ದೀವ್ಯಂತಿ ತತ್ಕ್ಷಾನಮಿತಿ ॥

ಬಾಲಗ್ರಹಗಳು ಕೆಲವು ದಿವಸಗಳವರೆಗೆ ಇದ್ದರೆ,, ಇನ್ನುಕೆಲವು ಮಾಸದವರೆಗೆ ಇರುತ್ತದೆ । ಇದರಿಂದ ಪೀಡಿತರಾದವರು ನಾಯಿಯಂತೆ ಚೇಷ್ಟೆಗಳನ್ನು ಮಾಡುತ್ತಾರೆ ಇದೇ ಶ್ವಗ್ರಹವು । ಇದರಿಂದ ಪೀಡಿತನಾದವನೇ ಶ್ವಗ್ರಹಪೀಡಿತನು । ಅಥವಾ ಯಾವಗ್ರಹದಿಂದ ಕುಮಾರನು ಪೀಡಿತನಾದರೆ ನಾಯಿಯಂತೆ ಚೇಷ್ಟೆಮಾಡುತ್ತಾನೋ ಅವನು ಭೂತ ಪಿಶಾಚಿಗಳಿಂದ ಅಥವ ನಾಯಿಯಿಂದ ಹಿಡಿಯಲ್ಪಟ್ಟಿರುವವನು । ಇದು ಪುಲ್ಲಿಂಗದಲ್ಲಿರುವುದರಿಂದ ಸ್ತ್ರೀಯರಿಗೆ ಇದು ಹಿಡಿಯುವುದಿಲ್ಲವೆಂದು ಕೆಲವರು ಹೇಳುತ್ತಾರೆ । ತಂದೆಯು ಅನುಷ್ಠಾನಪರನಾಗಿರಬೇಕು ಈ ದೋಷದ ನಿವಾರಣೆಗೆ ಎಂದು ಕೆಲವರು ಹೇಳುತ್ತಾರೆ । ಇನ್ನು ಕೆಲವರು ಬೇರೇ ಯಾರಾದರಾಗಲೀ ಒಳ್ಳೆಯ ಅನುಷ್ಠಾನಪರರಾಗಿದ್ದರೂ ಸಾಕು ಎನ್ನುತ್ತಾರೆ । ಎಲ್ಲಿಯವರೆಗೆ ಈ ದೋಷದ ಪರಿಹಾರವಾಗುತ್ತೋ ಅಲ್ಲಿಯವರೆಗೂ ಅನುಷ್ಠಾನಪರರಾಗಿರಬೇಕು । ಸಭೆಯ ಮಧ್ಯದಲ್ಲಿ ಎಂದರೆ, ಎಲ್ಲಿ ಆಟವಾಡುತ್ತಾರೋ, ಆ ಜಾಗದಲ್ಲಿ ಎಂದರ್ಥ । ಅದ್ವಾರೇಣ ಎಂದರೆ, ಕಿಟಕಿ, ಹೆಂಚುಗಳ ಮೂಲಕ ಎಂದರ್ಥ । ವಿಭೀತಕಫಲ ಎಂದರೆ, ಪಗಡೆ ಮತ್ತು ಅಳಲೆಕಾಯಿ ಎನ್ನುತ್ತಾರೆ । ಆಟವಾಡುವ ಜಾಗಕ್ಕೆ ಅಧಿದೇವನಂ ಎನ್ನುತ್ತಾರೆ ॥

22. ಶಂಖಗ್ರಹ ಗೃಹೀತ ಶಾಂತಿಃ

ಶಂಖಿನಂ ಕುಮಾರಂ ತಪೋಯುಕ್ತ ಉತ್ತರಾಭ್ಯಾಮಿತ್ಯಾದಿ ಪ್ರಾತರ್ಮಂಧ್ಯಂದಿನೇ ಸಾಯಮಗದೋ ಭವತೀತ್ಯಂತಂ । ಪೂರ್ವವತ್ ಬ್ರಹ್ಮಚರ್ಯಯುಕ್ತಃ ಪಿತ್ರಾದಿಃ, ಪ್ರಾಣಾನಾಯಮ್ಯ, ದೇಶಕಾಲೌ ಸಂಕೀರ್ತ್ಯ, ಶಂಖಗ್ರಹಗೃಹೀತ ಶಾಂತಿಂ ಕರಿಷ್ಯಾಮಿ ಇತಿ ಸಂಕಲ್ಪ್ಯ ।

ಶಂಖಗ್ರಹ ಪೀಡಿತನಾದ ಕುಮಾರನನ್ನು ಬ್ರಹ್ಮಚರ್ಯಾದಿ ಅನುಷ್ಠಾನಪರನೂ ಹಾಗೂ ಉಪವಾಸಾದಿ ವ್ರತವನ್ನು ಮಾಡುವ ತಂದೆ ಅಥವ ಬೇರೇ ಯಾರಾದರಾಗಲೀ ಉತ್ತರಾಭ್ಯಾಂ(ಏತೇತೇ ಪ್ರತಿದೃಶ್ಯೇತೇ ಮತ್ತು ಹತಶ್ಶಂಖಃ ಎಂಬ 2 ಮಂತ್ರಗಳಿಂದ) ಎಂದು ಹೇಳಿರುವಂತೆ, ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮೂರೂ ಕಾಲಗಳಲ್ಲಿ ಶ್ವಗೃಹೀತನಿಗೆ ಮಾಡಿದ ಎಲ್ಲಾ ವಿಧಿಗಳನ್ನು, ತಿಳಿಸಿರುವ ಸಂಕಲ್ಪದೊಂದಿಗೆ ಮಾಡಬೇಕು, ಇದರಿಂದ ಶಂಖಗ್ರಹದೋಷವು ನಿವಾರಣೆಯಾಗುತ್ತದೆ

ಶಂಖಿನಂ – ಶಂಖಗ್ರಹ ಗೃಹೀತಂ ಕುಮಾರಂ, "ಏತೇತೇ ಪ್ರತಿದೃಶ್ಯೇತೇ""ಹತಶ್ಶಂಖೋ ಹತಶ್ಶಂಖ ಪಿತಾ" ಇತ್ಯೇತಾಭ್ಯಾಂ ಅಭಿಮಂತ್ರ್ಯ । ತತಃ ಉದಕುಂಭೇನ ಋಷಿರ್ಭೋಧಃ ಪ್ರಬೋಧಃ ಇತ್ಯೇತಯಾ ಶಿರಸ್ಯಭಿಷಿಂಚೇತ್ । ಏವಮೇತದಭಿಮಂತ್ರಣಾದಿ ಪೂರ್ವವತ್ ತ್ರಿಸಂಧ್ಯಂ ಕರ್ತವ್ಯಂ । ಅಗದೋ ಭವತಿ ಪೂರ್ವವದಸ್ಯ ಪ್ರಯೋಜನಮ್ ।

ಶಂಖಗ್ರಹ ಪೀಡಿತ ಕುಮಾರನನ್ನು ಏತೇತೇ ಮತ್ತು ಹತಶ್ಶಂಖೋ ಎಂಬ 2 ಮಂತ್ರಗಳಿಂದ ಅಭಿಮಂತ್ರಣ ಮಾಡಿ । ನಂತರ ಕಲಶದ ನೀರಿನಿಂದ ಋಷಿರ್ಭೋಧಃ ಪ್ರಬೋಧಃ ಎಂಬ ಮಂತ್ರದಿಂದ ತಲೆಯ ಮೇಲೆ ಅಭಿಷೇಕ ಮಾಡಬೇಕು । ಹೀಗೆ ಅಭಿಮಂತ್ರಣ ಮುಂತಾದವುಗಳನ್ನು ಹಿಂದಿನಂತೆ ಮೂರೂ ಕಾಲಗಳಲ್ಲೂ ಮಾಡಬೇಕು । ಆಗ ಈ ದೋಷದಿಂದ ಮುಕ್ತನಾಗುತ್ತಾನೆ ।

ಶಬ್ದಾರ್ಥಃ –

ಶಂಖೋನಾಮ ಗ್ರಹಃ ಕುಮಾರಾಣಾಂ ಭಯಕರಃ ಏನ ಗೃಹೀತಃ ಶಂಖಿವನ್ನದತಿ । ತದ್ಗೃಹೀತಃ ಶಂಖೀ, ತಂ ಶಂಖಿನಮಿತ್ಯರ್ಥಃ । ಅಗದೋ ಭವತೀತಿ ಫಲವಚನಂ, ಸರ್ವತ್ರ ಶ್ರುತಿತಃ ಅರ್ಥತೋ ವಾsವಗತಸ್ಯ ಕಾಮಿನಃ ಕರ್ಮೋಪದೇಶಿಕ ಸಾಮರ್ಥ್ಯಾತ್

ಫಲಸಿದ್ಧ್ಯವಗಮ ಪರ್ಯಂತಮಿತಿ ಪ್ರದರ್ಶಯಿತುಂ। ತೇನ ಯಕ್ಷ್ಮ ಗೃಹೀತಮಿತ್ಯಾದೌ ಫಲವಚನಾಭಾವೇಽಪಿ ಉಪದೇಶಃ ಕಾಮ್ಯಸಿದ್ಧಿಪರ್ಯಂತ ಏವ। ಏವಮೇತದುಭಯಂ ಏಕಸ್ಮಿನ್ನಹನಿ ಪ್ರಾತರಾದಿ ತ್ರಿಸಂಧ್ಯಂ ಕರ್ತವ್ಯಮಿತಿ ॥

ಶಂಖಗ್ರಹ ಪೀಡಿತನಾದ ಕುಮಾರನು ಅತೀವ ಭಯಂಕರವಾಗಿ ಶಂಖದ ನಾದದಂತೆ ಯಾವಾಗಲೂ ಕೂಗುತ್ತಾನೆ । ಆ ಗ್ರಹದಿಂದ ಪೀಡಿತನಾದವನಿಗೆ ಶಂಖೀ ಎನ್ನುತ್ತಾರೆ । ಅವನಿಗೆ ಹಿಂದೆ ಹೇಳಿದ ವಿಧಿಗಳನ್ನು ಮಾಡಿದರೆ ದೋಷದಿಂದ ಮುಕ್ತನಾಗುತ್ತಾನೆ ಎಂಬುದು ಫಲವಚನವು । ಎಲ್ಲಾ ಕಡೆಯಲ್ಲಿಯೂ ಶ್ರುತಿ ಮತ್ತು ಅರ್ಥಗಳಿಂದ ತಿಳಿದಂತಹ ಕಾಮನೆಯನ್ನು ಇಷ್ಟಪಡುವವನು ಕರ್ಮದ ಉಪದೇಶಾರ್ಥವನ್ನು ತಿಳಿಯುವ ಸಾಮರ್ಥ್ಯದಿಂದ ಫಲಸಿದ್ಧಿಯನ್ನು ತಿಳಿಯುವವರೆಗೆ ಸಂಪೂರ್ಣವಾದ ಕರ್ಮಸ್ವರೂಪವನ್ನು ತಿಳಿಯಬೇಕು ಎಂಬುದನ್ನು ತೋರಿಸಲು ಕರ್ಮ ಮತ್ತು ಅದರ ಫಲದ ವಿವರಣೆಯನ್ನು ಶ್ರುತಿಯಲ್ಲಿ ತಿಳಿಸಿದೆ । ಇದರಿಂದ ಯಕ್ಷ್ಮ (ಯಕ್ಷ್ಮಿಣಿ) ಮುಂತಾದವುಗಳಿಂದ ಪೀಡಿತನಾದ ಕುಮಾರನಿಗೆ ಶ್ರುತಿಯಲ್ಲಿ ಫಲವನ್ನು ಹೇಳದಿದ್ದರೂ ಕರ್ಮದ ಉಪದೇಶವು ಆ ಇಷ್ಟಾರ್ಥಸಿದ್ಧಿಯವರೆಗೆ ಎಂದು ತಿಳಿಯಬೇಕು । ಹೀಗೆಯೇ ಎರಡನ್ನೂ ಒಂದೇ ಹಗಲಿನಲ್ಲಿ, 3 ಹೊತ್ತುಗಳೂ ಮಾಡಬೇಕು ॥

*****

23. ವಾಯಸ ಗೃಹಪ್ರವೇಶ ಶಾಂತಿಃ

ಮಾನವಸಂಹಿತಾಯಾಂ

ಅಥಾತಸ್ಸಂಪ್ರವಕ್ಷ್ಯಾಮಿ ವಾಯಸಃ ಪ್ರವಿಶೇತ್ ಗೃಹಂ ।
ಪ್ರವಿಶ್ಯ ದ್ವಾರತೋ ಗಚ್ಛೇನ್ಮಾಸಮೇಕಂ ವಿವರ್ಜಯೇತ್ ।

ಕಾಗೆಯು ಮನೆಯೊಳಗೆ ಬಂದರೆ ಅದರ ದೋಷ ಮತ್ತು ಪರಿಹಾರವನ್ನು ಹೇಳುತ್ತೇವೆ । ಮುಂದಿನ ರೂಮಿನ ಒಳಗಿನ ತನಕ ಕಾಗೆಯು ಬಂದರೆ 1 ತಿಂಗಳು ಆ ಮನೆಯನ್ನು ಬಿಡಬೇಕು ॥

ದ್ವಾರಾಂತರೇ ಯದಾಗಚ್ಛೇತ್ ಷಣ್ಮಾಸಾಂಸ್ತು ವಿವರ್ಜಯೇತ್ ।.
ದೇವಾಲಯ ನೃಪಾಣಾಂ ತು ಗ್ರಾಮನಾಶೋ ಭವಿಷ್ಯತಿ ।

ವಾಸ್ತುದ್ವಾರದ ಒಳಗೆ ಬಂದರೆ 6 ತಿಂಗಳು ಮನೆಯನ್ನು ಬಿಡಬೇಕು । ಇದು ದೇವಾಲಯ, ರಾಜ, ಗ್ರಾಮನಾಶಗಳ ಸೂಚನೆ ।

ಗೃಹಪ್ರವೇಶನೇಕಾಕೋ ಗೃಹಾಶೇಷಕ್ಷಯಂಕರಃ ।
ಶ್ವಾನ ಮಾರ್ಜರತೋ ಗಚ್ಛೇತ್ ವಾಯಸಃ ಪ್ರವಿಶೇತ್ ಗೃಹಂ ।

ಗೃಹಪ್ರವೇಶದ ದಿನ ಮನೆಯೊಳಗೆ ಕಾಗೆ ಬಂದರೆ, ಮನೆಯ ಪೂರ್ಣನಾಶಕ್ಕೆ ಸೂಚನೆಯು । ನಾಯಿಯು ಅತ್ಯಂತ ಅಳುವಿನ ಧ್ವನಿಯಿಂದ ಕೂಗಿದರೆ ಅಥವಾ ಯಾವಾಗಲೇ ಆಗಲಿ ಕಾಗೆ ಮನೆಯೊಳಗೆ ಬಂದರೆ ॥

ಗೃಹಸ್ಥ ಮರಣಂ ವಿದ್ಯಾತ್ ಸರ್ವನಾಶೋ ಭವೇತ್ ಗೃಹೇ ।
ಏತೇಷಾಂ ದೋಷ ಜಾತಾನಾಂ ಶಾಂತಿಂ ವಕ್ಷ್ಯೇ ಸಮಾಸತಃ ।

ಆ ಮನೆಯ ಯಜಮಾನನ ಮರಣದ ಮತ್ತು ಆ ಮನೆಯ ಸರ್ವನಾಶದ ಸೂಚನೆಯಂದು ತಿಳಿಯಬೇಕು । ಈ ದೋಷಗಳ ಪರಿಹಾರಕ್ಕೆ ಶಾಂತಿಯನ್ನು ಹೇಳುತ್ತೇವೆ ॥

ಪ್ರವೇಶಸ್ಥಾನ ದೇಶೇಶು ದಕ್ಷಿಣೇ ವಾ ಗೃಹಾತ್ತತಃ ।
ಆಚಾರ್ಯಂ ವರಯೇದಾದೌ ಬ್ರಾಹ್ಮಣಂ ವೇದಪಾರಗಂ ।

ಪ್ರವೇಶಸ್ಥಾನಗಳಲ್ಲಿ ಅಥವ ಮನೆಯ ದಕ್ಷಿಣದಿಕ್ಕಿಗೆ । ವೇದಪಾರಂಗತನಾದ ಆಚಾರ್ಯನನ್ನು ಮೊದಲು ವರಣೆ ಮಾಡಿ ।

ವ್ರೀಹಿದ್ರೋಣೇತು ಸುಶ್ಲಕ್ಷ್ಣಂ ಸ್ಥಾಪಯೇತ್ ಅವ್ರಣಂಘಟಂ ।
ಪಂಚಪಲ್ಲವ ಸಂಯುಕ್ತಂ ಪಂಚಗವ್ಯ ಸಮನ್ವಿತಂ ।

1 ಬಕೇಟು ಭತ್ತವನ್ನು ಹರಡಿ ಅದರಮೇಲೆ 1 ಹೊಸದಾದ ಭಿನ್ನವಲ್ಲದ ಬಿಂದಿಗೆಯನ್ನು ಇಡಬೇಕು । 5 ಪಲ್ಲವ, ಗೋಮೂತ್ರವನ್ನು ಮತ್ತು ॥

ಪಂಚಗವ್ಯಸಮಾಯುಕ್ತಂ ಪೂರಯೇತ್ತೀರ್ಥ ವಾರಿಣಾ ।
ತಸ್ಯೋಪರಿನ್ಯಸೇತ್ ಪಾತ್ರೇ ಕಾಕರೂಪಂ ಶಚೀಪತಿಂ ।

ನೀರನ್ನು ತುಂಬಬೇಕು । ಅದರ ಮೇಲೆ 1 ಪಾತ್ರೆಯಲ್ಲಿ ಕಾಕರೂಪ ಇಂದ್ರನ ಪ್ರತಿಮೆಯನ್ನು ಇಡಬೇಕು ॥

ಕರ್ಷಮಾತ್ರ ಸುವರ್ಣೇನ ಪಾದೇನಾಥ ಸ್ವಶಕ್ತಿತಃ ।
ಯತ ಇಂದ್ರೇತಿ ಮಂತ್ರೇಣ ಅರ್ಚಯಿತ್ವಾತು ದೈವವಿತ್ ।

ಆ ಪ್ರತಿಮೆಯು 1 ತೊಲ ಚಿನ್ನದ್ದಾಗಿರಬೇಕು ಅಥವ ಯಥಾಶಕ್ತ ಪ್ರಮಾಣದ್ದಾಗಿರಬೇಕು । ದೈವಜ್ಞರಾದ ಶ್ರೋತ್ರಿಯರಾದವರಿಂದ ಯತ ಇಂದ್ರ ಮಂತ್ರದಿಂದ ಪೂಜಿಸಬೇಕು ॥

ಇಂದ್ರಾದೀಶಾನ ಪರ್ಯಂತಂ ಅರ್ಚಯೇತ್ ಲೋಕಪಾಲಕಾನ್ ।
ಕುಂಭಾಭಿಮಂತ್ರಣಂ ಕುರ್ಯಾತ್ ಶ್ರೀರುದ್ರಂ ಚ ಸ್ವಯಂ ಜಪೇತ್ ।

ದಿಕ್ಪಾಲಕರ ಪೂಜೆಯನ್ನೂ ಮಾಡಬೇಕು । ಕುಂಭದ ಅಭಿಮಂತ್ರಣವನ್ನು ಮಾಡಿ, ರುದ್ರಮಂತ್ರವನ್ನು ಹೇಳಬೇಕು ॥

ಸ್ವಗೃಹ್ಯೋಕ್ತ ವಿಧಿನಾ ಹೋಮಕರ್ಮ ಸಮಾಚರೇತ್ ।
ಯತ ಇಂದ್ರೇತಿ ಮಂತ್ರಾಭ್ಯಾಂ ಸಮಿದಾಜ್ಯ ಚರೂನ್ ಹುನೇತ್ ।

ತನ್ನ ಗೃಹ್ಯಸೂತ್ರಕ್ಕೆ ಅನುಗುಣವಾಗಿ ಹೋಮಾದಿಗಳನ್ನು ಮಾಡಬೇಕು । ಯತ ಇಂದ್ರ, ಸ್ವಸ್ತಿದಾ ಮಂತ್ರಗಳಿಂದ ಸಮಿತ್, ಆಜ್ಯ, ಚರುಗಳಿಂದ ಹೋಮಿಸಬೇಕು ॥

ಅಷ್ಟೋತ್ತರ ಸಹಸ್ರಂ ವಾ ಅಷ್ಟೋತ್ತರಶತಂ ತು ವಾ ।
ತ್ರ್ಯಂಬಕೇನ ಮಂತ್ರೇಣ ತಿಲಾನ್ ಅಷ್ಟಶತಂ ಹುನೇತ್ ।

1008 ಅಥವ 108 ಸಂಖ್ಯೆಗಳಿಂದ ಹೋಮಿಸಬೇಕು । ತ್ರ್ಯಂಬಕಮಂತ್ರದಿಂದ 800 ತಿಲಹೋಮ ಮಾಡಬೇಕು ॥

ಇದಂವಿಷ್ಣುಸ್ತು ಮಂತ್ರೇಣ ಲಾಜಹೋಮಂ ಸಮಾಚರೇತ್ ।
ಉಪಹೋಮಂ ತತಃ ಕೃತ್ವಾ ಮಹಾವ್ಯಾಹೃತಿಭಿಃ ಹುನೇತ್ ।

ಇದಂ ವಿಷ್ಣು ಮಂತ್ರದಿಂದ ಲಾಜಹೋಮ ಮಾಡಬೇಕು । ನಂತರ ಜಯಾದಿ ಉಪಹೋಮಗಳನ್ನೂ ಮಹಾವ್ಯಾಹೃತಿಗಳ ಹೋಮವನ್ನೂ ಮಾಡಬೇಕು ॥

ಇಂದ್ರಾಯಸ್ವಾಹಾ ವಾಯಸೋತ್ವಾತ ಶಮನಾಯಸ್ವಾಹಾ ಶಾಂತಾಯ ಸ್ವಾಹೇತಿ ।
ತತಸ್ಸ್ವಿಷ್ಟಕೃತಂ ಹುತ್ವಾ ಹೋಮಶೇಷಂ ಸಮಾಚರೇತ್ ।

ನಂತರ ಈ ಮೇಲಿನ 3 ಮಂತ್ರಗಳ ಹೋಮವನ್ನೂ ಸಹಾ ಮಾಡಬೇಕು । ಆಮೇಲೆ ಸ್ವಿಷ್ಟಕೃತ್ತನ್ನು ಮಾಡಿ ಹೋಮವನ್ನು ಸಮಾಪ್ತಿಗೊಳಿಸಬೇಕು ॥

ಸಂಪಾತೈರಭಿಷಿಕ್ತಸ್ತು ಗೋಯುಗ್ಮಂ ದಕ್ಷಿಣಾಂ ದಿಶೇತ್ ।
ಆಜ್ಯಾವಲೋಕನಂ ಕೃತ್ವಾ ಮಹಾಶಾಂತಿಂ ಪಠೇತ್ ತತಃ ॥

ಸಂಪಾತ ಆಜ್ಯದಿಂದ ಯಜಮಾನನಿಗೆ ಅಭಿಷೇಕ ಮಾಡಿ ಕರುಸಹಿತ 2 ಹಸುವನ್ನು ದಕ್ಷಿಣೆಯಾಗಿ ಕೊಡಬೇಕು । ನಂತರ ಆಜ್ಯದಲ್ಲಿ ತನ್ನ ಮುಖವನ್ನು ನೋಡಿಕೊಂಡು ನಂತರ ಮಹಾಶಾಂತಿ ಮಂತ್ರವನ್ನು ಹೇಳಬೇಕು ॥

******

ಈ ಗ್ರಂಥದ ಪ್ರಾಯೋಜಕರು :

ಅನ್ನದಾನವು ಕೆಲವು ಗಂಟೆಗಳು ಮಾತ್ರ ಮನುಷ್ಯನಿಗೆ ತೃಪ್ತಿ ತಂದರೆ,
ಜ್ಞಾನ ದಾನವು ಒಂದೆರಡು ತಲೆಮಾರುಗಳನ್ನೇ ಉದ್ಧರಿಸುತ್ತದೆ.
ಅಂತಹ ಜ್ಞಾನದ ರಕ್ಷಣೆಯನ್ನು ಮಾಡುತ್ತಿರುವ

ಶ್ರೀ ರಾಜೇಶ್ – ಸ್ನೇಹಲತಾ

ದಂಪತಿಗಳಿಗೆ ಭಗವಂತನ ಅಪೂರ್ವ ಅನುಗ್ರಹವು ಸದಾ ದೊರೆಯುತ್ತಿರಲಿ
ಎಂದು ಆಶಿಸುತ್ತೇವೆ.

ಶ್ರೀ ಚೈತನ್ಯ ಗುರುನಾಥ ಪ್ರಕಾಶನ
ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು

C/o. ಶ್ರೀ ಸುಬ್ರಹ್ಮಣ್ಯ ಪ್ರಸಾದ್‌ರವರು
ನಿಸರ್ಗ ಲೇಔಟ್, M.R.S. ಬೈಪಾಸ್ ರಸ್ತೆ,
ಶಿವಮೊಗ್ಗ–02. ಕರ್ನಾಟಕ
ಮೊ : 9686497982

₹ 140/-